ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 9 ಬುಧವಾರ 2025

ಸಂಪುಟ: 45 | ಸಂಚಿಕೆ: 349 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ದ್ವಿತೀಯ ಪಿಯು ಫಲಿತಾಂಶ ಪ್ರಕಟ; ಗ್ರೇಸ್ ಮಾರ್ಕ್ಸ್ ನೀಡದ ಕಾರಣ ತೇರ್ಗಡೆ ಪ್ರಮಾಣ ಕುಸಿತ

ಶೇ.73.45ರಷ್ಟು ಪಾಸ್; ಬಾಲಕಿಯರೇ ಮೇಲುಗೈ

- ಉಡುಪಿ, ದಕ್ಷಿಣ ಕನ್ನಡ, ಬೆಂಗಳೂರು ದಕ್ಷಿಣ, ಕೊಡಗು ಕ್ರಮವಾಗಿ ಮೊದಲ ನಾಲ್ಕು ಸ್ಥಾನ
- ವಿಜ್ಞಾನ ವಿಭಾಗದಲ್ಲಿ ದಕ್ಷಿಣ ಕನ್ನಡದ ಅಮೂಲ್ಯ ಕಾಮತ್, ತೀರ್ಥಹಳ್ಳಿಯ ಆರ್. ದೀಕ್ಷಾ, ವಾಣಿಜ್ಯ ವಿಭಾಗದಲ್ಲಿ ಮಂಗಳೂರು ದೀಪಶ್ರೀ, ಕಲಾ ವಿಭಾಗದಲ್ಲಿ ಸಂಜನಾ ಬಾಯಿ ಪ್ರಥಮ


ಅಮೂಲ್ಯ ಕಾಮತ್


ಆರ್.ದೀಕ್ಷಾ


ದೀಪಶ್ರೀ


ಸಂಜನಾ ಬಾಯಿ

ಬೆಂಗಳೂರು, ಏ. 8(ಕೆಎಂಶಿ)– ಸಿಸಿಟಿವಿ ಕಣ್ಗಾವಲಿನಲ್ಲಿ ಪರೀಕ್ಷೆ ನಡೆಸಿ, ಈ ಬಾರಿ ಯಾವುದೇ ಗ್ರೇಸ್‌ಮಾರ್ಕ್ಸ್ ನೀಡದ ಕಾರಣ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಭಾರಿ ಇಳಿಕೆ ಕಂಡಿದೆ.

ಕಳೆದ ಮಾರ್ಚ್‌ನಲ್ಲಿ ನಡೆದ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿದ್ದು, ಶೇಕಡ 73.45 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಎಂದಿನಂತೆ ಬಾಲಕಿಯರೇ ಮೇಲುಗೈ ಸಾಧಿಸಿರುವುದಲ್ಲದೆ, ಕಲೆ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳಲ್ಲಿ ಪ್ರಥಮ ಸ್ಥಾನಗಳನ್ನೂ ದೋಚಿಕೊಂಡಿದ್ದಾರೆ. ಈ ಬಾರಿ ಉಡುಪಿ, ದಕ್ಷಿಣ ಕನ್ನಡ, ಬೆಂಗಳೂರು ದಕ್ಷಿಣ, ಕೊಡಗು ಜಿಲ್ಲೆ ಕ್ರಮವಾಗಿ ಮೊದಲ ನಾಲ್ಕು ಸ್ಥಾನಗಳನ್ನು ಪಡೆದುಕೊಂಡಿವೆ.

ಪ್ರಸಕ್ತ ವರ್ಷ 6,37,805 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇವರಲ್ಲಿ 4,68, 439 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. 2,92,111 ಬಾಲಕರು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 1,99,227 ವಿದ್ಯಾರ್ಥಿಗಳು ತೇರ್ಗಡೆಗೊಂಡು ಶೇ.68.20 ಫಲಿತಾಂಶ ಬಂದಿದೆ. ಬಾಲಕಿಯರಲ್ಲಿ 3,45,694 ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 2,69,212 ಮಂದಿ ತೇರ್ಗಡೆಗೊಂಡಿದ್ದು, ಅಂದರೆ, ಶೇ.77.88 ರಷ್ಟು ಫಲಿತಾಂಶ ಬಂದಿದೆ.

ವಿಜ್ಞಾನ ವಿಭಾಗದಲ್ಲಿ ಶೇಕಡ 82.54, ವಾಣಿಜ್ಯ ಶೇ.76.07 ಹಾಗೂ ಕಲಾ ವಿಭಾಗದಲ್ಲಿ ಶೇ.53.29 ರಷ್ಟು ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ■ 6ನೇ ಪುಟಕ್ಕೆ

ಏ.24ರಿಂದ ಮೇ 8; ಜೂ.9ರಿಂದ 21ರವರೆಗೆ ಕ್ರಮವಾಗಿ ಪರೀಕ್ಷೆ–2, 3

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ದ್ವಿತೀಯ ಪಿಯುಸಿ ಪರೀಕ್ಷೆ 2ನ್ನು ಏಪ್ರಿಲ್ 24ರಿಂದ ಮೇ 8ರವರೆಗೆ, 3ನೇ ಪರೀಕ್ಷೆಯನ್ನು ಜೂನ್ 9ರಿಂದ 21 ರವರೆಗೆ ನಡೆಸಲಾಗುವುದು. ಈ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಯಾವುದೇ ಪರೀಕ್ಷಾ ಶುಲ್ಕ ವಿಧಿಸುವುದಿಲ್ಲ, ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡವರು ಹಾಗೂ ಪರೀಕ್ಷೆಗೆ ಹಾಜರಾಗಲು ಆಗದ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆ ಅವರು ಮನವಿ ಮಾಡಿದರು.

ಮೈಸೂರು ಜಿಲ್ಲೆಯ ಫಲಿತಾಂಶದಲ್ಲಿ ಸುಧಾರಣೆ

ಕಳೆದ ಬಾರಿ 17, ಈ ಬಾರಿ 12ನೇ ಸ್ಥಾನ; ಶೇ.74.3ರಷ್ಟು ತೇರ್ಗಡೆ

ಮೈಸೂರು, ಏ.8(ಎಂಟಿವೈ)– ದ್ವಿತೀಯ ಪಿಯುಸಿಯಲ್ಲಿ ಮೈಸೂರು ಜಿಲ್ಲೆ ಶೇ.74.3ರಷ್ಟು ಫಲಿತಾಂಶದೊಂದಿಗೆ ರಾಜ್ಯದಲ್ಲಿ 12ನೇ ಸ್ಥಾನ ಪಡೆದುಕೊಂಡಿದೆ.

ಪಿಯುಸಿ ಫಲಿತಾಂಶ ಸುಧಾರಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮದಿಂದಾಗಿ ಕಳೆದ ಸಾಲಿನಲ್ಲಿ 17ನೇ ಸ್ಥಾನದಲ್ಲಿದ್ದ ಮೈಸೂರು ಜಿಲ್ಲೆಯ ಫಲಿತಾಂಶ ಈ ಬಾರಿ 12ನೇ ಸ್ಥಾನಕ್ಕೆ ಏರುವ ಮೂಲಕ ಸುಧಾರಣೆ ಕಂಡಿದೆ. ಮಾ.1ರಿಂದ 20ರವರೆಗೆ ಮೈಸೂರು ನಗರದ 20 ಸೇರಿದಂತೆ ಜಿಲ್ಲೆಯಲ್ಲಿ 50 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ದ್ವಿತೀಯ ಪಿಯು ಪರೀಕ್ಷೆಯಲ್ಲಿ 31,610 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅದರಲ್ಲಿ 23,485 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಬಾಲಕಿಯರೇ ಮೇಲುಗೈ: ಜಿಲ್ಲೆಯಲ್ಲಿ 15,733 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅವರಲ್ಲಿ 9635 (ಶೇ.61.24) ಮಂದಿ ತೇರ್ಗಡೆಯಾಗಿದ್ದಾರೆ. ಪರೀಕ್ಷೆ ಬರೆದ 18,491 ವಿದ್ಯಾರ್ಥಿನಿಯರಲ್ಲಿ 14,323 (ಶೇ.77.46) ಮಂದಿ ತೇರ್ಗಡೆಯಾಗಿದ್ದಾರೆ.

ವಿಷಯುವಾರು ಫಲಿತಾಂಶ: ಜಿಲ್ಲೆಯಲ್ಲಿ ಕಲಾ ವಿಭಾಗದಲ್ಲಿ 6794 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ ಶೇ.57.62ರ ಪ್ರಮಾಣದಲ್ಲಿ 3915 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆ ಬರೆದ 10,941 ವಿದ್ಯಾರ್ಥಿಗಳಲ್ಲಿ 8206 ವಿದ್ಯಾರ್ಥಿಗಳು ಪಾಸಾಗಿದ್ದು, ಶೇ.75 ರಷ್ಟು ಫಲಿತಾಂಶ ದಾಖಲಾಗಿದೆ ವಿಜ್ಞಾನ ವಿಭಾಗದಲ್ಲಿ 13,875 ಮಂದಿ ಪರೀಕ್ಷೆ ಬರೆದಿದ್ದರು. ಅವರಲ್ಲಿ ಶೇ.74.3ರ ಸರಾಸರಿಯಲ್ಲಿ 11,364 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಕುತೂಹಲಿಗಳಾದ ವಿದ್ಯಾರ್ಥಿಗಳು: ದ್ವಿತೀಯ ಪಿಯುಸಿ ಫಲಿತಾಂಶ ನೋಡುವುದಕ್ಕೆ ವಿದ್ಯಾರ್ಥಿಗಳು ■ 6ನೇ ಪುಟಕ್ಕೆ

ಮೈಸೂರಿನ 2ನೇ ಟಾಪರ್ ಧಾತ್ರಿ



ಮೈಸೂರು, ಏ.8(ಎಂಟಿವೈ)– ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಧಾತ್ರಿ ಜಿ. ವಾಣಿಜ್ಯಶಾಸ್ತ್ರ ವಿಷಯದಲ್ಲಿ 600ಕ್ಕೆ 596 ಅಂಕಗಳನ್ನು ಪಡೆದು ರಾಜ್ಯದಲ್ಲಿ 10ನೇ ಸ್ಥಾನ ಹಾಗೂ ಮೈಸೂರು ಜಿಲ್ಲೆಗೆ 2ನೇ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಗಣಿತದಲ್ಲಿ 99, ಅಕೌಂಟ್ಸ್‌ನಲ್ಲಿ 99, ಇಂಗ್ಲಿಷ್ 98, ಕನ್ನಡ, ಸಂಖ್ಯಾಶಾಸ್ತ್ರ, ಬಿಸಿನೆಸ್ ಸ್ಟಡೀಸ್ 100ಕ್ಕೆ 100 ಅಂಕಗಳನ್ನು ಪಡೆದಿದ್ದಾಳೆ. ಇವರು ಮೈಸೂರು ಆಕಾಶವಾಣಿ ಉದ್ಯೋಗಿಯಾದ ಗುರುರಾಜ್ ಮತ್ತು ಅಪರ್ಣಾ ದಂಪತಿಯ ಪುತ್ರಿ. ಪ್ರಸ್ತುತ ಬೆಂಗಳೂರಿನಲ್ಲಿ ವಾಸವಿದ್ದು, ಸದ್ವಿದ್ಯಾ ವಸತಿ ಶಾಲೆಯಲ್ಲಿ ಓದಿ ಈ ಸಾಧನೆ ಮಾಡಿದ್ದಾರೆ. ಈ ವೇಳೆ ಧಾತ್ರಿ ಮಾತನಾಡಿ, ಪ್ರತಿ ನಿತ್ಯ 6 ರಿಂದ 7 ಗಂಟೆ ಅಭ್ಯಾಸ ಮಾಡುತ್ತಿದ್ದೆ. ಟ್ಯೂಷನ್‌ಗೆ ಎಲ್ಲೂ ಹೋಗಿಲ್ಲ. ತರಗತಿಯಲ್ಲಿ ಶಿಕ್ಷಕರು ಪಾಠ ಮಾಡಿದ್ದನ್ನೇ ಪುನರ್ ಅಧ್ಯಯನ ಮಾಡುತ್ತಿದ್ದೆ. ಮುಂದೆ ಸಿಎ ಮಾಡುವ ಗುರಿ ಹೊಂದಿರುವುದಾಗಿ ಸಂತಸ ಹಂಚಿಕೊಂಡಳು.


ಸಂಗೀತ. ಎಸ್


ಹರ್ಷಿಣಿ ಕೆ.


ಅನಘ


ಸುದೀಕ್ಷಾ

ಜಿಲ್ಲೆಯ ಟಾಪ್ 10 ವಿದ್ಯಾರ್ಥಿಗಳು

ವಿಜ್ಞಾನ ವಿಭಾಗ: 11,364 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರೂ ಗರಿಷ್ಠ ಅಂಕ 600ಕ್ಕೆ 594 ಅಂಕ ಪಡೆದ ಸರಸ್ವತಿಪುರಂ ಎಸ್‌ವಿಐಸಿ ಜ್ಞಾನೋದಯ ಪಿಯು ಕಾಲೇಜಿನ ಅನಘ ಎಸ್ ಕಾರ್ನಿಸ್ 594, ಆದಿಚುಂಚನಗಿರಿ ಕಾಲೇಜಿನ ಸಂಗೀತಾ ಎಸ್. 594 ಅಂಕ ಪಡೆದು ಜಿಲ್ಲೆಗೆ ಪ್ರಥಮ, ಎಂಎಂಕೆ, ಎಸ್‌ಡಿಎಂ ಕಾಲೇಜಿನ ನಾಫಿಯಾ ನೂರ್ 593, ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಕಾಲೇಜಿನ ಸುದೀಕ್ಷ ಎಂ. 593 ಅಂಕ ಪಡೆದು ದ್ವಿತೀಯ, ಸಿಟಿಜನ್ ಪಿಯು ಕಾಲೇಜಿನ ಜಿ.ಪಿ. ದರ್ಶನ್ 592, ಲಕ್ಷ್ಮೀ ಹಯಗ್ರೀವ ಕಾಲೇಜಿನ ಉನ್ನತಿ ಎಂ.ಮೇದಪ್ಪ 592, ಸದ್ವಿದ್ಯಾ ಕಾಲೇಜಿನ ವರ್ಷಾ ಬಿ ಪಾಟೀಲ್ 592, ಬೇಸ್ ಪಿಯು ಕಾಲೇಜಿನ ವಾರುಣಿ ರಮೇಶ್ 592 ಅಂಕ ಪಡೆದು ಮೂರನೇ ಸ್ಥಾನ ಪಡೆದಿದ್ದಾರೆ. ಬೇಸ್ ಪಿಯು ಕಾಲೇಜಿನ ದಿಗಂತ್ ಬಿ. 591 ಹಾಗೂ ಶೇಷಾದ್ರಿಪುರಂ ಕಾಲೇಜಿನ ಲಿಖಿತಾ ಬಿ.ಆರ್. 591 ಅಂಕ ಪಡೆದು ಜಿಲ್ಲೆಯ ಟಾಪ್ ಟೆನ್ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ವಾಣಿಜ್ಯ ವಿಭಾಗ: ವಾಣಿಜ್ಯ ವಿಭಾಗದಲ್ಲಿ 8206 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಅವರಲ್ಲಿ ಹೆಚ್ಚಿನ ಅಂಕ ಪಡೆದ ಟಾಪ್‌ಟೆನ್ ವಿದ್ಯಾರ್ಥಿಗಳಲ್ಲಿ ಪಿರಿಯಾಪಟ್ಟಣದ ಭಾರತ್ ಮಾತಾ ಪಿಯು ಕಾಲೇಜಿನ ತೇಜಸ್ವಿನಿ ಎಂ.ಕೆ 598 ಅಂಕ ಪಡೆದು ರಾಜ್ಯದಲ್ಲೇ ದ್ವಿತೀಯ ಹಾಗೂ ಜಿಲ್ಲೆಗೆ ಮೊದಲ ಸ್ಥಾನ ಪಡೆದಿದ್ದಾರೆ. ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಕಾಲೇಜಿನ ಧಾತ್ರಿ.ಜಿ. 596, ಬಿಜಿಎಸ್ ಬಾಲಕಿಯರ ಕಾಲೇಜಿನ ಹರ್ಷಿಣಿ ಕೆ. 594, ■ 6ನೇ ಪುಟಕ್ಕೆ

ಮರು ಮೌಲ್ಯಮಾಪನ; ಮರು ಎಣಿಕೆ

ಮೈಸೂರು, ಏ.8– ದ್ವಿತೀಯ ಪಿಯುಸಿ ಪರೀಕ್ಷೆ–1ರ ಫಲಿತಾಂಶಗಳನ್ನು ಆಯಾ ಕಾಲೇಜುಗಳಿಗೆ ಕೆಎಸ್‌ಇಎಬಿ ಪಿಯು ಪರೀಕ್ಷಾ ಪೋರ್ಟಲ್ ಮೂಲಕ ಲಭ್ಯವಾಗುವಂತೆ ಮಾಡಲಾಗಿದೆ. ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಗಳ ಸ್ಕ್ಯಾನ್ ಮಾಡಿದ ಪ್ರತಿಗಳಿಗೆ ಏಪ್ರಿಲ್ 8ರಿಂದ ಏಪ್ರಿಲ್ 13ರವರೆಗೆ ಅರ್ಜಿ ಸಲ್ಲಿಸಬಹುದು. ಈ ಪ್ರತಿಗಳನ್ನು ಏಪ್ರಿಲ್ 12ರಿಂದ ಏಪ್ರಿಲ್ 16, 2025ರ ನಡುವೆ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮರುಮೌಲ್ಯಮಾಪನ ಮತ್ತು ಮರು ಎಣಿಕೆಗೆ ಅರ್ಜಿ ಸಲ್ಲಿಸುವ ಸಮಯ ಏಪ್ರಿಲ್ 12ರಿಂದ ಏಪ್ರಿಲ್ 17ರವರೆಗೆ ತೆರೆದಿರುತ್ತದೆ, ಸ್ಕ್ಯಾನ್ ಮಾಡಿದ ಪ್ರತಿಯನ್ನು ಪಡೆಯಲು ಪ್ರತಿ ವಿಷಯಕ್ಕೆ 530 ರೂ. ಮರು ಮೌಲ್ಯಮಾಪನಕ್ಕೆ ಪ್ರತಿ ವಿಷಯಕ್ಕೆ 1,670 ರೂ ಪಾವತಿಸಬೇಕು. ■ 6ನೇ ಪುಟಕ್ಕೆ

ಪಿ.ಪಟ್ಟಣದ ತೇಜಸ್ವಿನಿ ರಾಜ್ಯಕ್ಕೆ 2ನೇ ಟಾಪರ್



ಮೈಸೂರು, ಏ.8(ಎಂಟಿವೈ)– ಪಿರಿಯಾ ಪಟ್ಟಣದ ಭಾರತ್ ಮಾತಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ತೇಜಸ್ವಿನಿ ಎಂ.ಎ. 600ಕ್ಕೆ 598 ಅಂಕಗಳನ್ನು ಪಡೆದು ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ 2ನೇ ಮತ್ತು ಮೈಸೂರು ಜಿಲ್ಲೆಯ ಟಾಪರ್ ಆಗಿದ್ದಾರೆ.

ಐದು ವಿಷಯದಲ್ಲಿ 100ಕ್ಕೆ 100 ಪೂರ್ಣ ಅಂಕ, ಇಂಗ್ಲಿಷ್‌ನಲ್ಲಿ 98 ಅಂಕ ಪಡೆದಿದ್ದಾರೆ. ಕುಶಾಲನಗರ ನಿವಾಸಿಯಾದ ಡಿಆರ್ ಎಫ್ ಆನಂದ ಮತ್ತು ಸುಜಾತ ದಂಪತಿ ಪುತ್ರಿಯಾದ ತೇಜಸ್ವಿನಿ ಎಂ.ಎ ಶೇ. 99 ಅಂಕಗಳೊಂದಿಗೆ ತೇರ್ಗಡೆಯಾಗಿದ್ದಾರೆ. ಹೆಚ್ಚು ಅಂಕ ಪಡೆದ ಸಂಭ್ರಮ ದಲ್ಲಿ 'ಮೈಸೂರು ಮಿತ್ರ'ನೊಂದಿಗೆ ತೇಜಸ್ವಿನಿ ಮಾತನಾಡಿ, ಕಾಲೇಜಿನಲ್ಲಿ ಕಲಿಸಿದ ಅಂದಿನ ಪಾಠ ಅಂದೇ ರಾತ್ರಿ ಮನೆಯಲ್ಲೂ ಓದುತ್ತಿದ್ದೆ. ಟ್ಯೂಷನ್‌ಗೆ ಹೋಗುತ್ತಿರಲಿಲ್ಲ. ಸ್ವಯಂ ಅಭ್ಯಾಸ ಮಾಡಿದೆ. ಪರೀಕ್ಷೆ 3 ತಿಂಗಳು ಇರುವಾಗ ಮುಂಜಾನೆ ಬೇಗ ಎದ್ದು ಓದುತ್ತಿದ್ದೆ. ಸಿಎ ಮಾಡುವ ಗುರಿ ಹೊಂದಿದ್ದೇನೆ ಎಂದು ತಿಳಿಸಿದಳು.

ಇನ್ಮುಂದೆ ವಿಧಾನಸೌಧ ವೀಕ್ಷಣೆಗೂ ಶುಲ್ಕ



ಬೆಂಗಳೂರು, ಏ.8– ಆಡಳಿತ ಶಕ್ತಿಕೇಂದ್ರ ವಿಧಾನಸೌಧಕ್ಕೆ ಶಾಶ್ವತ ವಿದ್ಯುತ್ ದೀಪಾಲಂಕಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಲೋಕಾರ್ಪಣೆಗೊಳಿಸಿದ ಬೆನ್ನಲ್ಲೇ ವಿಧಾನಸೌಧವನ್ನು ಪ್ರವಾಸಿ ತಾಣವಾಗಿ ಮಾಡಲು ಸರ್ಕಾರ ನಿರ್ಧರಿಸಿದೆ.

ಪ್ರವಾಸೋದ್ಯಮ ಇಲಾಖೆಯ ಮನವಿ ಮೇರೆಗೆ ಸರ್ಕಾರ ಷರತ್ತುಬದ್ಧ ಅನುಮತಿ ನೀಡಿದೆ. ನಿರ್ದಿಷ್ಟ ಪ್ರವೇಶ ಶುಲ್ಕ ನೀಡಿ ಪ್ರವಾಸಿಗರು ವಿಧಾನಸೌಧ ನೋಡಲು ವ್ಯವಸ್ಥೆ ಮಾಡಲಾಗುತ್ತಿದೆ.


ವಿಧಾನಸೌಧ ಪ್ರವೇಶಕ್ಕೆ ಶುಲ್ಕ: ಸಾರ್ವತ್ರಿಕ ರಜಾ ದಿನಗಳಂದು ಮಾತ್ರ ಬೆಳಿಗ್ಗೆ 8.00 ರಿಂದ ಸಂಜೆ 6.00 ರವರೆಗೆ ವಿಧಾನಸೌಧದ ವೀಕ್ಷಣೆಗೆ ಅವಕಾಶ ಇರಲಿದೆ. ಇದಕ್ಕಾಗಿ 'Guided Tour' ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

Guided Tourಗೆ ಅನುವಾಗುವಂತೆ ಪ್ರವಾಸಿಗರು Online ಮುಖಾಂತರ ticket ಪಡೆಯಲು ಪ್ರವಾಸೋದ್ಯಮ ಇಲಾಖೆಯಿಂದ ತಂತ್ರಾಂಶ ಅಭಿವೃದ್ಧಿಪಡಿಸಲಾಗುತ್ತಿದೆ. ■ 6ನೇ ಪುಟಕ್ಕೆ

ಬಾಟಲ್ ನೀರು ಆರೋಗ್ಯಕ್ಕೆ ಮಾರಕ

- ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಎಚ್ಚರಿಕೆ
- ಕೇಸರಿ ಮಿಶ್ರಿತ ತೊಗರಿಬೇಳೆ ಬಳಕೆ ಪಾರ್ಶ್ವವಾಯು, ಅಂಗವೈಕಲ್ಯ, ಕ್ಯಾನ್ಸರ್‌ಗೆ ಕಾರಣ
- ಜೇನುತುಪ್ಪದಲ್ಲೂ ರಾಸಾಯನಿಕ ಮಿಶ್ರಣ ಪತ್ತೆ; ಪೇಪರ್ ಲೋಟದಲ್ಲಿ ಕಾಫಿ, ಟೀ ಕುಡಿದರೂ ಆಪತ್ತು





ಬೆಂಗಳೂರು, ಏ. 8(ಕೆಎಂಶಿ)– ಖನಿಜಯುಕ್ತ ಬಾಟಲ್ ನೀರು ಆರೋಗ್ಯಕ್ಕೆ ಮಾರಕ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಇಂದಿಲ್ಲಿ ಎಚ್ಚರಿಸಿದ್ದಾರೆ.

ಕೇಸರಿ ಮಿಶ್ರಿತ ತೊಗರಿಬೇಳೆ ಬಳಕೆ ಮಾಡಿದರೆ ಪಾರ್ಶ್ವವಾಯು, ಅಂಗವೈಕಲ್ಯ ಮತ್ತು ಕ್ಯಾನ್ಸರ್‌ನಂತಹ ಗಂಭೀರ ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ.

ಹಾಗೆಯೇ ಹಸಿರು ಬಟಾಣಿ ಸೇವನೆಗೂ ಮುನ್ನ ಎಚ್ಚರ ವಹಿಸಿ, ಕೃತಕ ಬಣ್ಣ ಮಿಶ್ರಿತ ಬಟಾಣಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಇದನ್ನು ನಿಷೇಧಿಸಲಾಗುವುದು ಎಂದು ತಿಳಿಸಿದ್ದಾರೆ.

ಕೆಲವು ಕಂಪನಿಗಳ ಜೇನುತುಪ್ಪದಲ್ಲೂ ರಾಸಾಯನಿಕ ಬಳಕೆಯಾಗುತ್ತಿದೆ, ಪೇಪರ್ ಲೋಟ ಬಳಕೆಯಿಂದಲೂ ಕ್ಯಾನ್ಸರ್‌ಗೆ ತುತ್ತಾಗುವ ಸಾಧ್ಯತೆ ಇದೆ, ಈ ಲೋಟಗಳಲ್ಲಿ ಬಿಸಿಯಾದ ಕಾಫಿ, ನೀರು ಕುಡಿದರೆ ಪ್ಲಾಸ್ಟಿಕ್ ಕರಗಿ ಮನುಷ್ಯನ ದೇಹದಲ್ಲಿ ಸೇರಿ ಕ್ಯಾನ್ಸರ್‌ಗೆ ಎಡೆಮಾಡಿಕೊಡುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಆಹಾರ ಇಲಾಖೆ ಈ ಎಲ್ಲಾ ವಸ್ತುಗಳ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಿದಾಗ ಬಾಟಲ್‌ನಲ್ಲಿ ಖನಿಜಯುಕ್ತ ■ 6ನೇ ಪುಟಕ್ಕೆ

ಪಿಯುಸಿ ಫೇಲ್: ವಿದ್ಯಾರ್ಥಿನಿ ನೇಣಿಗೆ ಶರಣು



ಮೈಸೂರು, ಏ. 8(ಆರ್‌ಕೆ)– ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣಳಾದ ಕಾರಣ ಮನನೊಂದು ವಿದ್ಯಾರ್ಥಿನಿಯೊಬ್ಬಳು ಡೆತ್‌ನೋಟ್ ಬರೆದಿಟ್ಟು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಕಲಾಮಂದಿರ ಕ್ವಾರ್ಟರ್ಸ್‌ನಲ್ಲಿ ಇಂದು ಮಧ್ಯಾಹ್ನ ಸಂಭವಿಸಿದೆ.

ಮಂಜುಳಾರವರ ಪುತ್ರಿ ಐಶ್ವರ್ಯ (17) ನೇಣಿಗೆ ಶರಣಾದ ವಿದ್ಯಾರ್ಥಿನಿ. ಮೈಸೂರಿನ ಒಂಟಿಕೊಪ್ಪಲ್‌ನಲ್ಲಿರುವ ಸರ್ಕಾರಿ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದ ಐಶ್ವರ್ಯ, ಒಂದು ವಿಷಯದಲ್ಲಿ ಅನುತ್ತೀರ್ಣಳಾಗಿದ್ದಳು.

ಅದರಿಂದ ಮನನೊಂದ ಆಕೆ, 'ಅಮ್ಮ ನನ್ನನ್ನು ಕ್ಷಮಿಸಿಬಿಡಿ. ನಾನು ನಿಮ್ಮ ಆಸೆಯನ್ನು ಪೂರೈಸಲು ಸಾಧ್ಯವಾಗದ ಕಾರಣ, ಇಹಲೋಕ ತ್ಯಜಿಸಿರುವ ತಂದೆಯ ಬಳಿಗೆ ಹೋಗುತ್ತಿದ್ದೇನೆ' ಎಂದು ಡೆತ್‌ನೋಟ್ ಬರೆದಿಟ್ಟು ಮನೆಯಲ್ಲೇ ಮಧ್ಯಾಹ್ನ 2.30 ರಿಂದ 3 ಗಂಟೆಯೊಳಗೆ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ದೇವರಾಜ ಠಾಣೆಯಲ್ಲಿ ಇನ್‌ಸ್ಪೆಕ್ಟರ್ ರಘು ಹಾಗೂ ಸಿಬ್ಬಂದಿ ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಂಡ್ಯದಲ್ಲಿ ಬಿಜೆಪಿ ಜನಾಕ್ರೋಶ

- ಸಿದ್ದರಾಮಯ್ಯ ಸರ್ಕಾರ ಹಿಂದುಳಿದ, ದಲಿತ ಸಮುದಾಯಗಳ ವಿರೋಧಿ
- ಬಿಜೆಪಿ ಜನಾಂದೋಲನ ಯಾತ್ರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿ


ಮಂಡ್ಯದಲ್ಲಿ ರಾಜ್ಯ ಸರ್ಕಾರದ ಬೆಲೆ ಏರಿಕೆಯನ್ನು ಖಂಡಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ಮುಖಂಡರು ಮತ್ತು ಕಾರ್ಯಕರ್ತರು ಜನಾಕ್ರೋಶ ಯಾತ್ರೆ ನಡೆಸಿದರು.

ಮಂಡ್ಯ, ಏ.8– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಹಿಂದುಳಿದ, ದಲಿತ ಸಮುದಾಯಗಳ ಕ್ಷೇಮಾಭಿವೃದ್ಧಿ ಮರೆತು ಮುಸ್ಲಿಮರ ಓಲೈಕೆಗೆ ಮುಂದಾಗಿದೆ. ಮತಕೊಟ್ಟ ಹಿಂದೂಗಳನ್ನು ಸಂಪೂರ್ಣ ಮರೆತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದರು.

ಮಂಗಳವಾರ ನಗರದ ಸರ್‌ಎಂವಿ ಪ್ರತಿಮೆ ಬಳಿ ನಡೆದ ಬಿಜೆಪಿ ಜನಾಕ್ರೋಶ ಯಾತ್ರೆಯ ರ್‍ಯಾಲಿಯಲ್ಲಿ ಮಾತನಾಡಿದ ಅವರು, ಸರ್ಕಾರ ಅಧಿಕಾರಕ್ಕೆ ಬಂದು 20 ತಿಂಗಳಾಗಿದೆ. ಅಲ್ಪ ಅವಧಿಯಲ್ಲಿ 50ಕ್ಕೂ ಹೆಚ್ಚು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದೆ. ಪೆಟ್ರೋಲ್ ದರ ಏರಿಕೆಯಾಗಿದೆ ಎಂದು ಕೇಂದ್ರ ಸರ್ಕಾರದ ಮೇಲೆ ಬೊಟ್ಟು ಮಾಡುವ ಸಿದ್ದರಾಮಯ್ಯ, ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಜನರ ಆಕ್ರೋಶಕ್ಕೆ ತುತ್ತಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಧಿಕಾರಕ್ಕೇರಲು ಜನರಿಗೆ ಸುಳ್ಳು ಭರವಸೆಗಳನ್ನು ನೀಡಿ, ಅಧಿಕಾರಕ್ಕೇರಿದ ಬಳಿಕ ಜನರ ನಿರೀಕ್ಷೆಯನ್ನು ಹುಸಿಗೊಳಿಸಿದ್ದಾರೆ. ಬಡವರು, ದಲಿತರು, ಹಿಂದುಳಿದ ವರ್ಗದವರು ಸರ್ಕಾರದ ಮೇಲಿಟ್ಟಿದ್ದ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಎಂದು ಆರೋಪಿಸಿದರು.

ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳು ಹೊರದೇಶದಲ್ಲಿ ವಿದ್ಯಾಭ್ಯಾಸ ಮಾಡಲು ಹೆಚ್ಚಿನ ಹಣ ಮೀಸಲಿಟ್ಟಿದ್ದಾರೆ. ಸರ್ಕಾರದ ಗುತ್ತಿಗೆಯಲ್ಲಿ ಶೇ.4ರಷ್ಟು ಮೀಸಲಾತಿ ನೀಡಲಾಗಿದೆ. ಹಾಗಾದರೆ ಹಿಂದೂ ಸಮುದಾಯದ ಗುತ್ತಿಗೆದಾರರು ಎಲ್ಲಿಗೆ ಹೋಗಬೇಕು. ಈ ಸರ್ಕಾರ ಅಲ್ಪಸಂಖ್ಯಾತ ತುಷ್ಟೀಕರಣದ ಹೆಸರಿನಲ್ಲಿ ಹಿಂದೂಗಳಿಗೆ ಅಪಮಾನ ಮಾಡುತ್ತಿದೆ ಎಂದು ದೂರಿದರು.

ರಾಜ್ಯ ಸರ್ಕಾರ ಅಭಿವೃದ್ಧಿಯಲ್ಲಿ ಹಿಂದೆ ಉಳಿದಿದೆ ಎಂದು ಕೊಡಗು ಜಿಲ್ಲೆಯ ಅಭಿವೃದ್ಧಿ ವಿಚಾರದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ರವಾನಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತನ ಮೇಲೆ ಎಫ್‌ಐಆರ್ ದಾಖಲು ಮಾಡಿ ಮಾನಸಿಕ ಹಿಂಸೆ ನೀಡಿ ಆತನ ಆತ್ಮಹತ್ಯೆಗೆ ಸರ್ಕಾರ ಪರೋಕ್ಷ ಕಾರಣವಾಗಿದೆ. ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ಸಂಬಳ ಕೊಡಲು ಆಗುತ್ತಿಲ್ಲ. ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ■ 6ನೇ ಪುಟಕ್ಕೆ

ಹಾಸನ ಮಿತ್ರ

ನಾಳೆ ಮಹಾವೀರರ ಜನ್ಮ ಕಲ್ಯಾಣ ಕಾರ್ಯಕ್ರಮ



ಶ್ರವಣಬೆಳಗೊಳ: ಭಗವಾನ್ ಮಹಾವೀರರ 2,624ನೇ ಜನ್ಮ ಕಲ್ಯಾಣದ ಅಭಿಷೇಕ, ಧಾರ್ಮಿಕ ಕಾರ್ಯಕ್ರಮ ಏ.10ರಂದು ಜೈನ ಮಠದ ಮುಂಭಾಗದ ಚಾವುಂಡರಾಯ ಸಭಾ ಮಂಟಪದಲ್ಲಿ ಜರುಗಲಿದೆ ಎಂದು ಜೈನ ಮಠದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, 'ಕಾರ್ಯಕ್ರಮವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಉದ್ಘಾಟಿಸಲಿದ್ದಾರೆ. ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ, ಸಚಿವರಾದ ಎಚ್.ಕೆ.ಪಾಟೀಲ, ರಾಮಲಿಂಗಾರೆಡ್ಡಿ, ಡಿ.ಸುಧಾಕರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಶಾಸಕ ಸಿ.ಎನ್.ಬಾಲಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ವಿಶೇಷ ಆಹ್ವಾನಿತರಾಗಿ ಸಂಸದ ಶ್ರೇಯಸ್ ಪಟೇಲ್, ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ವಿಧಾನಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಮಾಜಿ ಸದಸ್ಯ ಗೋಪಾಲಸ್ವಾಮಿ, ಸ್ಥಳೀಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಫ್ತಾಬ್ ಪಾಷಾ ಭಾಗವಹಿಸಲಿದ್ದಾರೆ ಎಂದರು.

ಭಗವಾನ್ ನೇಮಿನಾಥ ತೀರ್ಥಂಕರರ ವಾರ್ಷಿಕ ಪಂಚಕಲ್ಯಾಣ ಮಹಾರಥೋತ್ಸವ ಏ.12ರಂದು ಜರುಗಲಿದೆ ಎಂದರು. ಉತ್ತರ ಭಾರತದವರು ಮಹಾಕುಂಭಮೇಳವನ್ನು ಹೇಗೆ ಆಚರಿಸುತ್ತಾರೋ ಅದೇ ರೀತಿಯಲ್ಲಿ 12 ವರ್ಷಕ್ಕೊಮ್ಮೆ ದಕ್ಷಿಣ ಭಾರತದಲ್ಲಿ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ನೆರವೇರುತ್ತದೆ ಎಂದು ಹೇಳಿದರು.

ಕಂದಾಯ ಕಟ್ಟದ ಅಂಗಡಿಗಳಿಗೆ ಬೀಗ

ಬೇಲೂರು: ಕಂದಾಯ ಕಟ್ಟದೆ ಬಾಕಿ ಉಳಿಸಿಕೊಂಡಿರುವ ಅಂಗಡಿ, ಮಳಿಗೆಗಳಿಗೆ ಬೀಗ ಹಾಕಲಾಯಿತು.



ನೇತೃತ್ವ ವಹಿಸಿದ್ದ ಪುರಸಭೆ ಅಧ್ಯಕ್ಷ ಎ.ಆರ್.ಅಶೋಕ್ ಮಾತನಾಡಿ, 'ಪುರಸಭೆಗೆ ಅಂದಾಜು 2 ಕೋಟಿಗಳಷ್ಟು ಕಂದಾಯ ಬರಬೇಕಿದ್ದು, ಕಂದಾಯ ಉಳಿಸಿಕೊಂಡಿರುವವರ ಹಾಗೂ ಲೈಸೆನ್ಸ್ ಪಡೆಯದೇ ವ್ಯಾಪಾರ ನಡೆಸುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು. ಪಟ್ಟಣದ ಅಭಿವೃದ್ಧಿಗೆ ಕಂದಾಯ ಅತಿ ಮುಖ್ಯವಾಗಿದ್ದು, ಸಾರ್ವಜನಿಕರು ತಪ್ಪದೇ ಕಂದಾಯ ಪಾವತಿಸಿ ಪಟ್ಟಣದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು. ಪುರಸಭೆ ಆರೋಗ್ಯಾಧಿಕಾರಿ ಲೋಹಿತ್, ಕಂದಾಯ ನಿರೀಕ್ಷಕ ಪ್ರಸನ್ನ, ಕರ ವಸೂಲಿಗಾರರಾದ ಮೊಹನೇಶ್, ಸಲ್ಮಾನ್, ಜಯರಾಂ, ಕಾಂಗ್ರೆಸ್ ಮುಖಂಡರಾದ ತೌಫಿಕ್, ಸತೀಶ್ ಹಾಗೂ ಪುರಸಭೆ ಸಿಬ್ಬಂದಿ ಇದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ

ಲೋಕಾಯುಕ್ತ ಬಿ ರಿಪೋರ್ಟ್ ವಜಾ ಮಾಡಿ; ನಮ್ಮ ತಕರಾರು ಪರಿಗಣಿಸಿ

ನ್ಯಾಯಾಲಯದಲ್ಲಿ ಇಡಿ ಪರ ವಕೀಲ ಮಧುಕರ್ ದೇಶಪಾಂಡೆ ವಾದ ಮಂಡನೆ

ಬೆಂಗಳೂರು, ಏ.8(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದಲ್ಲಿ ಬಿ ರಿಪೋರ್ಟ್ ಸಲ್ಲಿಸಿರುವ ಲೋಕಾಯುಕ್ತ ವರದಿಯನ್ನು ಪುರಸ್ಕರಿಸದಂತೆ ಇಡಿ (ಜಾರಿ ನಿರ್ದೇಶನಾಲಯ) ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಇಂದು ಮನವಿ ಮಾಡಿತು.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರಿದ್ದ ಪೀಠದಲ್ಲಿ ಇಡಿ ಪರವಾಗಿ ಮಧುಕರ್ ದೇಶಪಾಂಡೆ ಇಂದು ವಾದ ಮಂಡಿಸಿದರು.

ಲೋಕಾಯುಕ್ತರು ಸಲ್ಲಿಸಿರುವ ಬಿ ರಿಪೋರ್ಟ್‌ಗೆ ನಾವು ತಕರಾರು ಅರ್ಜಿ ಸಲ್ಲಿಸಲು ಬಹಳಷ್ಟು ಅಂಶಗಳಿವೆ. ಆರೋಪಿಗಳಿಗೆ ಶಿಕ್ಷೆ ನೀಡುವಂತಹ ಅಪರಾಧ ಕೃತ್ಯವಾಗಿದ್ದು, ಲೋಕಾಯುಕ್ತರು ಇದನ್ನು ತಮ್ಮ ವರದಿಯಲ್ಲಿ ಉಲ್ಲೇಖವೇ ಮಾಡಿಲ್ಲ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಸೇರಿದಂತೆ ಆರೋಪಿಗಳ ವಿರುದ್ಧ ಲೋಕಾಯುಕ್ತದಲ್ಲಿ ದಾಖಲಾದ ಎಫ್‌ಐಆರ್ ಆಧಾರದ ಮೇಲೆ ನಾವು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತೇವೆ. ಆರೋಪಿಗಳ ಆಪಾದನೆ ಸಾಬೀತು ಮಾಡುವ ನಿಟ್ಟಿನಲ್ಲಿ ಬಹಳಷ್ಟು ಅಂಶಗಳಿದ್ದು, ಇದನ್ನು ಲೋಕಾಯುಕ್ತರು ಪರಿಗಣಿಸಿಲ್ಲ. ಈ ಹಿನ್ನೆಲೆಯಲ್ಲಿ ಲೋಕಾಯುಕ್ತರ ವರದಿ ಅಂಗೀಕಾರ ಮಾಡಬಾರದು. ಈ ಸಂಬಂಧ ನಮ್ಮ ತಕರಾರು ಅರ್ಜಿ ಪರಿಗಣಿಸಬೇಕು ಎಂದು ನ್ಯಾಯಾಲಯಕ್ಕೆ ಮನವಿ ಮಾಡಿದರು.

ಈ ವೇಳೆ ಇಡಿ ಪರ ವಕೀಲ ಮಧುಕರ್ ದೇಶಪಾಂಡೆ ಅವರು ಮದ್ರಾಸ್ ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ನೀಡಿರುವ ಹಲವು ತೀರ್ಪುಗಳನ್ನು ಉಲ್ಲೇಖಿಸಿ ವಾದ ಮಂಡಿಸಿದರು.

ಲೋಕಾಯುಕ್ತ ವರದಿ ಪುರಸ್ಕರಿಸದೆ ನಮ್ಮ ತಕರಾರು ಅರ್ಜಿಯನ್ನು ನೀವು ಪರಿಗಣಿಸಲು ನಾಳೆ ಮತ್ತಷ್ಟು ದಾಖಲಾತಿ ನೀಡುತ್ತೇವೆ ಎಂದು ಮಧುಕರ್ ದೇಶಪಾಂಡೆ ನ್ಯಾಯಾಲಯಕ್ಕೆ ಮನವಿ ಮಾಡಿದರು.

ಈ ಹಿನ್ನೆಲೆಯಲ್ಲಿ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ನಾಳೆಗೆ ವಿಚಾರಣೆ ಮುಂದೂಡಿದರು.

ಸರ್ಕಾರಿ ಕಾಮಗಾರಿಯಲ್ಲಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ

ವಿಶ್ವ ಹಿಂದೂ ಪರಿಷತ್‌ನಿಂದ ಪ್ರತಿಭಟನೆ




ಸರ್ಕಾರಿ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡಿರುವುದನ್ನು ಖಂಡಿಸಿ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಘಟಕದಿಂದ ಡಿಸಿ ಕಚೇರಿ ಬಳಿ ಪ್ರತಿಭಟನೆ ನಡೆಯಿತು.

ಮೈಸೂರು,ಏ.8(ಜಿಎ)–ಸರ್ಕಾರಿ ಕಾಮಗಾರಿಗಳಲ್ಲಿ ಧರ್ಮಾಧಾರಿತವಾಗಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ ನೀಡಿರುವುದನ್ನು ಖಂಡಿಸಿ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂದು ಹೇಳುವ ಸರ್ಕಾರ ಮತ ಬ್ಯಾಂಕ್‌ಗಾಗಿ ಮುಸ್ಲೀಮರ ತುಷ್ಟಿಕರಣ ಮಾಡುತ್ತಿದೆ. ಬಹುತೇಕ ಉನ್ನತ ಹುದ್ದೆಯನ್ನೂ ಅವರಿಗೆ ನೀಡಿ ಈ ಬಾರಿಯ ಬಜೆಟ್‌ನಲ್ಲೂ ಮುಸ್ಲಿಂ ಸಮುದಾಯವನ್ನು ಓಲೈಸಲು ಹೆಚ್ಚಿನ ಹಣ ಘೋಷಿಸಿದೆ. ಇನ್ನೂ ಸಾಲದೆಂಬಂತೆ ಅಂಬೇಡ್ಕರ್ ನೀಡಿದ ಸಂವಿಧಾನವನ್ನೂ ಲೆಕ್ಕಿಸದೆ ಸರ್ಕಾರಿ ಗುತ್ತಿಗೆಯ ಕಾಮಗಾರಿಯಲ್ಲಿ ಧರ್ಮಾಧಾರಿತವಾಗಿ ಶೇ.4 ಮೀಸಲಾತಿ ನೀಡಿದೆ ಎಂದು ಕಿಡಿಕಾರಿದರು. ಸರ್ಕಾರ ಬಹುಸಂಖ್ಯಾತ ಹಿಂದುಗಳನ್ನು ಕ್ಯಾರೇ ಎನ್ನುತ್ತಿಲ್ಲ. ಅರ್ಹರಿಗೆ ಸೌಲಭ್ಯ ಕೊಡಲು ಹಿಂದೇಟು ಹಾಕುತ್ತಿದೆ. ಸರ್ಕಾರ ಕೂಡಲೇ ಈ ಅವೈಜ್ಞಾನಿಕ ಹಾಗೂ ಸಂವಿಧಾನ ವಿರೋಧಿ ಮೀಸಲಾತಿ ರದ್ದು ಮಾಡಿ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬಂತೆ ಎಲ್ಲರನ್ನೂ ಸಮನಾಗಿ ನೋಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪರಿಷತ್‌ನ ಜಿಲ್ಲಾಧ್ಯಕ್ಷ ಕೆ.ಮಹೇಶ್ ಕಾಮತ್, ಮಧುಶಂಕರ್, ವಿ.ಎನ್.ದಾಸ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ನಿಧನ



ಸತ್ಯನ್ ಚಾವ್ಲಾ

ಮೈಸೂರು,ಏ.8–ಒಮನ್‌ನ ಮಸ್ಕಟ್‌ನಲ್ಲಿ ನೆಲೆಸಿದ್ದ ಮೈಸೂರಿನ ಇಟ್ಟಿಗೆಗೂಡು ನಿವಾಸಿ ಸತ್ಯನ್ ಚಾವ್ಲಾ ಸೋಮವಾರ ನಿಧನರಾಗಿದ್ದಾರೆ. ಮೃತರು ತಾಯಿ, ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಪಾರ್ಥಿವ ಶರೀರ ಇಂದು (ಮಂಗಳವಾರ) ರಾತ್ರಿ ಮೈಸೂರಿಗೆ ಬರಲಿದ್ದು, ಅಂತ್ಯಕ್ರಿಯೆ ನಾಳೆ (ಬುಧವಾರ) ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಏ.13, ಮೈಸೂರಲ್ಲಿ ಮಾಜಿ ಎಂಎಲ್ಸಿ 'ಮನೆ' ಡಿ.ಮಾದೇಗೌಡರಿಗೆ ಅಭಿನಂದನಾ ಸಮಾರಂಭ

ಆಶ್ರಯ ಮನೆ ರೀತಿ ಮಾದರಿ 'ಉಘೇ ಮಾದೇಗೌಡ್ರುಗೆ' ಪ್ರಚಾರ ವಾಹನಕ್ಕೆ ಡಾ. ಕೆಬಿಜಿ ಚಾಲನೆ



ಮೈಸೂರಿನ ವಿಜಯನಗರ ಮೊದಲ ಹಂತದ ಯೋಗನರಸಿಂಹಸ್ವಾಮಿ ದೇವಾಲಯದ ಮುಂಭಾಗ ಮಂಗಳವಾರ 'ಉಘೇ ಮಾದೇಗೌಡ್ರುಗೆ' ಪ್ರಚಾರ ವಾಹನಕ್ಕೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ(ಕೆಬಿಜಿ) ಅವರು ಹಸಿರು ನಿಶಾನೆ ತೋರಿ, ಚಾಲನೆ ನೀಡಿದರು.

ಮೈಸೂರು, ಏ.8(ಜಿಎ)–ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ನ ಮಾಜಿ ಅಧ್ಯಕ್ಷರಾದ ಡಿ.ಮಾದೇಗೌಡರಿಗೆ ಡಿ.ಮಾದೇಗೌಡ ಅಭಿನಂದನಾ ಸಮಿತಿ ವತಿಯಿಂದ ಏ.13ರಂದು ಸಂಜೆ 4 ಗಂಟೆಗೆ ಕಲಾಮಂದಿರದಲ್ಲಿ ಅಭಿನಂದನೆ ಹಾಗೂ ಅಭಿನಂದನಾ ಗ್ರಂಥ ಬಿಡುಗಡೆಯ 'ಉಘೇ ಮಾದೇಗೌಡ್ರುಗೆ' ಸಮಾರಂಭವನ್ನು ಏರ್ಪಡಿಸಲಾಗಿದ್ದು, ಕಾರ್ಯಕ್ರಮದ ಪ್ರಚಾರ ವಾಹನಕ್ಕೆ ಚಾಲನೆ ನೀಡಲಾಯಿತು.

ಮೈಸೂರಿನ ವಿಜಯನಗರದಲ್ಲಿರುವ ಯೋಗನರಸಿಂಹಸ್ವಾಮಿ ದೇವಾಲಯದ ಮುಂಭಾಗ ಆಶ್ರಯ ಮನೆಯ ರೀತಿಯಲ್ಲಿ ಸಿದ್ಧಗೊಂಡಿದ್ದ 'ಉಘೇ ಮಾದೇಗೌಡ್ರುಗೆ' ಪ್ರಚಾರ ವಾಹನಕ್ಕೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಅವರು ಹಸಿರು ನಿಶಾನೆ ತೋರಿ ಚಾಲನೆ ನೀಡಿದರು.

ನಂತರ ಮಾತನಾಡಿದ ಕೆಬಿಜಿ, ಡಿ.ಮಾದೇಗೌಡ್ರು ತಮ್ಮ ಆದರ್ಶ ಜೀವನದ ಮೂಲಕ ಮೈಸೂರಿನ ಆದರ್ಶ ವ್ಯಕ್ತಿಯಾಗಿದ್ದಾರೆ. ಈ ಹಿಂದೆ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಗಡೆಯವರು ರಾಜಕಾರಣಿಗಳು ಮೌಲ್ಯಾಧಾರಿತ ರಾಜಕೀಯ ಮಾಡಬೇಕು ಎಂದು ಹೇಳಿದಂತೆ ಮಾದೇಗೌಡರು ಜೀವನ ಮಾಡುತ್ತಿದ್ದಾರೆ ಎಂದರು. ಸಿಐಟಿಬಿಯ ಸದಸ್ಯರಾಗಿದ್ದ ಕೆಂಪೇಗೌಡರು ವಿಶ್ವಮಾನವ ಜೋಡಿ ರಸ್ತೆ ನಿರ್ಮಾಣ ಮಾಡಿದರೆ, ಬಿ.ಎನ್.ಕೆಂಗೇಗೌಡರು ದೇವರಾಜ ಅರಸು ರಸ್ತೆ, ಸರಸ್ವತಿಪುರಂ ನಿರ್ಮಾಣ ಮಾಡಿದ್ದಾರೆ. ಆದರೆ ಮಾದೇಗೌಡರು, ವಿಜಯನಗರ, ರಾಮಕೃಷ್ಣನಗರ, ವಿವೇಕಾನಂದ ನಗರ, ಹೆಬ್ಬಾಳು ಬಡಾವಣೆಯನ್ನು ನಿರ್ಮಾಣ ಮಾಡುವ ಮೂಲಕ ಎಲ್ಲರಿಗಿಂತಲೂ ಹೆಚ್ಚು ಕೆಲಸ ಮಾಡಿದ್ದಾರೆ. ಹಾಗೇ ರಾಮಕೃಷ್ಣನಗರದ ಪರಮಹಂಸ ವೃತ್ತ ನಿರ್ಮಾಣವಾಗಲು ಅವರೇ ಕಾರಣ ಎಂದು ತಿಳಿಸಿದರು.

ಕುವೆಂಪುನಗರದ ರಸ್ತೆಗಳಿಗೆ ಕುವೆಂಪು ಅವರ ಕಾವ್ಯಗಳ ಹೆಸರು ನಾಮಕರಣ ಮಾಡಿದ್ದಾರೆ. ಸಿದ್ಧಾರ್ಥ ಬಡಾವಣೆಗೂ ಅನೇಕ ಹೆಸರುಗಳನ್ನು ನಾಮಕರಣ ಮಾಡುವ ಮೂಲಕ ಜನರನ್ನು ಒಳ್ಳೆ ಮಾರ್ಗದಲ್ಲಿ ಕೊಂಡೊಯ್ಯಲು ಪ್ರೇರಣೆಯಾಗಿದೆ. ಇವರ ಸೇವೆ ಮರೆಯಲು ಸಾಧ್ಯವಿಲ್ಲ ಎಂದು ಗಣಪತಿಯವರು ತಿಳಿಸಿದರು.

ಇತ್ತೀಚೆಗೆ ಕರ್ನಾಟಕದ ಎಂಎಲ್ಎ ಒಬ್ಬರು ಹಣದ ಮೂಲಕ ಶ್ರೀಮಂತರಾಗಿದ್ದಾರೆ. ಆದರೆ ಮಾದೇಗೌಡರು ತಮ್ಮ ನೈತಿಕತೆ, ಪ್ರಾಮಾಣಿಕತೆ ಮೂಲಕ ಶ್ರೀಮಂತರಾಗಿದ್ದಾರೆ ಎಂದು ತಿಳಿಸಿ, ಡಿ. ಮಾದೇಗೌಡ್ರು ಹಿಂದೂ ವೇದದಲ್ಲಿ ನಮೂದಿಸಿರುವಂತೆ 120 ವರ್ಷ ಪೂರೈಸಲಿ ಎಂದು ಶುಭ ಕೋರಿದರು.

ಮಾದೇಗೌಡರು ಮಾತನಾಡಿ, ಭರತ ಖಂಡದಲ್ಲಿ ಕಿಂಚಿತ್ತು ಉಪಕಾರ ಮಾಡಿದರೂ ಸ್ಮರಿಸುತ್ತಾರೆ. ಅದರಂತೆ ಜನರು ನಾನು ಮಾಡಿದ ಸಣ್ಣ ಸೇವೆಯನ್ನು ಇಂದಿಗೂ ಸ್ಮರಿಸುತ್ತಾರೆ. ಅದನ್ನು ಕಂಡಾಗ ಬಹಳ ಸಂತೋಷವಾಗುತ್ತದೆ ಎಂದರು. ಗಾಂಧೀಜಿ ಅವರು ಹೇಳಿದಂತೆ ವಸತಿ, ಊಟ, ಶಿಕ್ಷಣ ಮುಖ್ಯವಾಗಿ ದೇಶದ ಪ್ರತಿಯೊಬ್ಬ ನಾಗರಿಕರಿಗೂ ಒದಗಿಸಬೇಕು. ಆದರೆ ಇಂದು ವಸತಿ ನಿರೀಕ್ಷಿತ ಮಟ್ಟದಲ್ಲಿ ಸಿಗುತ್ತಿಲ್ಲ. ಅಂದು ರಾಮಕೃಷ್ಣ ಹೆಗ್ಗಡೆ ಅವರು ನೀಡಿದ ಪ್ರೇರಣೆಯಿಂದ ನಾನು ಅಷ್ಟು ಕೆಲಸ ಮಾಡಲು ಸಾಧ್ಯವಾಯಿತು ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಅಭಿನಂದನಾ ಸಮಿತಿ ಅಧ್ಯಕ್ಷ ಲಯನ್ ಎಂ.ವಿ.ದೇವಿಪ್ರಸಾದ್, ಯೋಗನರಸಿಂಹಸ್ವಾಮಿ ದೇವಾಲಯದ ಆಡಳಿತಾಧಿಕಾರಿಗಳಾದ ಶ್ರೀನಿವಾಸ್, ಒಕ್ಕಲಿಗರ ಸಂಘದ ನಿರ್ದೇಶಕರಾದ ಪ್ರಶಾಂತ್‌ಗೌಡ, ಎ.ರವಿ, ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ವಿಜಯ ನಗರ ಮಂಜು, ಕುಮಾರ್‌ಗೌಡ, ಕಾಂಗ್ರೆಸ್ ಮುಖಂಡ ಮಂಚೇಗೌಡನ ಕೊಪ್ಪಲು ರವಿ ಮತ್ತಿತರರಿದ್ದರು.

ಬ್ರಾಹ್ಮಣ ಮಹಾಸಭಾದ ಅಧ್ಯಕ್ಷನಾಗಿ ಆಯ್ಕೆಯಾದರೆ ವಿಶಿಷ್ಟ ಯೋಜನೆ ಜಾರಿ

ಪ್ರಚಾರ ಸಭೆಯಲ್ಲಿ ಡಾ.ಭಾನುಪ್ರಕಾಶ್ ಶರ್ಮ ಭರವಸೆ



ಮೈಸೂರಿನ ಅಗ್ರಹಾರದ ಶಂಕರ ಮಠದಲ್ಲಿ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯ ಪ್ರಚಾರ ಸಭೆಯನ್ನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಡಾ.ಭಾನುಪ್ರಕಾಶ್ ಶರ್ಮಾ ಉದ್ಘಾಟಿಸಿದರು.

ಮೈಸೂರು, ಏ.8(ಬಿಎಲ್‌ಯು)– ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ತನ್ನನ್ನು ಆಯ್ಕೆ ಮಾಡಿದರೆ ಸದಸ್ಯರಿಗೆ ಆರೋಗ್ಯ ವಿಮೆ ಸೇರಿದಂತೆ ಹಲವು ವಿಶಿಷ್ಟ ಯೋಜನೆ ಅನುಷ್ಠಾನ ಮಾಡುತ್ತೇನೆ ಎಂದು ಡಾ.ಭಾನುಪ್ರಕಾಶ್ ಶರ್ಮ ಭರವಸೆ ನೀಡಿದರು.

ಮೈಸೂರು ಅಗ್ರಹಾರದ ಶಂಕರ ಮಠದಲ್ಲಿ ಮಂಗಳವಾರ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಸದಸ್ಯರಿಗೆ ಆರೋಗ್ಯ ವಿಮೆ ಮಾತ್ರವಲ್ಲದೆ ವೇದ ಪಾಠಶಾಲೆ, ಸುವರ್ಣ ಭವನ ನಿರ್ಮಾಣ ಸೇರಿದಂತೆ ಹಲವು ಯೋಜನೆ ಅನುಷ್ಠಾನ ಮಾಡುತ್ತೇನೆ ಎಂದು ಆಶ್ವಾಸನೆ ನೀಡಿದರು.

ಏಪ್ರಿಲ್ 13 ರಂದು ಚುನಾವಣೆ ನಡೆಯಲಿದ್ದು, ಮೈಸೂರಿನಲ್ಲಿರುವ 4150 ಸದಸ್ಯರು ತಮಗೆ ಮತ ನೀಡುವಂತೆಯೂ, ಜೊತೆಗೆ ಮೈಸೂರು ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ಸ್ಪರ್ಧೆ ಮಾಡಿರುವ ಡಿ.ಟಿ.ಪ್ರಕಾಶ್ ಹಾಗೂ ಕೆ.ಆರ್.ಜಗದೀಶ್ ಕುಮಾರ್ ಅವರನ್ನೂ ಆಯ್ಕೆ ಮಾಡಬೇಕು ಎಂದು ಕೋರಿದರು.

ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿಕಟಪೂರ್ವ ಅಧ್ಯಕ್ಷ ಎಚ್.ಎಸ್.ಸಚ್ಚಿದಾನಂದಮೂರ್ತಿ, ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ್, ಗ್ರಾಮಾಂತರ ಅಧ್ಯಕ್ಷ ಗೋಪಾಲರಾವ್, ಹೆಚ್.ಎನ್.ಶ್ರೀಧರ ಮೂರ್ತಿ ಸೇರಿದಂತೆ ಹಲವರು ಸಭೆಯಲ್ಲಿ ಹಾಜರಿದ್ದರು.

ಬೂಕರ್ ಪ್ರಶಸ್ತಿಯ ಶಾರ್ಟ್ ಲಿಸ್ಟ್‌ನಲ್ಲಿ ಸ್ಥಾನ ಪಡೆದ ಹಾಸನದ ಸಾಹಿತಿ



ಹಾಸನ, ಏ.8– ಹಾಸನದ ಖ್ಯಾತ ಲೇಖಕಿ ಬಾನು ಮುಷ್ತಾಕ್ ಅವರ 'ಹಾರ್ಟ್ ಲ್ಯಾಂಪ್ (Heart Lamp)' ಕೃತಿಯು ಪ್ರತಿಷ್ಠಿತ ಬೂಕರ್ ಅವಾರ್ಡ್ ಶಾರ್ಟ್ ಲಿಸ್ಟ್‌ನಲ್ಲಿ ಸ್ಥಾನ ಪಡೆದಿದೆ. ಈ ಮೂಲಕ ಬೂಕರ್ ಅವಾರ್ಡ್‌ನ ಶಾರ್ಟ್ ಲಿಸ್ಟ್‌ನಲ್ಲಿ ಸ್ಥಾನ ಪಡೆದ ಕನ್ನಡದ ಮೊದಲ ಸಾಹಿತಿ ಎಂಬ ಹೆಗ್ಗಳಿಕೆಗೆ ಬಾನು ಮುಷ್ತಾಕ್ ಅವರು ಪಾತ್ರರಾಗಿದ್ದಾರೆ.

ಬಾನು ಮುಷ್ತಾಕ್ ಅವರ 'ಹಸಿನಾ ಮತ್ತು ಇತರ ಕತೆಗಳು' ಕಥಾಸಂಕಲನವನ್ನು ಇಂಗ್ಲಿಷ್‌ಗೆ ದೀಪಾ ಬಸ್ತಿ ಅವರು 'ಹಾರ್ಟ್ ಲ್ಯಾಂಪ್' ಎಂದು ಅನುವಾದಿಸಿದ್ದಾರೆ. ಈ ಕೃತಿ ಫೆಬ್ರವರಿ ತಿಂಗಳಲ್ಲಿ ಬೂಕರ್ ಅವಾರ್ಡ್‌ನ ಲಾಂಗ್ ಲಿಸ್ಟ್‌ನಲ್ಲಿ ಸ್ಥಾನ ಪಡೆದಿತ್ತು. ಇದೀಗ, ಶಾರ್ಟ್ ಲಿಸ್ಟ್‌ನಲ್ಲಿ ಸ್ಥಾನ ಪಡೆದಿದೆ.

ಒಟ್ಟು ಬೂಕರ್ ಅವಾರ್ಡ್‌ಗೆ 153 ಕೃತಿಗಳು ನಿರ್ದೇಶಿತವಾಗಿದ್ದವು. ಇದರಲ್ಲಿ ಬಾನು ಮುಷ್ತಾಕ್ ಅವರ ಹಾರ್ಟ್ ಲ್ಯಾಂಪ್ ಕೃತಿಯೂ ಸೇರಿತ್ತು. ಇದೀಗ ಶಾರ್ಟ್ ಲಿಸ್ಟ್‌ನಲ್ಲಿ ಆಯ್ಕೆಯಾಗುವ ಮೂಲಕ ಅನುವಾದಿತ ಕೃತಿ ಪ್ರಶಸ್ತಿಯ ಸನಿಹಕ್ಕೆ ತಲುಪಿದೆ. ಸದ್ಯ ಶಾರ್ಟ್ ಲಿಸ್ಟ್‌ನಲ್ಲಿ ಆರು ಕೃತಿಗಳು ಸ್ಥಾನ ಪಡೆದಿವೆ. ಮೇ 21ರಂದು ಲಂಡನ್‌ನಲ್ಲಿ ವಿಜೇತ ಕೃತಿಯನ್ನು ಘೋಷಿಸಲಾಗುತ್ತದೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಲಾರಿ ಭಸ್ಮ



ಮಂಡ್ಯ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಶ್ರೀರಂಗಪಟ್ಟಣದ ಬಳಿ ಅಗ್ನಿ ಅವಘಡ ಸಂಭವಿಸಿದ್ದು, ಲಾರಿಯೊಂದು ಸುಟ್ಟು ಭಸ್ಮವಾಗಿದೆ, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯಗಳಾಗಿಲ್ಲ.

ಮಂಗಳವಾರ ರಾತ್ರಿ ಎಕ್ಸ್‌ಪ್ರೆಸ್ ವೇನ ಶ್ರೀರಂಗಪಟ್ಟಣದ ಗಣಂಗೂರು ಟೋಲ್ ಬಳಿ ನೆರೆ ರಾಜ್ಯದ ಸರಕು ಸಾಗಾಣಿಕೆ ಲಾರಿ ಮೈಸೂರು ಕಡೆಯಿಂದ ಬೆಂಗಳೂರು ಕಡೆಗೆ ಹೋಗುವ ಮಾರ್ಗ ಮಧ್ಯೆ ಗಣಂಗೂರು ಟೋಲ್ ಬಳಿ ನಿಲ್ಲಿಸಿ ಲಾರಿ ಚಾಲಕ ಹಾಗೂ ಕ್ಲೀನರ್ ರಾತ್ರಿ ಊಟಕ್ಕೆ ಮಿನಿ ಸಿಲಿಂಡರ್‌ನಿಂದ ಅಡುಗೆ ತಯಾರಿಸುತ್ತಿದ್ದಾಗ ಈ ದುರ್ಘಟನೆ ನಡೆದಿದೆ. ಈ ಸಂಬಂಧ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.04.2025 ಬುಧವಾರ, ಮಳೆ ನಕ್ಷತ್ರ: ರೇವತಿ 31.03.2025 ರಿಂದ 12.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗಳು, ಕುತ್ತಿಗೆ ಹಾಗೂ ಬೆನ್ನುನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ಗಂಟೆಗೆ.

■ **ಬಿಜಿಎಸ್ ಇಂಟರ್‌ನ್ಯಾಷನಲ್ ಫೌಂಡೇಷನ್ ಫಾರ್ ಹೆಲ್ತ್ ಸೈನ್ಸಸ್ :** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಮಠದ ಮಠಾಧೀಶರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಉಪಸ್ಥಿತರು : ಬಿಜಿಎಸ್ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು : ಸೆನೆಟ್ ಸದಸ್ಯ ಡಾ. ಕಿರಣ್‌ಕುಮಾರ್, ಎನ್.ಜಿ. ಭರತೀಶ ರೆಡ್ಡಿ, ಸ್ಥಳ: ಬಿಜಿಎಸ್ ಆವರಣ, ಕುವೆಂಪುನಗರ, ಬೆಳಗ್ಗೆ 10ಕ್ಕೆ

■ **ಶ್ರೀ ರಾಮ ಸೇವಾ ಮಂಡಲಿ ಚಾರಿಟಬಲ್ ಟ್ರಸ್ಟ್:** ಶ್ರೀ ರಾಮನವಮಿ ಸಂಗೀತೋತ್ಸವ, ಬೆಳಗ್ಗೆ 10ಕ್ಕೆ ಸೀತಾ ಸಹಸ್ರನಾಮ ಮತ್ತು ಶ್ರೀ ರಾಮ ಪಟ್ಟಾಭಿಷೇಕ, ಸಂಜೆ 5.15ಕ್ಕೆ ಹಿರಣ್ಮಯಿ–ಪ್ರೇರಣ ಪ್ರವೀಣ್ – ಶುಭಾಂಗ್ ಅವರಿಂದ ಗಾಯನ, ಸಂಜೆ 6.15 ರಿಂದ ವಿದ್ವಾನ್ ರಾಮಕೃಷ್ಣಮೂರ್ತಿ ಅವರಿಂದ ಗಾಯನ, ವಿದ್ವಾನ್ ಮೈಸೂರು ವಿ. ಶ್ರೀಕಾಂತ್–ಪಿಟೀಲು, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿ ಮೊಹಲ್ಲಾ, ಸಂಜೆ 5.15ಕ್ಕೆ.

■ **ಶ್ರೀ ಸೀತಾರಾಮ ದೇವಾಲಯ:** ಶ್ರೀ ರಾಮನವಮಿ, ಡಾ. ಜಿ.ವಿ. ನರಸಿಂಹನ್ ಅವರಿಂದ ಶ್ರೀ ರಾಮಾನುಸ್ಮರಣಂ ಕುರಿತು ಪ್ರವಚನ, ಸ್ಥಳ: ಶ್ರೀ ಸೀತಾರಾಮ ದೇವಾಲಯ, ಸಿದ್ಧಾರ್ಥನಗರ, ಸಂಜೆ 6ಕ್ಕೆ

■ **ಶ್ರೀ ರಾಮಾಭ್ಯುದಯ ಮಹಾಸಭಾ:** ಶ್ರೀ ರಾಮೋತ್ಸವ, ವಿದ್ವಾನ್ ಜೆ.ಎ. ಜಯಂತ್ ಅವರಿಂದ ಕೊಳಲು ವಾದನ, ವಿದ್ವಾನ್ ಹೆಚ್.ಎನ್. ಭಾಸ್ಕರ್–ಪಿಟೀಲು, ವಿದ್ವಾನ್ ಕಿಶೋರ್ ರಮೇಶ್–ಮೃದಂಗ, ವಿದ್ವಾನ್ ಗುರುಪ್ರಸನ್ನ–ಖಂಜೀರ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30ಕ್ಕೆ

■ **ಶ್ರೀರಾಮ ಸೇವಾ ಮಂಡಲಿ:** ಶ್ರೀ ರಾಮೋತ್ಸವ, ಕಾವ್ಯವಾಚನ, ಸಂಗೀತ ಗಮಕ ವಿದುಷಿ ನಾಗಶ್ರೀ ನಾಗೇಶ್–ವಾಚನ, ವಿದ್ವಾನ್ ಸಿ.ಎನ್. ಸುಬ್ಬಣ್ಣ–ವ್ಯಾಖ್ಯಾನ, ವಿಷಯ : ಶ್ರೀ ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಸಂಕ್ಷಿಪ್ತ ರಾಮಾಯಣ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ

■ **ಶ್ರೀರಾಮ ಮಂದಿರ :** ಶ್ರೀ ರಾಮೋತ್ಸವ, ಬೆಳಗ್ಗೆ 9ಕ್ಕೆ ಗ್ರಹ ಹೋಮ, ಸಂಜೆ 6.30ಕ್ಕೆ ಸಾಗರ್ ಚಕ್ರವರ್ತಿ ಅವರಿಂದ ಗಾಯನ, ಸ್ಥಳ: ಶ್ರೀ ರಾಮಮಂದಿರ, ಜಯನಗರ.

■ **ಅರಳಿಕಟ್ಟೆ ಶ್ರೀ ರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ :** ಶ್ರೀರಾಮನವಮಿ, ಸಂಜೆ 6.30 ರಿಂದ ಮೀರಾ ಸಂಗೀತಾ ಕಲಾನಿಕೇತನದವರಿಂದ ಭಜನೆ, ಸ್ಥಳ: ದೇವಸ್ಥಾನದ ಆವರಣ, ಚಾಮರಾಜಪುರಂ.

■ **ಮೈಸೂರು ವಿವಿ ಯುವರಾಜ ಕಾಲೇಜು :** ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಸ್. ಮಹದೇವಮೂರ್ತಿ, ಮುಖ್ಯ ಅತಿಥಿಗಳು : ಡಾ. ಶಿವಕುಮಾರ್, ಸ್ಥಳ: ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಯುವರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಮಹಾರಾಜ ಕಾಲೇಜು, ಪಠ್ಯೇತರ ಚಟುವಟಿಕೆಗಳ ಸಮಿತಿ :** ಡಾ. ರಾಜ್‌ಕುಮಾರ್ ಸ್ಮಾರಕ ಅಂತರ ಕಾಲೇಜು ಗೀತ ಗಾಯನ ಸ್ಪರ್ಧೆ, ಉದ್ಘಾಟನೆ : ಸಾಹಿತಿ ರವಿಕುಮಾರ್ ಕೊಮ್ಮಾರನಪುರ, ಅಧ್ಯಕ್ಷತೆ: ಪ್ರಿನ್ಸಿಪಾಲ್ ಪ್ರೊ. ಹೆಚ್.ಸಿ. ದೇವರಾಜೇಗೌಡ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ಕೆ. ತಿಮ್ಮಯ್ಯ, ಸಂಚಾಲಕ ಪ್ರೊ. ರಾಚಯ್ಯ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವಿಚಾರ ವೇದಿಕೆ, ಆಂಗ್ಲ ಅಧ್ಯಯನ ವಿಭಾಗ :** ವಿಶೇಷ ಉಪನ್ಯಾಸ ಮಾಲಿಕೆ, ಅಧ್ಯಕ್ಷತೆ : ಆಂಗ್ಲ ಅಧ್ಯಯನ ವಿಭಾಗದ ಪ್ರೊ. ರಮೇಶ್ ಜಯರಾಮಯ್ಯ, ಸಂಸ್ಕೃತಿ ಚಿಂತಕ ಪ್ರೊ. ಸಿ. ನಾಗಣ್ಣ ಅವರಿಂದ ವಿಶೇಷ ಉಪನ್ಯಾಸ, ಪ್ರೊ. ಶಿವಸ್ವಾಮಿ ಅವರಿಂದ ಕಂಠಸ್ಥ ವಾಚನ, ಮುಖ್ಯ ಅತಿಥಿಗಳು : ಪ್ರೊ. ಎಸ್. ಚಂದ್ರಕಿರಣ್ ಕುಳವಾಡಿ, ಡಾ.ಎನ್. ಯೋಗೇಶ್, ಸ್ಥಳ: ಆಂಗ್ಲ ಅಧ್ಯಯನ ವಿಭಾಗ, ಮಾನವಿಕ ಕಟ್ಟಡ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

ಕೆ.ಆರ್.ನಗರದಲ್ಲಿಂದು

■ **ಶ್ರೀರಾಮ ಸೇವಾ ಸಮಿತಿ ಕೆ.ಆರ್.ನಗರ:** ಶ್ರೀ ರಾಮೋತ್ಸವ, ವಿದುಷಿ ಶ್ರೀಮತಿ ಮಾಲತಿ ವಿಶ್ವನಾಥ್ ಅವರಿಂದ ಹಾಡುಗಾರಿಕೆ, ವಿದ್ವಾನ್ ಜಗದೀಶ್ – ಮೃದಂಗ, ವಿದ್ವಾನ್ ಚಂದನ್‌ಕುಮಾರ್–ಪಿಟೀಲು, ಸ್ಥಳ: ಶ್ರೀರಾಮ ಸೇವಾ ಸಮಿತಿ, ಕೆ.ಆರ್.ನಗರ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ರಂಗ ದಿಗ್ಗಜರ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ನಿರೂಪಣೆ–ಉಮೇಶ್. ಎಸ್.ಎಸ್ , ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮತ್ತು ತರಬೇತಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ಪರ್ಧಾತ್ಮಕ ತರಬೇತಿ ಕೇಂದ್ರದಲ್ಲಿರುವ ಅವಕಾಶಗಳು ಕುರಿತು ಸಂಯೋಜಕರಾದ ಜೈನಹಳ್ಳಿ ಸತ್ಯನಾರಾಯಣಗೌಡ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ರೋನು ಮುಜುಮ್ದಾರ್–ಬಾನ್ಸುರಿ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಕೆ.ಪಿ.ರೇವತಿ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ವಾದ್ಯವೃಂದ, 4.00 ಮಹಿಳಾರಂಗ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ ಮೇವು ಮೆಲುಕು ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಜಲ ಕೃಷಿಯಲ್ಲಿ ಮೇವು ಉತ್ಪಾದನೆ. ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಮೇವು ಅಭಿವೃದ್ಧಿ ವಿಭಾಗದ ತಾಂತ್ರಿಕ ಸಹಾಯಕರಾದ ಡಾ.ಎನ್.ರಾಣಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಯು. ಪಿ. ರಾಜು–ಮ್ಯಾಂಡೋಲಿನ್ ವಾದನ, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು


ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ, ಮೈಸೂರು
ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು
ಸಂಸ್ಥಾಪಕರು ಗುರಿಕಾರ್ ಶ್ರೀ ಮರಿಮಲ್ಲಪ್ಪನವರು
ದಾನಿಗಳು ಶ್ರೀ ಕೆ.ಎನ್. ಶಿವಲಿಂಗಯ್ಯನವರು
ಸೀತಾವಿಲಾಸ ರಸ್ತೆ, ಮೈಸೂರು-570 004. ☎ : 0821-2422537
ವಾಣಿಜ್ಯ
ENG 95
SAN 100
B S 98
ACC 97
B M 99
STAT 100
589
600
ಅನಿರುದ್ಧ ಪಿ.-589
ವಿಜ್ಞಾನ
ಗಗನ್ ವಿ. ರೈ-583
ಕಲಾ
ಪರೀಕ್ಷಾನಂದ ಎಸ್.-583
2024-25
ಪರಿಶ್ರಮದೊಂದಿಗೆ ಹೆಜ್ಜೆ ಇಟ್ಟ ಯಶಸ್ಸಿನ ಪ್ರತಿಭೆಗಳು....
ಅತ್ಯುನ್ನತ ಶ್ರೇಣಿ
ವಿಜ್ಞಾನ – 84
ವಾಣಿಜ್ಯ – 38
ಕಲಾ – 19
ಒಟ್ಟು – 141
ವಿಜ್ಞಾನ
ವಾಣಿಜ್ಯ
ಕಲಾ
ಸಾಧಕ ವಿದ್ಯಾರ್ಥಿಗಳಿಗೆ, ಬೋಧಕ, ಬೋಧಕೇತರ ವೃಂದ ಹಾಗೂ ಪೋಷಕರಿಗೆ ಅಭಿನಂದನೆಗಳು
ಶ್ರೀ ಕೆ.ಎನ್. ಪಂಚಾಕ್ಷರಸ್ವಾಮಿ ಗೌರವ ಕಾರ್ಯದರ್ಶಿಗಳು
ಡಾ. ಅನಿಲ ಎಸ್. ಕಟ್ಟಿಮನಿ ಪ್ರಾಂಶುಪಾಲರು
ಆಡಳಿತ ಮಂಡಳಿ
ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ

ನಕ್ಕರೆ ಅದೇ ಸ್ವರ್ಗ

ಗಂಡ–ಹೆಂಡತಿ ಇಬ್ಬರು ಡೈವೋರ್ಸ್‌ಗಾಗಿ ಕೋರ್ಟ್‌ಗೆ ಹೋಗಿದ್ದರು.
ನ್ಯಾಯಾಧೀಶರು : ನಿಮಗೆ 3 ಜನ ಮಕ್ಕಳು. ಅವರಲ್ಲಿ ಹೇಗೆ ಹಂಚಿಕೊಳ್ಳುತ್ತೀರಾ?
ಆಗ ಗಂಡ–ಹೆಂಡತಿ ಸುದೀರ್ಘವಾಗಿ ಚರ್ಚಿಸಿ
ಸರಿ ಹಾಗಾದರೆ ನಾವು ಮುಂದಿನ ವರ್ಷ ಇನ್ನು ಒಂದರ ಜೊತೆ ಬರುತ್ತೇವೆ.
ಇಷ್ಟಕ್ಕೆ ಜೋಕ್ ಮುಗಿಯಲಿಲ್ಲ. 9 ತಿಂಗಳ ನಂತರ ದಂಪತಿಗೆ ಅವಳಿ ಜವಳಿ ಮಕ್ಕಳು...!

ಮೈಸೂರು ಮಿತ್ರ

ಬುಧವಾರ, 9 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸಾಧ್ಯವಾದರೆ ಇನ್ನೊಬ್ಬರ ಬದುಕಿನಲ್ಲಿ ಮೆಮೋರಿ ಆಗಿ ಇರಿ. ಮೆಮೋರಿ ಫುಲ್ ಆಗಬೇಡಿ. ಡಿಲಿಟ್ ಆಗೋದು ಗ್ಯಾರಂಟಿ. ಅದು ಮನಸ್ಸು ಆದರೂ ಸರಿ, ಮೊಬೈಲ್ ಆದರೂ ಸರಿನೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಳೆ ಎಂದವನಿಗೆ ಹಾಳು, ಇಂದೇ ಎಂದವನಿಗೆ ಬೀಳಾಗದು ಬಾಳು.

ನಿಮ್ಮ ಪತ್ರಗಳು

■ ಗೊಂದಲಮಯವಾಗಿರುವ ದಟ್ಟಗಳ್ಳಿ ರಿಂಗ್ ರಸ್ತೆ, ಕೆಇಬಿ ವೃತ್ತದ ಸಿಗ್ನಲ್‌ಗಳು



ಮಾನ್ಯರೆ,

ಮೈಸೂರಿನ ದಟ್ಟಗಳ್ಳಿಯ ರಿಂಗ್ ರಸ್ತೆ ಕೆಇಬಿ ಜಂಕ್ಷನ್‌ನಲ್ಲಿ ವರ್ಷಗಳ ಹಿಂದೆಯೇ ಸಿಗ್ನಲ್ ಲೈಟ್ ಅಳವಡಿಸಿದ್ದರೂ ಅವುಗಳನ್ನು ಕಳೆದ ಒಂದೆರಡು ತಿಂಗಳಿಂದ ಚಾಲನೆಗೊಂಡಿದೆ.

ಆದರೆ ಈ ಕೆಇಬಿ ವೃತ್ತವು ವಿಶ್ವ ಮಾನವ ಜೋಡಿ ರಸ್ತೆಯಿಂದ ರಿಂಗ್ ರಸ್ತೆ ಮೂಲಕ ಪಶ್ಚಿಮಕ್ಕೆ ಶ್ರೀರಾಂಪುರ ನಂಜನಗೂಡು, ದಕ್ಷಿಣಕ್ಕೆ ಹಿನಕಲ್, ಮಡಿಕೇರಿ ಬೆಂಗಳೂರು ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವ ರಿಂಗ್ ರಸ್ತೆಯ ಜೊತೆಗೆ, ದಕ್ಷಿಣಕ್ಕೆ, ವೃತ್ತದಿಂದ ಎಡಕ್ಕೆ ರಾಮಕೃಷ್ಣನಗರದ ಹೆಲ್ತ್ ಬ್ಲಾಕ್‌ಗೆ ಹೋಗುವ ಶನಿದೇವರ ದೇವಸ್ಥಾನವಿರುವ ರಸ್ತೆ ನಂತರ ಸ್ವಲ್ಪ ಮುಂದೆ ಕೌಟಿಲ್ಯಾ ಶಾಲೆ ಹಾಗೂ ಕನಕದಾಸನಗರ 'ಜೆ' ಬ್ಲಾಕ್‌ಗೆ ಸಂಪರ್ಕಿಸುವ ರಸ್ತೆ, ರಿಂಗ್ ರಸ್ತೆಯ ಸರ್ವಿಸ್ ರಸ್ತೆಗಳು ಹಾಗೂ ಕೆಇಬಿಯ ಉಪ ವಿಭಾಗದ ಕಚೇರಿ, ಪಿಕೆವಿ ಆಚಾರ್ಯ ಸಭಾ ಭವನ ರಸ್ತೆಯ ಮೂಲಕ ಕನಕದಾಸನಗರ ಡಿ ಬ್ಲಾಕ್‌ಗೆ ಹೋಗುವ ರಸ್ತೆ, ಹೀಗೆ ಅನೇಕ ಕಡೆಗಳಿಗೆ ಹೋಗುವ ರಸ್ತೆಗಳಿವೆ. ಆದರೆ ಸಿಗ್ನಲ್ ದೀಪಗಳು ಕೇವಲ 3 ದಿಕ್ಕುಗಳಿಗೆ ಮಾತ್ರ ಸಿಗ್ನಲ್ ತೋರಿಸುತ್ತಿದ್ದು, ಕೌಟಿಲ್ಯಾ ಶಾಲೆ ಕಡೆಯಿಂದ ಬರುವ ವಾಹನ ಸವಾರರಿಗೆ, ಕೆಇಬಿ ಕಚೇರಿ ಕಡೆಯಿಂದ ಹಾಗೂ ಶನಿದೇವರ ದೇವಸ್ಥಾನದ ರಸ್ತೆಗಳ ಕಡೆಯಿಂದ ಬರುವ ವಾಹನಗಳಿಗೆ ಯಾವುದೇ ಸಿಗ್ನಲ್‌ಗಳು ಇಲ್ಲದೆ ಗೊಂದಲವಾಗಿದೆ. ಉದಾ: ಕೌಟಿಲ್ಯಾ ಶಾಲೆ ಕಡೆಯಿಂದ ಬರುವ ವಾಹನಗಳು ನಂಜನಗೂಡು ಕಡೆಯಿಂದ ಬಂದ ವಾಹನಗಳಿಗೆ ದೊರೆಯುವ ಸಿಗ್ನಲ್ ಅನ್ನೇ ಅನುಸರಿಸಿ, ಬಲಕ್ಕೆ ರಾಮಕೃಷ್ಣ ನಗರದ ಕಡೆಗೆ ಹಾಗೂ ನೇರವಾಗಿ ಹಿನಕಲ್ ಕಡೆಗೆ ಹೋಗಬೇಕು. ಆದರೆ ಇದೇ ವೇಳೆ ನಂಜನಗೂಡು ಕಡೆಯಿಂದ ಬರುವ ವಾಹನಗಳು ಕೂಡ ನೇರವಾಗಿ ಚಲಿಸುವುದರಿಂದ, ಕೌಟಿಲ್ಯಾ ಶಾಲೆ ಕಡೆಯಿಂದ ಹೋಗುವ ವಾಹನಗಳು, ಎಡಕ್ಕೆ ರಾಮಕೃಷ್ಣನಗರದ ಕಡೆಗೆ ಹೋಗಲು ವಾಹನ ನಂಜನಗೂಡು ಕಡೆಯಿಂದ ಬರುವ ವಾಹನಗಳ ದಟ್ಟಣೆ ಕಡಿಮೆಯಾಗುವವರೆಗೂ ರಸ್ತೆಯ ಮಧ್ಯದಲ್ಲೇ ಕಾಯಬೇಕು. ಹಾಗೂ ನೇರವಾಗಿ ಹಿನಕಲ್ ರಸ್ತೆಗೆ ಕೂಡ ಹೋಗಲು ಆಗುವುದೇ ಇಲ್ಲ. ಇಷ್ಟರಲ್ಲಿ ಆಗಲೇ ಮತ್ತೊಂದು ಕಡೆಯ ವಾಹನಗಳಿಗೆ ಸಿಗ್ನಲ್ ದೊರಕಿ ವಾಹನ ಸವಾರರು, ಗೊಂದಲಪಡುವಂತಾಗಿದೆ. ಇದಕ್ಕೆ ಕಾರಣ, ಕೌಟಿಲ್ಯ ಶಾಲೆ ಕಡೆಯಿಂದ ಹೋಗುವ ವಾಹನಗಳಿಗೆ ಸಿಗ್ನಲ್ ದೀಪದ ವ್ಯವಸ್ಥೆ ಇಲ್ಲದಿರುವುದು. ಇದೇ ಅವಸ್ಥೆ, ಕೆಇಬಿ ಕಚೇರಿ ಕಡೆ ರಸ್ತೆಯಿಂದ ಬರುವವರಿಗೂ ಹಾಗೂ ಶನಿದೇವರ ದೇವಸ್ಥಾನದ ಕಡೆಗೆ ಹೋಗುವವರಿಗೂ ಆಗುತ್ತಿದೆ.

ಆದ್ದರಿಂದ ಸಂಚಾರಿ ಪೊಲೀಸರು ಇದನ್ನು ಪರಿಶೀಲಿಸಿ, ಒಂಟಿಕೊಪ್ಪಲ್ ದೇವಸ್ಥಾನದ ರಸ್ತೆಯಲ್ಲಿ ಇರುವಂತೆ ಹೆಚ್ಚುವರಿ ಸಿಗ್ನಲ್‌ಗಳನ್ನು ಅಳವಡಿಸಿ ಟ್ರಾಫಿಕ್ ಸಮಸ್ಯೆಯನ್ನು ಪರಿಹರಿಸಬೇಕು. ಹಾಗೂ ತುರ್ತಾಗಿ ಈ ವೃತ್ತದಲ್ಲಿ ಟ್ರಾಫಿಕ್ ಪೇದೆಯನ್ನು ನಿಯೋಜಿಸಬೇಕು. ಇಲ್ಲದಿದ್ದರೆ ಅಪಘಾತಗಳಿಗೆ ಟ್ರಾಫಿಕ್ ಸಿಗ್ನಲ್‌ಗಳೇ ಕಾರಣವಾಗುತ್ತವೆ. ಸಂಬಂಧಪಟ್ಟ ಸಂಚಾರಿ ಪೊಲೀಸ್ ಠಾಣೆ ಯವರು ಕೂಡಲೇ ಕ್ರಮ ವಹಿಸಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಮನುಷ್ಯರ ಕಡು ಲೋಭಕ್ಕೆ ಮೂಕ ಜೀವಗಳು ಬಲಿಯಾಗುತ್ತಿವೆ!



ಮಾನ್ಯರೆ,

ಮೈಸೂರಿಗೆ ಶೋಭೆ ತರುವಂತಹ ಸ್ಥಳಗಳಲ್ಲಿ ಒಂದಾದ ಜಗನ್ಮೋಹನ ಅರಮನೆಯ ಬಳಿಯಲ್ಲಿರುವ ಅವಿಲಾ ಕಾನ್ವೆಂಟ್ ಸಮೀಪ ನೋ ಪಾರ್ಕಿಂಗ್ ಬ್ಯಾರಿಕೇಡ್ ಹತ್ತಿರದಲ್ಲಿಯೇ ಸುಬ್ಬರಾಯನಕೆರೆ ನಿವಾಸಿಗಳು ಪ್ರತಿದಿನ ನುಸುಕಿನ ವೇಳೆ ಕಸ ಎಸೆಯುತ್ತಿದ್ದು, ರಸ್ತೆ ತುಂಬೆಲ್ಲಾ ಕಸದ ದುರ್ವಾಸನೆ ಗಬ್ಬೆದ್ದು ನಾರುತ್ತಿದೆ. ಆ ಕಸದಲ್ಲಿಯೇ ಆಹಾರ ಹುಡುಕಲು ನಾಯಿ–ದನಗಳು ಬಾಯಿ ಹಾಕಿ ಪ್ಲಾಸ್ಟಿಕ್ ಕವರ್‌ಗಳನ್ನು ಎಳೆದಾಡಿ ರಸ್ತೆಯೆಲ್ಲಾ ಕಸ ಚೆಲ್ಲಿ ತಿನ್ನುತ್ತಿದ್ದು, ಬಡ ಮೂಕಜೀವಗಳು ಮನುಷ್ಯರ ದುರಾಸೆಗೆ ಬಲಿಯಾಗುತ್ತಿರುವಂತೆ ಕಾಣುತ್ತದೆ. ಒಂದು ಕಾಲದಲ್ಲಿ ಮೈಸೂರು ನಗರವು ದೇಶದ ಸ್ವಚ್ಛ ನಗರಗಳಲ್ಲಿ ಒಂದಾಗಿತ್ತು. ಆದರೆ, ಈಗ ಇಂತಹ ಘಟನೆಗಳಿಂದ ಮಹಾನಗರ ಪಾಲಿಕೆಯ ಕಾರ್ಯ ವ್ಯವಸ್ಥೆಗೆ ಕುಜದೋಷ ಬಂದಿರುವ ಹಾಗೆ ಕಾಣಿಸುತ್ತಿದೆ. ಕಲಾ ಪ್ರೇಮಿಗಳು ಹಾಗೂ ವಿದೇಶಿಗರು ಜಗನ್ಮೋಹನ ಅರಮನೆಯನ್ನು ನಿತ್ಯ ವೀಕ್ಷಿಸಲು ಆಗಮಿಸುತ್ತಾರೆ. ನಮ್ಮ ಮನೆಯೇ ಹಾಳು ಪರಿಸ್ಥಿತಿಯಲ್ಲಿಟ್ಟುಕೊಂಡರೆ ನಾವು ಹೇಗೆ ಬೇರೆಯವರಿಗೆ ಉತ್ತಮ ಉದಾಹರಣೆಯಾಗಬಹುದು?; ಅದರಂತೆಯೇ ನಾವೇ ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಳ್ಳದಿದ್ದರೆ ನಮ್ಮ ನಗರವು ಹೇಗೆ ಹೊರ ಜನರಿಗೆ ಮಾದರಿಯಾದೀತು? ಆದ್ದರಿಂದ ಕೂಡಲೇ ಕಸ ವಿಲೇವಾರಿ ಮಾಡಲು ಕೂಡಲೇ ಸೂಕ್ತ ವ್ಯವಸ್ಥೆ ಕಲ್ಪಿಸಿ ಮೂಕ ಜೀವಗಳನ್ನು ರಕ್ಷಿಸಬೇಕೆಂದು ನನ್ನ ಸವಿನಯ ಪ್ರಾರ್ಥನೆ.

–ಯಶಸ್ ಆರ್., ಲೇಖಕ ಹಾಗೂ ಸಾಮಾಜಿಕ ಕಾರ್ಯಕರ್ತ, ಮೈಸೂರು.

ಈ ಜೀವನ



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಅಂಕಗಳೇ ಅಂತಿಮವಲ್ಲ, ಕುಗ್ಗದಿರಿ ಯುವ ಮನಸ್ಸುಗಳೇ...

ಪರೀಕ್ಷೆಗಳ ಕಾರುಬಾರು ಜೋರಿನ ಆರ್ಭಟ ಸದ್ಯಕ್ಕೆ ಕುಗ್ಗಿರುವ ಸಂದರ್ಭದಲ್ಲಿ ನಿಂತಿರುವ ನಾವುಗಳು ಜೀವನದ ಪರೀಕ್ಷೆಯನ್ನು ಸದಾ ಎದುರಿಸುತ್ತಲೇ ಇರುತ್ತೇವೆ. ಪರೀಕ್ಷೆಗಳ ತದ ನಂತರ ಹೊರ ಬೀಳುವ ಅಂಕಗಳು ವಿದ್ಯಾರ್ಥಿಗಳ ಮುಂದಿನ ಬದುಕನ್ನು ನಿರ್ಧರಿಸುತ್ತದೆ. ಬಿಸಿಲಿನ ಬೇಗೆಗಿಂತ ಫಲಿತಾಂಶದ ತೀವ್ರತೆ ಪ್ರಖರವಾಗಿ ಗೋಚರಿಸುತ್ತಿದೆ. ನೆನ್ನೆ ತಾನೇ ಪಿಯುಸಿ ಫಲಿತಾಂಶ ಬಂದಿದೆ. ಹೆಚ್ಚು ಕಡಿಮೆ ಉತ್ತಮ ಫಲಿತಾಂಶವೇ ಬಂದಿದೆ ಎಂದು ಕೊಂಡಿದ್ದರೂ ಕೆಲವರು ತಾವು ಗಳಿಸಿದ ಅಂಕಗಳು ಕಡಿಮೆಯಾಯಿತೆಂದು ಪರಿತಪಿಸುವುದು, ವ್ಯಥೆ ಪಡುವುದು ಸರ್ವೆ ಸಾಮಾನ್ಯವಾದ ವಿಷಯವಾಗಿದೆ. ಪ್ರತಿ ಬಾರಿ ಫಲಿತಾಂಶ ಬಂದಾಗಲೂ ಸಹಜವಾಗಿ ಸಂತೋಷಕ್ಕಿಂತ ನೋವು, ನಿರಾಶೆಗಳು ಮಾಮೂಲಿಯಾಗಿವೆ.

ನಿಜ ಬದುಕಿನ ಅತ್ಯಂತ ತಿರುವಿನ ಹಂತಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪ್ರಮುಖ ಪಾತ್ರ ವಹಿಸುತ್ತದೆ. ಇದರಲ್ಲಿ ಯಾವುದೇ ಎರಡು ಮಾತಿಲ್ಲ. ಆದರೆ ತಿಳಿಯಬೇಕಾದ ವಿಚಾರ ಮತ್ತೊಂದಿದೆ. ಕೇವಲ ಕಡಿಮೆ ಅಂಕಗಳು ಬಂತೆಂದು ಅಥವಾ ತಾವು ನಿರೀಕ್ಷಿಸಿದಷ್ಟು ಅಂಕಗಳು ಬರಲಿಲ್ಲವೆಂದು ಮಾನಸಿಕವಾಗಿ ಕುಗ್ಗುವ ಅಗತ್ಯವಿಲ್ಲ. ಅಂಕಗಳು ನಿಮ್ಮ ಜ್ಞಾನ ಸಾಧನೆಯನ್ನು ತರುವ ಮಾನದಂಡವಲ್ಲ. ಹೆಚ್ಚು ಅಂಕಗಳು ಬಂದವರು ಬುದ್ಧಿವಂತರೆಂದು, ಕಡಿಮೆ ಅಂಕಗಳು ಬಂದವರು ದಡ್ಡರೆಂದು ತಿಳಿಯುವ ಅಗತ್ಯವಿಲ್ಲ. ವರ್ಷವಿಡೀ ಓದಿ ಕೇವಲ ಮೂರು ಗಂಟೆಯಲ್ಲಿ ತಾವು ಓದಿದ್ದನ್ನು ಬರೆದು ಅಂಕಗಳನ್ನು ಗಳಿಸಿದ ಮಾತ್ರಕ್ಕೆ ಅವರೆಲ್ಲ ಬುದ್ಧಿವಂತರು ಎಂದು ಪರಿಭಾವಿಸಬೇಕಾಗಿಲ್ಲ. ಬದುಕು ಪರೀಕ್ಷೆಗಿಂತ ದೊಡ್ಡದು.. ಅದು ನೀಡುವ ಪ್ರಶ್ನೆ ಪತ್ರಿಕೆ ಯಾರು ಊಹೆ ಮಾಡಲಾರದಂತದ್ದು. ಆದ್ದರಿಂದ ಇಂತಹ ಪರೀಕ್ಷೆಗಳನ್ನು ಜೀವನದ ಉದ್ದಕ್ಕೂ ಎದುರಿಸಲೇಬೇಕಾಗಿರುತ್ತದೆ. ಕೇವಲ ಈ ಪರೀಕ್ಷೆಗಳಿಗೆ ಹೆದರಿ ಕುಳಿತುಕೊಳ್ಳುವ ಅಥವಾ ಮಾನಸಿಕವಾಗಿ ಕುಗ್ಗುವ ಅಗತ್ಯವಿಲ್ಲ.

ಅಂಕಗಳು ಶೈಕ್ಷಣಿಕವಾಗಿ ನಿಮ್ಮ ಸಾಮರ್ಥ್ಯವನ್ನು ಮೊದಲಿಗೆ ಒರೆಗೆ ಹಚ್ಚುವ ಕೆಲಸವನ್ನು ಮಾಡಿದರೂ ಅಂತಿಮವಾಗಿ ಉಳಿಯುವುದು ನಿಮ್ಮ ಸ್ವ ಸಾಮರ್ಥ್ಯ. ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಹೇಗೆ ಪ್ರತಿಕ್ರಿಯೆ ನೀಡುವಿರಿ, ಸಮಸ್ಯೆಗಳನ್ನು ಹೇಗೆ ಎದುರಿಸುವಿರಿ ಎಂಬುದರ ಮೇಲೆ ನಿಮ್ಮ ಜೀವನ ನಿರ್ಧಾರವಾಗಿರುತ್ತದೆ ವಿನಃ ನೀವು ಗಳಿಸಿರುವ ಅಂಕಗಳ ಮೇಲೆ ಅಲ್ಲ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತ್ಯಂತ ಕಡಿಮೆ ಅಂಕಗಳನ್ನು ಪಡೆದು ಮುಂದೆ ತಾವು ಮಾಡಿದ ತಪ್ಪುಗಳನ್ನು ತಿದ್ದಿಕೊಂಡು ಯಶಸ್ವಿಯಾದ ಎಷ್ಟೋ ಸಾಧಕರ ಉದಾಹರಣೆಗಳು ನಮ್ಮ ಕಣ್ಮುಂದೆ ಜೀವಂತವಾಗಿಯೇ ಇವೆ. ಬದುಕನ್ನು ಸಾಗಿಸಲು ಬೇಕಾಗಿರುವುದು ಛಲ, ಹಟ ಹೊರತು ಅಂಕಗಳಲ್ಲ ಎಂಬುದು ನನ್ನ ಅಭಿಪ್ರಾಯ.

ಒಂದೇ ಬಗೆಯ ಅಂಕಗಳು ಪ್ರತಿಯೊಬ್ಬರಿಗೂ ಬರಲು ಸಾಧ್ಯವಿಲ್ಲ. ಹಾಗೆಯೇ ಎಲ್ಲರೂ ವೈದ್ಯರು,ಅಭಿಯಂತರರು ಆಗಲು ಸಾಧ್ಯವಿಲ್ಲ. ಅವರವರ ಬುದ್ಧಿಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ತಾವು ತಮ್ಮ ಬದುಕನ್ನು ರೂಪಿಸಿಕೊಳ್ಳುವ ಕೆಲಸವನ್ನು ಮಾಡಬಹುದು. ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆ ಹೆಚ್ಚು ಅಂಕ ಬಂದವನನ್ನು ಹೊಗಳುವ, ಕಡಿಮೆ ಅಂಕಗಳನ್ನು ಬಂದವರನ್ನು ಕಡೆಗಣಿಸುವ ಕೆಲಸವನ್ನು ಮಾಡುತ್ತದೆ. ಮೊದಲು ಈ ಭೇದಭಾವ ತೊಲಗಬೇಕು. ಎಷ್ಟೇ ಉನ್ನತವಾದ ಅಂಕಗಳನ್ನು ಪಡೆದಿದ್ದರು ಯಾವುದಾದರೂ ಪ್ರಮುಖವಾದ ಕೆಲಸಕ್ಕೆ ನೀವು ಅರ್ಜಿ ಸಲ್ಲಿಸಿದಾಗ ಸಂದರ್ಶನವನ್ನು ಎದುರಿಸಬೇಕಾದ ಪ್ರಮೇಯ ಬಂದಾಗ ನಿಮ್ಮ ಅಂಕಪಟ್ಟಿಗಳನ್ನು ಒಂದೆಡೆ ಇಟ್ಟು ಅಂಕಪಟ್ಟಿಗಳ ಹೊರತಾಗಿ, ಅಂಕಗಳ ಹೊರತಾಗಿ ನೀವೇನು ಕಲಿತಿರುವಿರಿ ಎಂಬ ಪ್ರಶ್ನೆಯನ್ನು ಕೇಳುತ್ತಾರೆ. ಅಂಕಗಳನ್ನು ಗಳಿಸುವುದು ಉನ್ನತವಾದ ದರ್ಜೆಯನ್ನು ಪಡೆಯುವುದು ಇತ್ತೀಚಿನ ದಿನಗಳಲ್ಲಿ ಅಷ್ಟು ಕಷ್ಟವೇನಲ್ಲ, ಆದರೆ ಉತ್ತಮ ಕೆಲಸವನ್ನು ಪಡೆಯಲು ಅಂಕಗಳ ಹೊರತಾಗಿ ಕೌಶಲ್ಯ, ಸ್ವ ಸಾಮರ್ಥ್ಯ, ಆಸಕ್ತಿ, ಪ್ರೇರಣೆ ಬೇಕಾಗುತ್ತವೆ. ಆದ್ದರಿಂದ ಅಂಕಗಳನ್ನೇ ಜ್ಞಾನದ ಮೂಲ ಮಾಪನವಾಗಿ ಪರಿಗಣಿಸದೆ ಅದರಿಂದಾಚೆಗೆ ಬದುಕಿದೆ ಎಂಬುದನ್ನು ಮೊದಲು ನಾವು ಗ್ರಹಿಸಬೇಕು. ಹೀಗೆ ಆಗಬೇಕಾದರೆ ನಾವು ಯೋಚಿಸುವ ಲಹರಿಯನ್ನು ಬದಲಿಸಿಕೊಳ್ಳಬೇಕು.



ಸಂಗ್ರಹ ಚಿತ್ರ

> ಎಲ್ಲಾ ಕೆಲಸಗಳಿಗೂ ಅಂಕಗಳೇ ಮುಖ್ಯವಾಗಿರುವುದಿಲ್ಲ. ಕೆಲವೊಮ್ಮೆ ಸಮಸ್ಯೆಗಳಿಗೆ ನೀವು ಪ್ರತಿಕ್ರಿಯಿಸುವ ರೀತಿ, ನಿಮ್ಮಲ್ಲಿ ಸದೃಢವಾಗಿರುವ ಆತ್ಮವಿಶ್ವಾಸ, ಸಕಾರಾತ್ಮಕವಾಗಿ ಆಲೋಚಿಸುವ ಪರಿ ಇವುಗಳು ಕೂಡ ಪ್ರಮುಖವಾಗಿರುತ್ತದೆ. ಶೈಕ್ಷಣಿಕವಾಗಿ ನೀವು ಗಳಿಸಿರುವ ಅಂಕಗಳು ಒಂದು ಮಾನದಂಡವೇ ಹೊರತು ಅದೇ ಬದುಕಲ್ಲ. ಅಂಕಗಳು ಕಡಿಮೆ ಬಂದರೂ ಕೂಡ ಏನಾದರೂ ಸಾಧನೆ ಮಾಡಬಲ್ಲೆ ಎಂಬಂತಹ ಸಕರಾತ್ಮಕವಾದ ಆತ್ಮವಿಶ್ವಾಸವಿದ್ದರೆ ಖಂಡಿತವಾಗಿಯೂ ಜೀವನದಲ್ಲಿ ಯಶಸ್ಸನ್ನು ಪಡೆಯಲು ಸಾಧ್ಯವಿದೆ.

ನಿರೀಕ್ಷೆಗಳನ್ನು ಬಿಟ್ಟು ಬದುಕುವುದನ್ನು ರೂಢಿಸಿಕೊಳ್ಳಬೇಕು

ಬದುಕು ನಾವಂದುಕೊಂಡ ಹಾಗೆ ಇರುವುದಿಲ್ಲ ಏನೇ ಬಂದರೂ ಅದನ್ನು ಎದುರಿಸಿ ಬಾಳುವ ಸಾಮರ್ಥ್ಯ ನಮ್ಮಲ್ಲಿ ಇರಬೇಕು. ಈ ರೀತಿ ನಾವು ಬದುಕಬೇಕೆಂದರೆ ಮೊದಲು ನಿರೀಕ್ಷೆಗಳನ್ನು ಬಿಟ್ಟು ಬದುಕುವುದನ್ನು ಕಲಿಯಬೇಕು. ಜೀವನದಲ್ಲಿ ಯಶಸ್ವಿಯಾಗಲು ಹೆಚ್ಚು ಅಂಕಗಳು ಬರಬೇಕು. ಹೆಚ್ಚು ಅಂಕಗಳು ಬಂದವರು ಮಾತ್ರ ಜೀವನದಲ್ಲಿ ಯಶಸ್ವಿಯಾಗುತ್ತಾರೆ. ಒಳ್ಳೆಯ ಕೆಲಸ ಸಿಗುತ್ತದೆ ಎಂಬಂತಹ ನಿರೀಕ್ಷೆಗಳನ್ನು ಬಿಟ್ಟಾಗ ಮಾತ್ರ ಬದುಕು ಸುಂದರವಾಗಿರುತ್ತದೆ. ಅಂಕಗಳು ಕೇವಲ ಆ ಕ್ಷಣದ ನಿಮ್ಮ ಸಾಮರ್ಥ್ಯವನ್ನು ಅಳೆಯುವ ಸಾಧನಗಳಾಗಿ ಕೆಲಸ ಮಾಡುತ್ತವೆಯೇ ಹೊರತು ಅಂಕಗಳೇ ನಿಮ್ಮ ಜೀವನವನ್ನು ರೂಪಿಸುವುದಿಲ್ಲ. ಒಳ್ಳೆಯ ಅಂಕಗಳು ಬಂದರೆ ಉತ್ತಮವಾದ ಕೆಲಸ ಸಿಗುತ್ತದೆ. ಬದುಕು ಸುಂದರವಾಗಿರುತ್ತದೆ, ನಾವಂದುಕೊಂಡಿದ್ದೆಲ್ಲ ಸಿಗುತ್ತದೆ ಎಂಬ ಭ್ರಮೆಯಲ್ಲಿ ನಿರೀಕ್ಷೆಗಳನ್ನು ಹೊತ್ತು ಜೀವನವನ್ನು ಸಾಗಿಸುತ್ತಿರುತ್ತೇವೆ. ಇದಕ್ಕಿಂತ ದೊಡ್ಡ ಭ್ರಮೆ ಇನ್ನೊಂದಿಲ್ಲ. ತಮ್ಮಲ್ಲಿರುವ ವಿಶೇಷವಾದ ಸಾಮರ್ಥ್ಯವನ್ನು ಪರೀಕ್ಷಿಸಿ, ಪರಿಗಣಿಸಿ ಅದಕ್ಕೆ ತಕ್ಕ ಕೆಲಸವನ್ನು ಇಂದಿನ ಅನೇಕ ಕಂಪನಿಗಳು, ಉದ್ಯಮಗಳು ಮಾಡುತ್ತಿವೆ. ಹೊಸ ಹೊಸ ಆಲೋಚನೆಗಳಿಗೆ ವಿಭಿನ್ನವಾದ ಶೈಲಿಗೆ ಮನ್ನಣೆ ನೀಡುವ ಕೆಲಸಗಳನ್ನು ಮಾಡುತ್ತಿವೆ. ಆದ್ದರಿಂದ ಅಂಕಗಳೇ ನಮ್ಮ ಬದುಕನ್ನು ರೂಪಿಸಬಲ್ಲದು ಎಂಬ ನಿರೀಕ್ಷೆಯನ್ನು ಬಿಟ್ಟು ವಿಭಿನ್ನವಾದ, ವಿಶಿಷ್ಟವಾದ ಆಲೋಚನೆಗಳನ್ನು ಮಾಡಬೇಕು.

ಸಮಸ್ಯೆಗಳನ್ನು ದಕ್ಷವಾಗಿ ಎದುರಿಸುವ ಸದೃಢ ಮನೋಭಾವ

ಪ್ರಸ್ತುತ ದಿನಗಳಲ್ಲಿ ನಿಗದಿಪಡಿಸಿರುವ ಅಂಕಗಳನ್ನು ಸಂಪೂರ್ಣವಾಗಿ ಪಡೆಯುವಂತಹವರು ಅನೇಕರು ಕಂಡುಬರುತ್ತಿದ್ದಾರೆ. ಆದರೆ ಅವರು ಜೀವನದಲ್ಲಿ ಯಶಸ್ವಿಯಾಗುವುದು ಅತೀ ವಿರಳವಾಗಿರುತ್ತದೆ. ಏಕೆಂದರೆ ಸಮಸ್ಯೆಗಳು ಎದುರಾದರೆ ಸಾಕು ಖಿನ್ನತೆಯಿಂದ ಬಳಲುತ್ತಾರೆ. ನಮ್ಮ ವಿದ್ಯಾಭ್ಯಾಸ ನೀಡಬೇಕಾಗಿರುವುದು ಬದುಕೆಂಬ ಚದುರಂಗದಲ್ಲಿ ಏನೇ ಸಮಸ್ಯೆಗಳು ಎದುರಾದರೂ ಧೈರ್ಯವಾಗಿ ಸದೃಢತೆಯಿಂದ ಎದುರಿಸುವಂತಹ ಮನೋಭಾವ ಬೆಳೆಯುವಂತಾಗಬೇಕು. ಇಂತಹ ಸದೃಢ ಮನೋಭಾವ ಇಂದಿನ ವಿದ್ಯಾರ್ಥಿಗಳು ಬೆಳೆಸಿಕೊಂಡಿದ್ದಲ್ಲಿ ಖಂಡಿತವಾಗಿಯೂ ಯಾವ ಸಾಧನೆಯನ್ನಾದರೂ ಮಾಡಬಲ್ಲರು. ಏನೇ ಸಮಸ್ಯೆಗಳು ಎದುರಾದರೂ ಅದನ್ನು ಎದುರಿಸಿ ನಿಂತು ಹೋರಾಡುವ ಗುಣ ನಮ್ಮಲ್ಲಿದ್ದರೆ ಬೆಟ್ಟದಂತಹ ಸಮಸ್ಯೆಯು ಸ್ವಲ್ಪ ದಿನಗಳಲ್ಲೇ ಪರಿಹಾರವಾಗಬಲ್ಲದು. ಇಂತಹ ಮನೋಭಾವಗಳನ್ನು ರೂಢಿಸಿಕೊಳ್ಳುವ ಗುಣ ಪ್ರತಿಯೊಬ್ಬ ವಿದ್ಯಾರ್ಥಿಗೆ ಇರಬೇಕು.

ಸಕರಾತ್ಮಕವಾದ ಆತ್ಮವಿಶ್ವಾಸ

ಎಲ್ಲಾ ಕೆಲಸಗಳಿಗೂ ಅಂಕಗಳೇ ಮುಖ್ಯವಾಗಿರುವುದಿಲ್ಲ. ಕೆಲವೊಮ್ಮೆ ಸಮಸ್ಯೆಗಳಿಗೆ ನೀವು ಪ್ರತಿಕ್ರಿಯಿಸುವ ರೀತಿ, ನಿಮ್ಮಲ್ಲಿ ಸದೃಢವಾಗಿರುವ ಆತ್ಮವಿಶ್ವಾಸ, ಸಕಾರಾತ್ಮಕವಾಗಿ ಆಲೋಚಿಸುವ ಪರಿ ಇವುಗಳು ಕೂಡ ಪ್ರಮುಖವಾಗಿರುತ್ತದೆ. ಶೈಕ್ಷಣಿಕವಾಗಿ ನೀವು ಗಳಿಸಿರುವ ಅಂಕಗಳು ಒಂದು ಮಾನದಂಡವೇ ಹೊರತು ಅದೇ ಬದುಕಲ್ಲ. ಅಂಕಗಳು ಕಡಿಮೆ ಬಂದರೂ ಕೂಡ ಏನಾದರೂ ಸಾಧನೆ ಮಾಡಬಲ್ಲೆ ಎಂಬಂತಹ ಸಕರಾತ್ಮಕವಾದ ಆತ್ಮವಿಶ್ವಾಸವಿದ್ದರೆ ಖಂಡಿತವಾಗಿಯೂ ಜೀವನದಲ್ಲಿ ಯಶಸ್ಸನ್ನು ಪಡೆಯಲು ಸಾಧ್ಯವಿದೆ. ಕಡಿಮೆ ಅಂಕಗಳಿಂದ ನನ್ನ ಬದುಕು ಹಾಳಾಯಿತು ಎಂದು ಕೀಳರಿಮೆ ಹೊಂದುತ್ತಾ ಪರಿತಪಿಸುವ ಬದಲು ಎಲ್ಲಿ ತಪ್ಪಾಯಿತು? ಎಂಬುದನ್ನು ಪತ್ತೆ ಹಚ್ಚಿ ಆ ತಪ್ಪು ಮುಂದಿನ ದಿನಗಳಲ್ಲಿ ನಡೆಯದಂತೆ ಎಚ್ಚರವಹಿಸಿ ನಡೆದರೆ ಮುಂದೆ ಉತ್ತಮವಾಗಿ ಬದುಕನ್ನು ಕಟ್ಟಿಕೊಳ್ಳಬಹುದು.

ಸೃಜನಶೀಲತೆಗೆ ಒತ್ತು ನೀಡುವಿಕೆ

ಉದ್ಯೋಗವನ್ನು ಪಡೆಯಬೇಕಾದರೆ ಮೊದಲಿಗೆ ಅಂಕಗಳು ಪ್ರಮುಖವಾಗುತ್ತದೆ ನಿಜ. ಆದರೆ ಅಂಕಗಳೇ ಅಂತಿಮವಲ್ಲ. ನಿಮ್ಮಲ್ಲಿ ಸೃಜನಶೀಲತೆ ಇದ್ದರೆ ಖಂಡಿತವಾಗಿಯೂ ಯಾವುದೇ ಬಗೆಯ ಉದ್ಯೋಗವನ್ನು ಪಡೆಯಲು ಸಾಧ್ಯವಿದೆ. ಅಂಕಗಳಿಗೆ ಒತ್ತು ನೀಡಿ ಕೆಲಸ ನೀಡುತ್ತಿದ್ದ ದಿನಗಳು ಕಣ್ಮರೆಯಾಗಿ ವ್ಯಕ್ತಿಯಲ್ಲಿ ಅದರಲ್ಲಿಯೂ ವಿಶೇಷವಾಗಿ ಅಡಗಿರುವ ಸೃಜನಶೀಲತೆಗೆ ಒತ್ತುಕೊಟ್ಟು ಉದ್ಯೋಗವನ್ನು ನೀಡುವ ಅನೇಕ ಕಂಪನಿಗಳು ಇಂದು ಎಲ್ಲೆಡೆ ಕಂಡುಬರುತ್ತದೆ.

ಕಡಿಮೆ ಅಂಕ ಬಂದ ಮಾತ್ರಕ್ಕೆ ದಡ್ಡರು ಎಂದು ಅರ್ಥವಾಗಲಿ, ಅನುತ್ತೀರ್ಣರಾದರೂ ಎಂದ ಮಾತ್ರಕ್ಕೆ ಬುದ್ಧಿವಂತಿಕೆ ಇಲ್ಲ ಎಂದಾಗಲಿ ಭಾವಿಸುವುದು ತಪ್ಪು. ಒಂದಲ್ಲ ಒಂದು ವಿಷಯದಲ್ಲಿ ಅಥವಾ ಕ್ಷೇತ್ರದಲ್ಲಿ ಬುದ್ಧಿವಂತಿಕೆ ಎಂಬುದು ಅಡಕವಾಗಿರುತ್ತದೆ ಅದನ್ನು ಗುರುತಿಸುವ ಪ್ರಯತ್ನವನ್ನು ನಾವು ಮಾಡಬೇಕು ಅಷ್ಟೇ.

ಅಂಕಗಳಿಂದ ಭವಿಷ್ಯಗಳು ನಿರ್ಧಾರವಾಗುವುದಿಲ್ಲ. ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಏರಲು ಅಂಕಗಳು ಅಗತ್ಯ ನಿಜ. ಆದರೆ ಅಂಕಗಳಿಂದಲೇ ಎಲ್ಲವೂ ತೀರ್ಮಾನವಾಗುವುದಿಲ್ಲ. ಅಂಕೆ ಇಲ್ಲದವರನ್ನು ಅಂಕಗಳಿಗಾಗಿಯೇ ಓದಿಸದೇ ಪಂಕದ ಬದುವಲ್ಲಿ ಮಂಕಾಗಿ ನಿಂತವನನ್ನು ನಿರ್ಮಲ ತೀರದೊಳು ಮಿಯ್ಯಿಸಿ ಪಂಕಾಗಿ ಹೊಳೆವಂತೆ ಮಾಡುವುದೇ ಶಿಕ್ಷಣ. ಶಿಕ್ಷಣವೆಂದರೆ ಶಿಕ್ಷಕನು ಶಿಕ್ಷೆಯನ್ನು ಕೊಡುವುದು ಎನ್ನುವುದಂತು ಅಲ್ಲ. ಹಾಗಾದರೆ ಶಿಕ್ಷಣ ಎಂದರೆ ಕ್ಷಣ ಕ್ಷಣವೂ ಎದುರಾಗುವ ಸನ್ನಿವೇಶಗಳಿಂದ ಕಲಿಯುತ್ತಾ ಬದುಕಿಗೆ ಪೂರಕವಾಗಿ ಕಲಿತ ವಿದ್ಯೆಯನ್ನು ಔಚಿತ್ಯವಾದ ವಿವೇಕವಾಗಿ ಪರಿವರ್ತಿಸಿಕೊಳ್ಳುವ ಭಾವ ಸಂಗಮ. ಸ್ವ–ಅನುಭವದ ಮೂಲಕ ಸಾಗಿ ಬರುವ ಜ್ಞಾನದ ತೀಕ್ಷ್ಣ ವ್ಯಕ್ತಿತ್ವಕ್ಕೆ ಶೋಭೆ ತರುವ ಅಂಶ. ಹಾಗೇ ನೋಡಿದರೆ ಈಗಾಗಲೇ ಬದುಕಿ ಬಂದಿರುವ ಈ ಹಿಂದಿನ ತಲೆಮಾರಿಗೆ ಹೇಳಿಕೊಳ್ಳುವಷ್ಟು ಅಂಕಗಳೇ ಇಲ್ಲ. ಎರಡನೇ ದರ್ಜೆಯ ಕ್ಲಾಸ್, ಮೂರನೇ ದರ್ಜೆಯ ಕ್ಲಾಸಲ್ಲಿ ತೇರ್ಗಡೆ ಹೊಂದಿ, ಬದುಕುವ ಕೌಶಲಗಳನ್ನು ರೂಢಿಸಿಕೊಂಡು ಬದುಕು ಸಾಗಿಸುತ್ತಾ ಒಂದು ನೌಕರಿಯನ್ನು ಹಿಡಿದು ಮುಂದೆ ಬಂದು, ತಮ್ಮ ಮಕ್ಕಳನ್ನು ಮುಂದೆ ತರಲು ಪ್ರಯತ್ನಿಸಿ ಯಶಸ್ವಿಯಾದವರು ಕೆಲವು ಮಂದಿಯಾದರೆ , ಹಿಂದೆ ಸರಿದವರು ಇನ್ನೂ ಕೆಲವು ಮಂದಿ. ಇಂತಹವರಿಗೆ ಅಂಕಗಳ ಬಲೆಯಲ್ಲಿ ಸಿಲುಕಿಕೊಳ್ಳದೆ ಬದುಕಿನ ಕಲೆಯಲ್ಲಿ ಕುಶಾಗ್ರಮತಿಯಾಗಿ, ಮಾನವಂತವರಾಗಿ ಸಂಸ್ಕಾರ, ಜೀವನ ಮೌಲ್ಯಗಳು, ಮಾನವೀಯ ಮೌಲ್ಯಗಳಿಂದ ಸತ್ಯ, ಪ್ರಾಮಾಣಿಕತೆ, ನೊಂದವರ ನೋವಿಗೆ ನೋವಾಗಿ, ಬೆಂದವರ ಒಡಲಿಗೆ ಮಡಿಲಾಗಿ, ಕಂಬನಿ ಸುರಿಸುವ ಮನಗಳಿಗೆ ಸಾಂತ್ವನದ ಬೆಳಕಾಗಿ, ದಯೆ ಕರುಣೆಯಲ್ಲಿ ಒಂದುಗೂಡಿ ಸತ್ಯದ ಜೊತೆಗೆ ಬದುಕಿದವರಾಗಿದ್ದಾರೆ.

ಆಗಿದ್ದರೆ ಅಂಕಗಳು ಮುಖ್ಯವಲ್ಲವೇ ಎಂದರೆ ಖಂಡಿತವಾಗಿ ಮುಖ್ಯ. ಯಾವುದೇ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕನಿಷ್ಠ ಇಷ್ಟು ಅಂಕಗಳನ್ನು ಪಡೆದಿರಬೇಕೆಂಬ ನಿಯಮವಿರುತ್ತದೆ.ಈ ಹಿನ್ನಲೆಯಲ್ಲಿ ಅಂಕಗಳು ಪ್ರಮುಖ,ಪ್ರಧಾನವಾಗಿರುತ್ತದೆ.ಜೊತೆಗೆ ವಿದ್ಯಾರ್ಥಿಯೊಬ್ಬನ ಸಾಮರ್ಥ್ಯವನ್ನು ಅಳೆಯಲು ಮೊದಲಿಗೆ ಅಂಕಗಳನ್ನು ಮುಖ್ಯ ಎಂದು ಪರಿಗಣಿಸಲಾಗುತ್ತದೆ. ಹೆಚ್ಚು ಅಂಕಗಳನ್ನು ಪಡೆದವರನ್ನು ಪ್ರತಿಯೊಬ್ಬರೂ ಹಾಡಿ–ಹೊಗಳಿ ಅಭಿನಂದಿಸುತ್ತಾರೆ. ಇದು ಒಳ್ಳೆಯ ಲಕ್ಷಣವೇ ಆದರೆ ಅದೇ ಸಂದರ್ಭದಲ್ಲಿ ಕಡಿಮೆ ಅಂಕಗಳನ್ನು ಪಡೆದವರನ್ನು ಕೀಳಾಗಿ ಕಾಣಬಾರದು. ಅವರಿಗೆ ನೋವು ನೀಡಬಾರದೆಂಬ ಕಳಕಳಿಯಿಂದ ಬರೆದಿರುವ ಲೇಖನ ಇದಾಗಿದೆ. ಜ್ಞಾನವನ್ನು ಅಂಕಗಳಿಂದ ಅಳೆಯುವ ಪದ್ಧತಿ ಬದಲಾದರೆ ಖಂಡಿತವಾಗಿ ಎಲ್ಲರ ಮನಸ್ಥಿತಿ ಬದಲಾಗುತ್ತದೆ.

ಕೊಲೆಯಾಗಿದ್ದಾಳೆನ್ನಲಾದ ಮಹಿಳೆ ಪ್ರತ್ಯಕ್ಷ ಪ್ರಕರಣ

ಮೈಸೂರಲ್ಲಿ ಮಲ್ಲಿಗೆ ಹೇಳಿಕೆ ದಾಖಲಿಸಿದ ಎಸ್ಪಿ

ಮೈಸೂರು,ಏ.8(ಆರ್‌ಕೆ)– ಪತಿಯೇ ಕೊಲೆ ಮಾಡಿದ್ದಾರೆಂಬ ಪ್ರಕರಣದಲ್ಲಿ ಮಲ್ಲಿಗೆಯನ್ನು ಸೋಮವಾರ ವಿಚಾರಣೆ ನಡೆಸಿದ ಎಸ್ಪಿ ಎನ್.ವಿಷ್ಣುವರ್ಧನ್ ಆಕೆಯ ಹೇಳಿಕೆಯನ್ನು ದಾಖಲು ಮಾಡಿದ್ದಾರೆ.

ಮೈಸೂರಿನ ತಮ್ಮ ಕಚೇರಿಗೆ ಕರೆಸಿಕೊಂಡು ವಿಚಾರಣೆ ನಡೆಸಿದ ಅವರು, ನಾಪತ್ತೆಯಾದ ಬಳಿಕ ಪತಿ, ಸಂಬಂಧಿಕರಿಗೂ ತಿಳಿಯದ ಹಾಗೆ ಎಲ್ಲಿ, ಯಾರೊಂದಿಗೆ ವಾಸವಾಗಿದ್ದೀರಿ, ತಾವು ಪರ ಪುರುಷನೊಂದಿಗೆ ಜೀವನ ನಡೆಸುತ್ತಿದ್ದ ಉದ್ದೇಶವೇನು? ತಾನು ಹತ್ಯೆಯಾಗಿರುವುದಾಗಿ ಪ್ರಕರಣ ದಾಖಲಿಸಿ ಗಂಡನನ್ನೇ ಆರೋಪಿ ಎಂದು ಜೈಲಿಗೆ ಕಳುಹಿಸಿದ್ದರೂ, ಆ ವಿಷಯ ತಿಳಿಯಲಿಲ್ಲವೇ? ನಿಮ್ಮ ಪತಿ ಆರೋಪಿಯಲ್ಲ. ನಾನು ಬದುಕಿದ್ದೇನೆ ಎಂದು ಏಕೆ ಹೇಳಲಿಲ್ಲ ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿ ಮಲ್ಲಿಗೆ ನೀಡಿದ ಉತ್ತರವನ್ನು ಲಿಖಿತ ಹೇಳಿಕೆಯಲ್ಲಿ ದಾಖಲಿಸಿದ್ದಾರೆ.

ಈ ಪ್ರಕರಣದಲ್ಲಿ ಸಂಬಂಧಪಟ್ಟ ವ್ಯಕ್ತಿಗಳು, ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ, ಸಾಕ್ಷಿದಾರರನ್ನು ವಿಚಾರಣೆ ನಡೆಸಿ ಏಪ್ರಿಲ್ 17ರಂದು ವರದಿ ಸಲ್ಲಿಸುವಂತೆ ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಸೂಚನೆ ನೀಡಿರುವುದರಿಂದ ತಾವು ವಿಚಾರಣೆ ನಡೆಸುತ್ತಿರುವುದಾಗಿ ಎಸ್ಪಿ ವಿಷ್ಣುವರ್ಧನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಪ್ರಕರಣ ಸಂಬಂಧ ಇಂದು ಇಬ್ಬರು ಸಾಕ್ಷಿದಾರರನ್ನೂ ಕರೆಸಿ ವಿಚಾರಣೆ ಮಾಡಿರುವುದಾಗಿಯೂ ತಿಳಿಸಿದ ಅವರು, ಮುಂದಿನ ದಿನಗಳಲ್ಲಿ ಮಲ್ಲಿಗೆ ಪತಿ ಸುರೇಶ್ ಹೇಳಿಕೆಯನ್ನೂ ದಾಖಲು ಮಾಡಲಾಗುವುದು ಎಂದರು.

ಕುಶಾಲನಗರದ ಬಸವನಹಳ್ಳಿ ನಿವಾಸಿಯಾದ ಮಲ್ಲಿಗೆ ನಾಲ್ಕು ವರ್ಷಗಳ ಹಿಂದೆ ಕಣ್ಮರೆಯಾಗಿದ್ದು, ಇದೇ ವೇಳೆ ಮಹಿಳೆಯ ಅಸ್ಥಿಪಂಜರವೊಂದು ಪತ್ತೆಯಾಗಿದ್ದು, ಅದನ್ನೇ ಮಲ್ಲಿಗೆಯದ್ದು ಎಂದು ಭಾವಿಸಿ ಪೊಲೀಸರು ಪತಿ ಸುರೇಶ ಆಕೆಯನ್ನು ಹತ್ಯೆ ಮಾಡಿದ್ದಾನೆಂದು ಪ್ರಕರಣ ದಾಖಲಿಸಿ ಆತನನ್ನು ಜೈಲಿಗೆ ಕಳುಹಿಸಿದ್ದರು. ಆದರೆ ಮಡಿಕೇರಿಯ ಹೋಟೆಲೊಂದರಲ್ಲಿ ಗಣೇಶ ಎಂಬುವನೊಂದಿಗೆ ಮಲ್ಲಿಗೆ ತಿಂಡಿ ತಿನ್ನುತ್ತಿದ್ದುದನ್ನು ಕಂಡ ಬಳಿಕ ಪತಿ ಸುರೇಶ ಪೊಲೀಸರಿಗೆ ಮಾಹಿತಿ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಕೆಹೆಚ್‌ಬಿ ಮನೆ ಖರೀದಿಗೆ ಮೈಸೂರಲ್ಲಿ ನೀರಸ ಪ್ರತಿಕ್ರಿಯೆ

ಅರ್ಜಿ ಸಲ್ಲಿಸಲು ಮೇ 2ರವರೆಗೆ ಅವಧಿ ವಿಸ್ತರಣೆ

ಮೈಸೂರು,ಏ.8(ಆರ್‌ಕೆ)– ಮೈಸೂರು ತಾಲೂಕು ಜಯಪುರ ಹೋಬಳಿ ಕೆಂಚಲಗೂಡು ಬಳಿ ಕರ್ನಾಟಕ ಗೃಹ ಮಂಡಳಿ (ಕೆಹೆಚ್‌ಬಿ) ನಿರ್ಮಿಸಲುದ್ದೇಶಿಸಿರುವ ಗುಂಪು ಮನೆ (ಅಪಾರ್ಟ್‌ಮೆಂಟ್) ಖರೀದಿಸಲು ಸಾರ್ವಜನಿಕರು ಆಸಕ್ತಿ ತೋರುತ್ತಿಲ್ಲ.

ಪರಿಣಾಮ ಖರೀದಿದಾರರನ್ನು ಆಕರ್ಷಿಸಲು ಗೃಹ ಮಂಡಳಿಯು ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ 2025ರ ಏಪ್ರಿಲ್ 2ರ ಕಡೇ ದಿನಾಂಕವನ್ನು ಮೇ 2ರವರೆಗೆ ವಿಸ್ತರಿಸಿದೆ. 192 ಮನೆಗಳನ್ನು ನಿರ್ಮಿಸಲುದ್ದೇಶಿಸಿ ಕರೆದಿದ್ದ ಅರ್ಜಿಗೆ ಮೈಸೂರು ಜಿಲ್ಲೆಯಾದ್ಯಂತ ಕೇವಲ 52 ಮಂದಿ ಮಾತ್ರ ಆಸಕ್ತಿ ತೋರಿರುವುದರಿಂದ ಒಂದು ತಿಂಗಳ ಹೆಚ್ಚುವರಿ ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕ ಗೃಹ ಮಂಡಳಿಯು 2, 3 ಬಿಹೆಚ್‌ಕೆ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಲುದ್ದೇಶಿಸಿದ್ದು, 2 ಬಿಹೆಚ್‌ಕೆ ಅಪಾರ್ಟ್‌ಮೆಂಟ್‌ಗೆ 3 ಲಕ್ಷ ರೂ. ಠೇವಣಿಯೊಂದಿಗೆ ನೋಂದಾಯಿಸಿಕೊಳ್ಳುವಂತೆ ತಿಳಿಸಲಾಗಿತ್ತು. ಆದರೂ, 52 ಮಂದಿ ಮಾತ್ರ ಅರ್ಜಿ ಸಲ್ಲಿಸಿ ನೋಂದಾಯಿಸಿಕೊಂಡಿದ್ದಾರೆ. ಮಂಡಳಿಯು 160, 2 ಬಿಹೆಚ್‌ಕೆ ಅಪಾರ್ಟ್‌ಮೆಂಟ್‌ಗಳು ಹಾಗೂ 3–ಬಿಹೆಚ್‌ಕೆಯ 32 ಅಪಾರ್ಟ್‌ಮೆಂಟ್ ನಿರ್ಮಿಸಲು ವಸತಿ ಯೋಜನೆ ಸಿದ್ಧಪಡಿಸಿದೆ. ಅರ್ಜಿ ಸಲ್ಲಿಸಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ, ಜನರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾದ ಕಾರಣ ಇದೀಗ ಒಂದು ತಿಂಗಳ ಕಾಲ ಅವಧಿ ವಿಸ್ತರಿಸಲಾಗಿದೆ.

ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆಯ ಪ್ರಾಂತೀಯ ಸಮ್ಮೇಳನ



ಮೈಸೂರಿನ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆಯ ಮೈಸೂರು ಪ್ರಾಂತೀಯ ಸಮ್ಮೇಳನವನ್ನು ಅಧ್ಯಕ್ಷ ಕೆ.ಆರ್.ಭಾಸ್ಕರಾನಂದ ಉದ್ಘಾಟಿಸಿದರು.

ಮೈಸೂರು,ಏ.8(ಬಿಎಲ್‌ಯು)– ಅಂತರರಾಷ್ಟ್ರೀಯ ಲಯನ್ಸ್ ಮೈಸೂರು ಸಂಸ್ಥೆಯ ಪ್ರಾಂತೀಯ ಸಮ್ಮೇಳನ ನಡೆಯಿತು.

ವಿಶ್ವೇಶ್ವರನಗರದ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಸಮ್ಮೇಳವನ್ನು ಅಂತರಾಷ್ಟ್ರೀಯ ಲಯನ್ಸ್ ಮೈಸೂರಿನ ಪ್ರಾಂತೀಯ ಅಧ್ಯಕ್ಷ ಕೆ.ಆರ್.ಭಾಸ್ಕರಾನಂದ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಲಯನ್ಸ್ ಸಂಸ್ಥೆ ಒಂದು ಶತಮಾನ ಕಾಲ ಸಮಾಜ ಸೇವಾ ಕಾರ್ಯ ಮಾಡಿ ಈಗ 2ನೇ ಶತಮಾನಕ್ಕೆ ಕಾಲಿಟ್ಟಿದೆ. ಜನರ ಸಂಕಷ್ಟ ಪರಿಹಾರ ಮಾಡಿ, ವ್ಯವಸ್ಥೆ ಸುಧಾರಣೆಗೆ ಸಲ್ಲಿಸುತ್ತಿರುವ ಲಯನ್ಸ್ ಸಂಸ್ಥೆಯ ಸೇವಾ ಕಾರ್ಯ ಸ್ಮರಣೀಯ ಎಂದರು.

ಯಾರು ಎಷ್ಟೇ ಆಸ್ತಿ, ಸಂಪತ್ತು ಹೊಂದಿರಬಹುದು. ಆದರೆ ಮನುಷ್ಯನಿಗೆ ಉತ್ತಮ ಆರೋಗ್ಯ ಇಲ್ಲವೆಂದರೆ ಹಣ, ಆಸ್ತಿ ನಗಣ್ಯ ಎಂದು ಅಭಿಪ್ರಾಯಪಟ್ಟರು.

ಭಾಸ್ಕರಾನಂದ ಅವರ ಪತ್ನಿ ಅಂಬರ ಭವಾನಿ, ಲಯನ್ ಜಿಲ್ಲಾ ರಾಜ್ಯಪಾಲ ಎಸ್.ಸುಬ್ರಹ್ಮಣ್ಣ, ಸಮ್ಮೇಳನದ ಅತಿಥೇಯ ಸಮಿತಿ ಅಧ್ಯಕ್ಷ ಡಾ.ಎನ್.ಕೃಷ್ಣೇಗೌಡ, ಸಂಚಾಲಕ ಟಿ.ಹೆಚ್.ವೆಂಕಟೇಶ್, ವಲಯ 1ರ ಅಧ್ಯಕ್ಷ ಹೆಚ್.ಸಿ.ಕಾಂತರಾಜು, ವಲಯ 2ರ ಅಧ್ಯಕ್ಷೆ ಮೈತ್ರೇಯ, ಸಂಚಾಲಕ ಎನ್.ರವಿಕುಮಾರ್, ಜಯಪ್ರಕಾಶ್, ಸಂಯೋಜಕರಾದ ಹೇಮಂತ್, ವಿಜಯಕುಮಾರ್, ಪುರುಷೋತ್ತಮ್, ರಾಕೇಶ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರಧ್ವಾಜ್, ಡಾ.ಕೆ.ಎಲ್.ಹರೀಶ್, ಡಾ.ವೋನಿಕಾ ಭಾಸ್ಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

3 ಕೋಟಿ ರೂ. ವೆಚ್ಚದಲ್ಲಿ ಮಿಮ್ಸ್ ಆಸ್ಪತ್ರೆ ಅಭಿವೃದ್ಧಿ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಾಮಗಾರಿ ಪರಿಶೀಲನೆ, ಅಧಿಕಾರಿಗಳೊಂದಿಗೆ ಚರ್ಚೆ

ಮಂಡ್ಯ,ಏ.8– ಇಲ್ಲಿನ ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ (ಮಿಮ್ಸ್ MIMS) ಭೇಟಿ ನೀಡಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವಾಲಯದ ಅಧೀನದ ಕಂಪನಿಗಳ ಸಿಎಸ್‌ಆರ್ ಅನುದಾನದ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಪರಿಶೀಲಿಸಿ, ಅಧಿಕಾರಿಗಳ ಜತೆ ಚರ್ಚೆ ನಡೆಸಿದರು.

ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಸಿಇಒ ಹಾಗೂ ಮಿಮ್ಸ್ ನಿರ್ದೇಶಕರ ಜತೆ ಸಭೆ ನಡೆಸಿದ ಕೇಂದ್ರ ಸಚಿವರು; ಸುಮಾರು 3 ಕೋಟಿಗೂ ಹೆಚ್ಚು ವೆಚ್ಚದಲ್ಲಿ ಸಿಎಸ್‌ಆರ್ ಅನುದಾನದ ಮೂಲಕ ಕೈಗೊಂಡಿರುವ ಕಾಮಗಾರಿಗಳನ್ನು ಪರಿಶೀಲಿಸಿ ಮಾಹಿತಿ ಪಡೆದು ಚರ್ಚಿಸಿದರು.

ಮಿಮ್ಸ್‌ನಲ್ಲಿ ಹೊಸ ಶೌಚಾಲಯ ಬ್ಲಾಕ್ ನಿರ್ಮಾಣ, ಹಳೆಯ ಶೌಚಾಲಯಗಳ ನವೀಕರಣ, ಹೊಸ ಲಿಫ್ಟ್ ಅಳವಡಿಕೆ, ಮಕ್ಕಳ ಆರೈಕೆ ಘಟಕದ ಮೇಲ್ದಾವಣಿ, ಹೊಸ ಕಿಟಕಿ ಬಾಗಿಲು ಅಳವಡಿಕೆ, ಕಟ್ಟಡಕ್ಕೆ ಬಣ್ಣ ಸೇರಿ ಮತ್ತು ಇನ್ನಿತರೆ ಕಾಮಗಾರಿಗಳ ಉದ್ದೇಶಕ್ಕಾಗಿ ಸಚಿವರು ಕ್ರಮ ಕೈಗೊಂಡಿದ್ದಾರೆ.



ಜಿಲ್ಲಾಧಿಕಾರಿ, ಜಿಪಂ ಸಿಇಒ ಹಾಗೂ ಮಿಮ್ಸ್ ನಿರ್ದೇಶಕರ ಜತೆ ಸಭೆ ನಡೆಸಿದ ಕುಮಾರಸ್ವಾಮಿ.

ಬೃಹತ್ ಕೈಗಾರಿಕೆ ಸಚಿವಾಲಯದ ಅಧೀನದಲ್ಲಿರುವ ಭಾರತ್ ಹೆವಿ ಎಲೆಕ್ಟ್ರಿಕಲ್ ಹಾಗೂ ಉಕ್ಕು ಸಚಿವಾಲಯದ ಅಧೀನದಲ್ಲಿರುವ ಭಾರತೀಯ ಉಕ್ಕು ಪ್ರಾಧಿಕಾರ, ಭಾರತೀಯ ಖನಿಜಾಭಿವೃದ್ಧಿ ನಿಗಮ ವತಿಯಿಂದ ಮಿಮ್ಸ್‌ಗೆ ಸಿಎಸ್‌ಆರ್ ನೆರವು ನೀಡಿವೆ. ಕ್ಯಾನ್ಸರ್ ಚಿಕಿತ್ಸಾ ಘಟಕದ ಉನ್ನತೀಕರಣಕ್ಕೂ ಅನುದಾನ ನೀಡುವುದಾಗಿ ಸಚಿವರು ಹೇಳಿದರು.

ಅಲ್ಲದೆ, ರೋಗಿಗಳಿಗೆ ಅನುಕೂಲ ಆಗುವಂತೆ ಮಿಮ್ಸ್‌ನಲ್ಲಿ ಒಟ್ಟಾರೆ ಎಲ್ಲಾ ರೀತಿಯ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ಕೊಡಲಾಗುವುದು ಎಂದು ಅವರು ಹೇಳಿದರು.

ಮಂಡ್ಯದಲ್ಲಿ ಅತ್ಯಾಧುನಿಕ, ಹೈಟೆಕ್ ಆಟೋ ನಿಲ್ದಾಣ ನಿರ್ಮಾಣಕ್ಕೆ ತಕ್ಷಣವೇ ಕ್ರಮ: ನಗರದ ಆಟೋ ಚಾಲಕರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಸುಸಜ್ಜಿತ ಆಟೋ ನಿಲ್ದಾಣ ನಿರ್ಮಾಣಕ್ಕೆ ತಕ್ಷಣವೇ ಕ್ರಮ ಕೈಗೊಳ್ಳುವುದಾಗಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಟೋ ಚಾಲಕರಿಗೆ ಭರವಸೆ ನೀಡಿದರು.

ಅಂಬೇಡ್ಕರ್ ಭವನದ ಕಾರ್ಯಕ್ರಮಕ್ಕೆ ತೆರಳುವ ಮಾರ್ಗದಲ್ಲಿ ಮನವಿ ನೀಡಲು ಬಂದ ಆಟೋ ಚಾಲಕರಿಗೆ ಸ್ಪಂದಿಸಿದ ಸಚಿವರು, ಮಳೆ ಬಿಸಿಲಿಗೆ ರಕ್ಷಣೆ ನೀಡುವಂತಹ ವಿಶಾಲವಾದ, ಅತ್ಯಾಧುನಿಕ, ಹೈಟೆಕ್ ಮಾದರಿಯ ಆಟೋ ನಿಲ್ದಾಣವನ್ನು ನಿರ್ಮಿಸಿಕೊಡುವುದಾಗಿ ತಿಳಿಸಿದರು. ನಾಳೆಯಿಂದಲೇ ಆಟೋ ನಿಲ್ದಾಣ ನಿರ್ಮಾಣಕ್ಕೆ ಚಾಲನೆ ಸಿಗುವ ರೀತಿಯಲ್ಲಿ ಕ್ರಮ ಕೈಗೊಳ್ಳುವೆ ಎಂದು ಹೇಳಿದ ಸಚಿವರು, ಸಂಜಯ್ ಸರ್ಕಲ್ ಮತ್ತು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಇರುವ ಆಟೋ ನಿಲ್ದಾಣಗಳಿಗೆ ಉರಿ ಬಿಸಿಲಿನಲ್ಲಿಯೇ ಭೇಟಿ ಕೊಟ್ಟರು. ಈ ಸಂದರ್ಭದಲ್ಲಿ ಅವರು ಕೆಲ ಹೊತ್ತು ಅಲ್ಲಿ ಆಟೋ ಚಾಲಕರ ಜತೆ ಮಾತುಕತೆ ನಡೆಸಿ ಸಮಸ್ಯೆಗಳನ್ನು ಆಲಿಸಿದರು.

ಮಳೆ ಬಂದಾಗ ಆಟೋಗಳನ್ನು ನಿಲ್ಲಿಸಿ ಪ್ರಯಾಣಿಕರಿಗೆ ಸೇವೆ ಒದಗಿಸುವುದು ಕಷ್ಟವಾಗುತ್ತಿದೆ. ಅದೇ ರೀತಿ ಬೇಸಿಗೆ ಕಾಲದಲ್ಲಿಯೂ ಆಟೋಗಳನ್ನು ಬಿಸಿಲಿನಲ್ಲಿಯೇ ನಿಲ್ಲಿಸಿಕೊಂಡು ಇರಬೇಕಿದೆ. ಇದಕ್ಕೆ ಪರಿಹಾರ ಒದಗಿಸಿ ಎಂದು ಆಟೋ ಚಾಲಕರು ಸಚಿವರಲ್ಲಿ ಮನವಿ ಮಾಡಿದರು.

ಸಂಸದರ ಅನುದಾನದಲ್ಲಿ ಕೂಡಲೇ ಆಟೋ ನಿಲ್ದಾಣಕ್ಕೆ ಹಣ ಮಂಜೂರು ಮಾಡುವುದಾಗಿ ಸಚಿವರು ಭರವಸೆ ನೀಡಿದರು.

ಪಾಂಡವಪುರ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಹಣ ದುರ್ಬಳಕೆ ಆರೋಪ

ಸಿಐಡಿ ತನಿಖೆ ಆರಂಭ, ನೌಕರರಿಂದ ಹೇಳಿಕೆ ದಾಖಲೆ

ಪಾಂಡವಪುರ, ಏ.8– ಪಾಂಡವಪುರ ಕಸಬಾ ಕೃಷಿ ಪತ್ತಿನ ಸಹಕಾರ ಸಂಘ (ಪಿಎಸಿಎಸ್)ದ ನೌಕರರು ಕೋಟ್ಯಾಂತರ ಹಣ ದುರ್ಬಳಕೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ಆಗಮಿಸಿದ್ದ ಸಿಐಡಿ ತಂಡದ ಅಧಿಕಾರಿಗಳು ಮಂಗಳವಾರ ತನಿಖೆ ಪ್ರಾರಂಭಿಸಿ ನೌಕರರ ಹೇಳಿಕೆಗಳನ್ನು ದಾಖಲಿಸಿಕೊಂಡರು.

ಪಟ್ಟಣದ ಪಿಎಸಿಎಸ್‌ನಲ್ಲಿ ರೈತರು ಅಡವಿಟ್ಟಿದ್ದ ಚಿನ್ನಾಭರಣ, ಸಾರ್ವಜನಿಕರ ಪಿಗ್ಮಿ ಹಣ, ಠೇವಣಿ ಹಣ ಹಾಗೂ ರಸಗೊಬ್ಬರ ಮಾರಾಟದಿಂದ ಬಂದಿದ್ದ ಹಣ ಸೇರಿದಂತೆ ಒಟ್ಟಾರೆ 4 ಕೋಟಿಗೂ ಅಧಿಕ ಮೊತ್ತದ ಹಣವನ್ನು ಈ ಹಿಂದಿನ ಅಧಿಕಾರಿಗಳು ಮತ್ತು ನೌಕರರು ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಈ ಹಿಂದೆಯೇ ಕಚೇರಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿ ಹಣ ದುರುಪಯೋಗವಾಗಿರುವುದನ್ನು ಸದನದಲ್ಲಿ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆಯುವ ಜತೆಗೆ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಸಂಘದ ಅಧ್ಯಕ್ಷ ಬೇವಿನಕುಪ್ಪೆ ಯೋಗೇಶ್ ಅವರ ಮೂಲಕ ದೂರು ದಾಖಲಿಸಿದ್ದರು.



ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಗೆ ಸಿಐಡಿ ಅಧಿಕಾರಿಗಳು ಭೇಟಿ ನೀಡಿದ್ದ ಸಂದರ್ಭ.

ಪಾಂಡವಪುರ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿದ ವೇಳೆ ಸಂಘದಲ್ಲಿ ಹಣ ದುರ್ಬಳಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾದ ಹಿನ್ನೆಲೆಯಲ್ಲಿ ಪ್ರಾಥಮಿಕ ವರದಿ ತಯಾರಿಸಿ ಪ್ರಕರಣವನ್ನು ಕಳೆದ ವಾರ ಸಿಐಡಿಗೆ ವರ್ಗಾಯಿಸಿದ್ದರು. ಅದರಂತೆ ಸಿಐಡಿ ಎಸ್‌ಪಿ ಪುರುಷೋತ್ತಮ್ ಮತ್ತು ಡಿವೈಎಸ್‌ಪಿ ಗೌತಮ್ ನೇತೃತ್ವದಲ್ಲಿ ಇಂದು ಏಕಾಏಕಿ ದಾಳಿ ನಡೆಸಿ 11 ಜನರ ಅಧಿಕಾರಿಗಳ ತಂಡ ಸಂಘದ ಎಲ್ಲಾ ನೌಕರರ ವಿಚಾರಣೆ ನಡೆಸಿ ಪ್ರತಿಯೊಬ್ಬರ ಹೇಳಿಕೆಗಳನ್ನು ದಾಖಲಿಸಿಕೊಂಡರು. ನಾಲ್ಕು ದಿನಗಳ ಕಾಲ ತನಿಖೆ ಮುಂದುವರೆಯಲಿದೆ.

ಸಂಘದ ಕಚೇರಿಗೆ ಭೇಟಿ ನೀಡಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ರೈತರು, ತರಕಾರಿ ಮತ್ತು ಹೂ ಮಾರಾಟಗಾರರು ಹೊಟ್ಟೆ ಬಟ್ಟೆ ಕಟ್ಟಿ ಕೂಡಿಟ್ಟಿದ್ದ ಪಿಗ್ಮಿ ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಸಂಘದಲ್ಲಿ 8 ಕೋಟಿಗೂ ಅಧಿಕ ಹಣ ದುರ್ಬಳಕೆಯಾಗಿರುವುದು ಕಂಡು ಬರುತ್ತಿದೆ. ಕಸಬಾ ಸೊಸೈಟಿಯನ್ನು ನಂಬಿ ಹಣ ಕಟ್ಟಿರುವ ಬಡವರಿಗೆ ನ್ಯಾಯ ಕೊಡಿಸಬೇಕಿದೆ. ಸಿಐಡಿ ತನಿಖೆ ಮುಗಿದು ಪ್ರಕರಣದಲ್ಲಿ ಭಾಗಿಯಾಗಿರುವ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ರೈತರು ಮತ್ತು ಬಡವರ ಹಣ ಹಿಂದಿರುಗಿಸಿದರೆ ನಮ್ಮ ಹೋರಾಟಕ್ಕೆ ಜಯ ಸಿಗಲಿದೆ ಎಂದರು.

ವೈರಮುಡಿಗೆ ತೆರಳುತ್ತಿದ್ದ ಬೈಕ್ ಸವಾರ ರಸ್ತೆ ಅಪಘಾತದಲ್ಲಿ ಸಾವು

ಮೇಲುಕೋಟೆ: ವೈರಮುಡಿ ಉತ್ಸವ ನೋಡಲು ಬೈಕ್‌ನಲ್ಲಿ ತೆರಳುತ್ತಿದ್ದ ವ್ಯಕ್ತಿಯೊಬ್ಬರಿಗೆ ಅಪರಿಚಿತ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿ ಮತ್ತೊಂದು ಬೈಕ್‌ನ ಸವಾರರಿಬ್ಬರಿಗೆ ಗಾಯಗಳಾಗಿರುವ ಘಟನೆ ಜಕ್ಕನಹಳ್ಳಿ ಬಳಿ ಸಂಭವಿಸಿದೆ.

ಮಂಡ್ಯ ನಗರದ ಹೊರವಲಯದ ಶ್ರೀನಿವಾಸಪುರ ಗೇಟ್ ನಿವಾಸಿ ಎಚ್.ಎನ್.ಯೋಗೇಶ್(40) ಮೃತಪಟ್ಟ ಬೈಕ್ ಸವಾರ.

ಸೋಮವಾರ ರಾತ್ರಿ ಮಂಡ್ಯದಿಂದ ಬೈಕ್‌ನಲ್ಲಿ ಮೇಲುಕೋಟೆಗೆ ತೆರಳುತ್ತಿದ್ದ ಎಚ್.ಎನ್.ಯೋಗೇಶ್ ಜಕ್ಕನಹಳ್ಳಿ ಸಮೀಪಿಸುತ್ತಿದ್ದ ವೇಳೆ ಎದುರಿನಿಂದ ಬಂದ ಅಪರಿಚಿತ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಯೋಗೇಶ್ ತೀವ್ರ ಗಾಯಗೊಂಡಿದ್ದರು. ಅದೇ ಮಾರ್ಗವಾಗಿ ಬರುತ್ತಿದ್ದವರು ಇವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಕೊನೆಯುಸಿರೆಳೆದಿದ್ದಾರೆನ್ನಲಾಗಿದೆ. ವಿಷಯ ತಿಳಿದ ಮೇಲುಕೋಟೆ ಪೊಲೀಸರು ಮಹಜರು ನಡೆಸಿ ಶವವನ್ನು ಪಾಂಡವಪುರ ತಾಲೂಕು ಆಸ್ಪತ್ರೆ ಶವಾಗಾರಕ್ಕೆ ರವಾನಿಸಿ, ಮಂಗಳವಾರ ಮರಣೋತ್ತರ ಪರೀಕ್ಷೆಯ ಬಳಿಕ ಶವವನ್ನು ಕುಟುಂಬದವರಿಗೆ ವಹಿಸಿದ್ದಾರೆ.

ಅಪಘಾತದಲ್ಲಿ ಮತ್ತೊಂದು ಬೈಕ್‌ನಲ್ಲಿ ತೆರಳುತ್ತಿದ್ದವರೂ ಕೆಳಗೆ ಬಿದ್ದ ಪರಿಣಾಮ ಬೈಕ್ ಸವಾರ ರಂಗ ಎಂಬುವರಿಗೆ ಗಾಯಗಳಾಗಿದ್ದು, ಅವರನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನನ್ನ ಸಿಎಂ ಮಾಡಿದ್ದು ಚಲುವರಾಯಸ್ವಾಮಿ ಅಲ್ಲ, ಶಾಸಕರು: ಕುಮಾರಸ್ವಾಮಿ

ಮಂಡ್ಯ,ಏ.8– ಸಚಿವ ಚಲುವರಾಯಸ್ವಾಮಿ ನನ್ನನ್ನು ಸಿಎಂ ಮಾಡಿದ್ದು ಎನ್ನುವುದು ಬಹುದೊಡ್ಡ ಜೋಕ್. ಪಕ್ಷದ ಶಾಸಕರು ನನ್ನನ್ನು ಮುಖ್ಯಮಂತ್ರಿ ಮಾಡಿದ್ದು ಎಂಬುದನ್ನು ಆ ವ್ಯಕ್ತಿ ಮರೆಯಬಾರದು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕುಟುಕಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಲುವರಾಯಸ್ವಾಮಿ ಹೇಳಿಕೆಯ ಬಗ್ಗೆ ಸುದ್ದಿಗಾರರು ಕೇಳಿದ ಪ್ರತಿಕ್ರಿಯೆಗೆ ಖಡಕ್ ಉತ್ತರ ಕೊಟ್ಟ ಕೇಂದ್ರ ಸಚಿವರು; ನನ್ನ ಜತೆ ಶಾಸಕರು ಇದ್ದರು ಎಂಬುದು ಆಗ ನನ್ನ ಜತೆಯಲ್ಲಿಯೇ ಇದ್ದ ಆ ವ್ಯಕ್ತಿಗೂ ಗೊತ್ತು. ಈತನ ಮುಖ ನೋಡಿಕೊಂಡು ಶಾಸಕರು ಬಂದ್ರಾ? ನನ್ನ ನಂಬಿಕೆ, ವಿಶ್ವಾಸದಿಂದ ಬಂದರು. ಎಲ್ಲವೂ ಈತನಿಗೆ ಗೊತ್ತಿಲ್ಲವೇ? ಎಂದು ತಿರುಗೇಟು ಕೊಟ್ಟರು.

ನಾಳೆ ಮಂಡ್ಯದ ಕೆಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ, ಏ.8– ಲಿಂಕ್‌ಲೈನ್ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಏ.10 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿ.ವಿ ನಗರ, ಶ್ರೀ ರಾಮನಗರ, ಕಾವೇರಿ ನಗರ 1 & 2 ನೇ ಹಂತ, ಚಂದ್ರದರ್ಶನ, ಚಾಮುಂಡೇಶ್ವರಿ ನಗರ, ಅನ್ನಪೂರ್ಣೇಶ್ವರಿ ನಗರ, ಶಂಕರನಗರ, ಇಂಡುವಾಳು, ಕಿರಗಂದೂರು, ಕಲ್ಲಹಳ್ಳಿ, ಕ್ಯಾತುಂಗೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಾದ ಕಾರಸವಾಡಿ, ಮಂಗಲ, ಹನಿಯಂಬಾಡಿ, ಚೀರನಹಳ್ಳಿ, ಹೆಬ್ಬಕವಾಡಿ, ಕೊತ್ತತ್ತಿ, ಮೊತ್ತಹಳ್ಳಿ, ಬೇವಿನಹಳ್ಳಿ, ಹಲ್ಲುಕೆರೆ, ಎ.ಹುಲಿಕೆರೆ, ಬಿ.ಹುಲಿಕೆರೆ. ಮತ್ತು ಐ.ಪಿ ಮಾರ್ಗಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯ ನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಮಹಿಳೆಯರು ಆಡಳಿತ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು

ಮಂಡ್ಯ,ಏ.8– ಮಹಿಳೆಯರು ಸಾಮಾಜಿಕವಾಗಿ ಅಭಿವೃದ್ಧಿ ಕಾಣಲು ಆಡಳಿತ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಕೃಷಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ –2025 ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಹಿಂದಿನಿಂದಲೂ ಹೆಣ್ಣು ಪೂಜನೀಯ ಸ್ಥಾನವನ್ನು ಅಲಂಕರಿಸಿದ್ದಾರೆ, ಮಹಿಳೆಯರ ಅಭಿವೃದ್ಧಿಯಿಂದ ಕುಟುಂಬ ಹಾಗೂ ದೇಶ ಅಭಿವೃದ್ಧಿಗೊಳ್ಳುತ್ತದೆ ಎಂದು ಹೇಳಿದರು.

ವಿಧಾನಸಭೆ ಹಾಗೂ ಲೋಕಸಭೆಗಳಲ್ಲೂ ಮಹಿಳೆಯರಿಗೆ ಮೀಸಲಾತಿ ನೀಡುವ ದಿನಗಳು ದೂರ ಇಲ್ಲ. ಮಹಿಳೆಯರು ವಿಧಾನಸಭಾ, ಲೋಕಸಭಾ ಸದಸ್ಯರಾಗಿ ಆಡಳಿತ ನಡೆಸುವ ರೀತಿ ಸಜ್ಜಾಗಬೇಕು. ಸದಾ ಒಳಿತನ್ನು ಮಾಡಿ, ಹೆಣ್ಣು ತಾಳ್ಮೆಯ ಪ್ರತಿರೂಪ ಎನ್ನುತ್ತಾರೆ. ತಾಳ್ಮೆಯಿಂದ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಿ. ಜ್ಞಾನವನ್ನು ವೃದ್ಧಿಸಿಕೊಳ್ಳಿ ಇದರಿಂದ ಬಹಳಷ್ಟು ಕೆಲಸಗಳು ಸುಲಭವಾಗುತ್ತದೆ ಎಂದು ಕಿವಿಮಾತು ಹೇಳಿದರು.

ನಮ್ಮ ಸರ್ಕಾರ ನೀಡಿರುವ ಗ್ಯಾರಂಟಿ ಯೋಜನೆಗಳು ಮಹಿಳೆಯರಿಗೆ ಆರ್ಥಿಕವಾಗಿ ಶಕ್ತಿ ತುಂಬಿದೆ. ಸದಾ ಮನೆ ಹಾಗೂ ದೇಶವನ್ನು ಬೆಳಗುವ ದೀಪವಾಗಿ., ಯಾವುದೇ ಕ್ಷೇತ್ರವಾದರು ಮಹಿಳೆಯರು ಹಿಂಜರಿಯದೆ ಕಾರ್ಯ ನಿರ್ವಹಿಸಿ ಯಶಸ್ವಿಯಾಗಬೇಕು, ಮಹಿಳೆಯರು ಕೇವಲ ವಿದ್ಯಾವಂತರಾದರೆ ಸಾಲದು, ಸಾಮಾನ್ಯ ಜ್ಞಾನ ಅತಿ ಮುಖ್ಯ ಎಂದು ತಿಳಿಸಿದರು. ಶಾಸಕ ಪಿ.ರವಿಕುಮಾರ್ ಮಾತನಾಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್.ನಂದಿನಿ ಮಾತನಾಡಿದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ವಿವಿಧ ಕ್ರೀಡಾಕೂಟದಲ್ಲಿ ಭಾಗವಹಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ ವಿಜೇತರಾದ ಮಹಿಳೆಯರಿಗೆ ಬಹುಮಾನ ನೀಡಿ ಗೌರವಿಸಲಾಯಿತು. ಜೆ.ಪಿ.ಎಲ್.ಎಫ್‌ನಲ್ಲಿ ಉತ್ತಮ ಸೇವೆ ಸಲ್ಲಿಸದ ಮಹಿಳೆಯರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ಸಚಿವ ಚಲುವರಾಯಸ್ವಾಮಿ.

ಕಾರ್ಯಕ್ರಮದಲ್ಲಿ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ ರೂಪಶ್ರೀ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ರಾಜಮೂರ್ತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಓಂ ಪ್ರಕಾಶ್ ಉಪಸ್ಥಿತರಿದ್ದರು.

ಗ್ಯಾರಂಟಿ, ಭಾಗ್ಯಗಳು ದುರ್ಬಳಕೆಯಾಗುತ್ತಿವೆ

ಕಿಕ್ಕೇರಿ: ನಾಡಿನ ಜನತೆ ಕಣ್ಣೀರು ಒರೆಸುವ ಬದಲು ಗ್ಯಾರಂಟಿ, ಭಾಗ್ಯದ ನೆಪದಲ್ಲಿ ಜನತೆ ಹಣ ದುರ್ಬಳಕೆಯಾಗುತ್ತಿದೆ ಎಂದು ಜೆಡಿಎಸ್ ರಾಜ್ಯ ಯುವಘಟಕ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಹೋಬಳಿಯ ಅಂಕನಹಳ್ಳಿ ಗ್ರಾಮದಲ್ಲಿ ಲೋಕಾರ್ಪಣೆಗೊಂಡ ರಂಗದ ಕುರ್ಜು (ರಂಗಮಂಟಪ) ಸಮಾರಂಭದಲ್ಲಿ ಮಾತನಾಡುತ್ತ, ಜೆಡಿಎಸ್ ಶಾಸಕರಿಗೆ ಕ್ಷೇತ್ರದ ಅಭಿವೃದ್ಧಿ ಮಾಡಬೇಕು ಎಂಬ ಹಂಬಲವಿದೆ ಕಾಂಗ್ರೆಸ್ ಸರ್ಕಾರ ಅನುದಾನ ನೀಡದೆ ಮಾರಕವಾಗಿದೆ. ಕಾಂಗ್ರೆಸ್ ಸರ್ಕಾರದ ವೈಫಲ್ಯವನ್ನು ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮರೆತಿದ್ದಾರೆ. ಸಚಿವರ ಮನವಿಯಂತೆ ಜನತೆ ಪೆನ್ ಪೇಪರ್ ಕೊಟ್ಟಿದ್ದಾರೆ. ಆದರೆ ಇವರು ಮಾಡಿರುವ ಸಾಧನೆ ಏನಿದೆ ಎಂದು ಪ್ರಶ್ನಿಸಿದರು. ಕುಮಾರಣ್ಣ ಕೇಂದ್ರ ಸಚಿವರಾಗಿ ಬಹಳ ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದರು.



ಒಂದನೇ ಪುಟದಿಂದ

ಶೇ. 73.45ರಷ್ಟು ಪಾಸ್; ಬಾಲಕಿಯರೇ ಮೇಲುಗೈ

ತಿಳಿಸಿದ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಮಧುಬಂಗಾರಪ್ಪ, ಈ ಬಾರಿ ಅತ್ಯಂತ ಶಿಸ್ತಿನಿಂದ ಪರೀಕ್ಷೆ ನಡೆಸಿದ ಪರಿಣಾಮ ಕಳೆದ ಬಾರಿ ಫಲಿತಾಂಶ ಶೇ.81.15ಕ್ಕೆ ಹೋಲಿಸಿದರೆ, ಶೇ.7.7ರಷ್ಟು ಕುಸಿತ ಉಂಟಾಗಿದೆ. ಫಲಿತಾಂಶ ಕುಸಿದಿದೆ ಎಂದು ಈಗಲೇ ಹೇಳಲಾರೆ, ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು, ಇನ್ನು ಎರಡು ಬಾರಿ ಪರೀಕ್ಷೆ ಬರೆಯುವ ಅವಕಾಶ ಹೊಂದಿದ್ದು, ನಂತರದ ಫಲಿತಾಂಶದಲ್ಲಿ ಶೇಕಡ 3ರಿಂದ ಶೇ.4ರಷ್ಟು ಹೆಚ್ಚಾಗಬಹುದೆಂಬ ವಿಶ್ವಾಸವಿದೆ ಎಂದರು.

ಪಿಯು ಫಲಿತಾಂಶ ಕುಸಿತಗೊಂಡಿರುವುದನ್ನು ಇಲಾಖೆ ಮನಗಂಡಿದ್ದು ಇನ್ನು ಒಂದು ವರ್ಷದಲ್ಲಿ ಇದರಿಂದ ಚೇತರಿಸಿಕೊಳ್ಳಲು ಸರ್ಕಾರ ಎಲ್ಲಾ ಕ್ರಮ ಕೈಗೊಳ್ಳಲಿದೆ, ಇದಕ್ಕಾಗಿ ಮುಖ್ಯಮಂತ್ರಿ ಅವರು, ಮುಂಗಡಪತ್ರದಲ್ಲಿ ಕೆಲವು ಯೋಜನೆಗಳನ್ನು ಪ್ರಕಟಿಸಿದ್ದಾರೆ ಎಂದರು. ಪರೀಕ್ಷೆಯನ್ನು ಶಿಸ್ತಿನಿಂದ ಮಾಡಿ ಎಂಬುದಾಗಿ ಮುಖ್ಯಮಂತ್ರಿ ಸೂಚಿಸಿದ್ದರಲ್ಲದೆ, ಯಾವುದೇ ಗ್ರೇಸ್ ಮಾರ್ಕ್ಸ್ ನೀಡಬಾರದು, ಭವಿಷ್ಯದಲ್ಲಿ ಉನ್ನತ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಇದು ಭೂಮಿಕೆಯಾಗಲಿ ಎಂದು ತಿಳಿಸಿದ್ದರು.

ಉಪನ್ಯಾಸಕ ಹುದ್ದೆ ಭರ್ತಿ: ನಾವು ಈ ದಿಸೆಯಲ್ಲಿ ಖಾಲಿ ಇರುವ ಉಪನ್ಯಾಸಕ ಹುದ್ದೆಗಳನ್ನು ಭರ್ತಿ ಮಾಡುವುದಲ್ಲದೆ, ಅವರಿಗೆ ವಿಶೇಷ ತರಬೇತಿ ನೀಡಿ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚು ಒತ್ತು ಕೊಡಲು ಈಗಾಗಲೇ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ ಎಂದು ಮಧುಬಂಗಾರಪ್ಪ ತಿಳಿಸಿದರು.

ಉನ್ನತ ಶ್ರೇಣಿಯಲ್ಲಿ 1,00571, ಪ್ರಥಮ ದರ್ಜೆಯಲ್ಲಿ 2,78,054, ದ್ವಿತೀಯ ದರ್ಜೆಯಲ್ಲಿ 70,967 ಹಾಗೂ ತೃತೀಯ ದರ್ಜೆಯಲ್ಲಿ 18,845 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಇಬ್ಬರು ವಿದ್ಯಾರ್ಥಿನಿಯರು 600ಕ್ಕೆ 599 ಅಂಕ ಪಡೆದು ಪ್ರಥಮ ಸ್ಥಾನವನ್ನು ಹಂಚಿಕೊಂಡಿದ್ದಾರೆ, ಇವರಲ್ಲಿ ದಕ್ಷಿಣ ಕನ್ನಡದ ಎಕ್ಸ್‌ಪರ್ಟ್ ಪಿಯು ಕಾಲೇಜಿನ ಅಮೂಲ್ಯ ಕಾಮತ್ ಹಾಗೂ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ವಾಗ್ದೇವಿ ಪಿಯು ಕಾಲೇಜಿನ ಆರ್.ದೀಕ್ಷಾ ಸೇರಿದ್ದು, ವಾಣಿಜ್ಯ ವಿಭಾಗದಲ್ಲಿ ಮಂಗಳೂರಿನ ಕೆನರಾ ಕಾಲೇಜಿನ ದೀಪಶ್ರೀ 600ಕ್ಕೆ 599 ಅಂಕಗಳನ್ನು ಪಡೆದಿದ್ದಾರೆ, ಬಳ್ಳಾರಿ ಜಿಲ್ಲೆಯ ಇಂದು ಪಿಯು ಕಾಲೇಜು ವಿದ್ಯಾರ್ಥಿನಿ ಸಂಜನಾ ಬಾಯಿ ಕಲಾ ವಿಭಾಗದಲ್ಲಿ 600ಕ್ಕೆ 597 ಅಂಕ ಪಡೆದು ಪ್ರಥಮ ಸ್ಥಾನ ಗಳಿಸಿದ್ದಾರೆ.

ಶೇಕಡಾವಾರು ಫಲಿತಾಂಶದಲ್ಲಿ ಉಡುಪಿ ಜಿಲ್ಲೆ ಶೇಕಡಾ 93.90, ದಕ್ಷಿಣ ಕನ್ನಡ ಜಿಲ್ಲೆ ಶೇ.93.57, ಬೆಂಗಳೂರು ದಕ್ಷಿಣ ಶೇ.85.36, ಕೊಡಗು ಜಿಲ್ಲೆ ಶೇ.83.84, ಬೆಂಗಳೂರು ಉತ್ತರ ಶೇ.83.31, ಉತ್ತರ ಕನ್ನಡ ಜಿಲ್ಲೆ ಶೇ.82.93, ಶಿವಮೊಗ್ಗ ಜಿಲ್ಲೆ ಶೇ.79.91, ಬೆಂಗಳೂರು ಗ್ರಾಮಾಂತರ ಜಿಲ್ಲೆ 79.70, ಚಿಕ್ಕಮಗಳೂರು ಜಿಲ್ಲೆ 79.56, ಹಾಸನ ಜಿಲ್ಲೆ 77.56ರಷ್ಟು ಫಲಿತಾಂಶ, ಚಿಕ್ಕಬಳ್ಳಾಪುರ ಜಿಲ್ಲೆ 75.80, ಮೈಸೂರು ಜಿಲ್ಲೆ 74.30ರಷ್ಟು ಫಲಿತಾಂಶ ಗಳಿಸಿವೆ.

ಅಲ್ಲದೆ, ಚಾಮರಾಜನಗರ 73.97, ಮಂಡ್ಯ 73.27, ಬಾಗಲಕೋಟೆ 72.83, ಕೋಲಾರ 72.45, ಧಾರವಾಡ 72.32, ತುಮಕೂರು 72.02, ರಾಮನಗರ 69.71, ದಾವಣಗೆರೆ 69.45, ಹಾವೇರಿ 67.56, ಬೀದರ್ 67.31 ಫಲಿತಾಂಶ ಬಂದಿದೆ. ಕೊಪ್ಪಳ 67.20, ಚಿಕ್ಕೋಡಿ 66.76, ಗದಗ 66.64, ಬೆಳಗಾವಿ 65.37, ಬಳ್ಳಾರಿ 64.41, ಚಿತ್ರದುರ್ಗ 59.87, ವಿಜಯಪುರ 58.81, ರಾಯಚೂರು 58.75, ಕಲಬುರಗಿ 55.70, ಯಾದಗಿರಿ 48.45 ಫಲಿತಾಂಶ ಬಂದಿದೆ.



ಸುದ್ದಿಗೋಷ್ಠಿಯಲ್ಲಿ ಸಚಿವ ಮಧುಬಂಗಾರಪ್ಪ ಮಾತನಾಡಿದರು.

ದ್ವಿತೀಯ ಪಿಯು ಪರೀಕ್ಷೆ-2 ವೇಳಾಪಟ್ಟಿ

- 24–4–25: ಕನ್ನಡ, ಅರೇಬಿಕ್
- 25–4–25: ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, ಜೀವಶಾಸ್ತ್ರ
- 26–4–25: ಇತಿಹಾಸ, ಭೌತಶಾಸ್ತ್ರ
- 27–4–25: ಭಾನುವಾರ (ರಜಾ ದಿನ)
- 28–4–25: ಭೂಗೋಳಶಾಸ್ತ್ರ, ಮನಶಾಸ್ತ್ರ, ರಸಾಯನಶಾಸ್ತ್ರ, ಮೂಲ ಗಣಿತ
- 29–4–25: ಇಂಗ್ಲೀಷ್
- 30–4–25: ಬಸವ ಜಯಂತಿ (ರಜಾ ದಿನ)
- 01–05–25: ಕಾರ್ಮಿಕ ದಿನಾಚರಣೆ (ರಜಾ ದಿನ)
- 02–05–25: ತರ್ಕಶಾಸ್ತ್ರ, ವ್ಯವಹಾರ ಶಾಸ್ತ್ರ, ಗಣಿತ, ಶಿಕ್ಷಣ ಶಾಸ್ತ್ರ, ಗೃಹ ವಿಜ್ಞಾನ.
- 03–05–25: ಸಮಾಜಶಾಸ್ತ್ರ, ಭೂಗರ್ಭಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕಶಾಸ್ತ್ರ
- 04–05–25: ಭಾನುವಾರ (ರಜಾ ದಿನ)
- 05–05–25: ಅರ್ಥಶಾಸ್ತ್ರ
- 06–05–25: ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ
- 07–5–25: ಹಿಂದಿ
- 08–05–25: ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್.

ಪರೀಕ್ಷೆ ನೋಂದಣಿ: ವಿದ್ಯಾರ್ಥಿಗಳು ಪರೀಕ್ಷೆ 2ಕ್ಕೆ ದಿನಾಂಕ 08–04–2025 ರಿಂದ 17–04–2025 ರ ನೊಂದಾಯಿಸಿಕೊಳ್ಳಬೇಕು. ದಂಡ ಸಹಿತ 16–04–2025 ರಿಂದ 17–04–2025. ಇನ್ನು ವಿದ್ಯಾರ್ಥಿಗಳು ತಮ್ಮ ತಮ್ಮ ಕಾಲೇಜಿನಲ್ಲಿ ನೋಂದಣಿ ಮಾಡಿಕೊಳ್ಳಬಹುದು. 2023ರ ನಂತರ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು, 2025 ರ ದ್ವಿತೀಯ ಪಿಯುಸಿ ಪರೀಕ್ಷೆ 2 ಕ್ಕೆ ಮಂಡಲಿಯು ಒದಗಿಸಿದ ಫಲಿತಾಂಶ ಪಟ್ಟಿಯ ಆಧಾರದ ಮೇಲೆ ನೊಂದಾವಣೆ ಮಾಡಿಕೊಳ್ಳಬಹುದು. ಇನ್ನು 2022ನೇ ಸಾಲಿನ ಅಥವಾ ಹಿಂದಿನ ವರ್ಷದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು 2025ರ ದ್ವಿತೀಯ ಪಿಯುಸಿ ಪರೀಕ್ಷೆ 2ಕ್ಕೆ 'MCA' ಆಧಾರದ ಮೇಲೆ ಮಾತ್ರ ನೋಂದಾವಣೆ ಮಾಡಿಕೊಳ್ಳಬಹುದು.

ವಿಧಾನಸೌಧ ವೀಕ್ಷಣೆಗೂ ಶುಲ್ಕ

ಪ್ರವಾಸಿಗರಿಗೆ ನಿಗದಿಪಡಿಸುವ ಪ್ರವೇಶ ದರ ಜನಸ್ನೇಹಿಯಾಗಿರುವಂತೆ ಚಿಂತನೆ ನಡೆಸಲಾಗುತ್ತಿದೆ. ವಿಧಾನಸೌಧ ಕಟ್ಟಡ, ಉದ್ಯಾನವನಗಳು, ಪ್ರತಿಮೆಗಳಿಗೆ ಯಾವುದೇ ದಕ್ಕೆ ಉಂಟಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಹಾಗೂ ಈ ಕುರಿತು ಅಗತ್ಯ ಸೂಚನಾ ಫಲಕಗಳನ್ನು ಅಳವಡಿಸಲು ಲೋಕೋಪಯೋಗಿ ಇಲಾಖೆಯು ಕ್ರಮವಹಿಸತಕ್ಕದ್ದು ಎಂಬ ಪ್ರಸ್ತಾವನೆ ಸಲ್ಲಿಸಲಾಗಿದೆ.

10 ವಿದ್ಯಾರ್ಥಿಗಳು

ನಳಂದ ಕಾಲೇಜಿನ ಅಮೋಘ್ ಬಿ.ಪಿ 592, ಸೆಂಟ್ ಜೋಸೆಫ್ ಕಾಲೇಜಿನ ದಿಶಾ ಜಿ. 592, ಮಹರ್ಷಿ ಪಿಯು ಕಾಲೇಜಿನ ನಿರಂಜನ್ ಬಿ.ವಿ. 592, ಅನ್ವೇಷಣಾ ಪಿಯು ಕಾಲೇಜಿನ ಸಂಜನಾ ಹೆಬ್ಬಾರ್ ಹೆಚ್.ವಿ. 591, ಎಂಎಂಕೆ, ಎಸ್‌ಡಿಎಂ ಕಾಲೇಜಿನ ಪ್ರಾರ್ಥನಾ ಬಿ.ಕೆ. 590, ಮರಿಮಲ್ಲಪ್ಪ ಪಿಯು ಕಾಲೇಜಿನ ಅನಿರುದ್ಧಾ ಪಿ. 589 ಹಾಗೂ ಶೇಷಾದ್ರಿಪುರಂ ಕಾಲೇಜಿನ ಸಿಂಚನಾ ಎಸ್. 589 ಅಂಕ ಪಡೆದು ಗಮನ ಸೆಳೆದಿದ್ದಾರೆ.

ಕಲಾ ವಿಭಾಗ: ಕಲಾ ವಿಭಾಗದಲ್ಲಿ 3915 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಅವರಲ್ಲಿ ಸೆಂಟ್ ಫಿಲೋಮಿನಾ ಕಾಲೇಜಿನ ಬಿಬಿ ಅಮೀನಾ 584 ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಮರಿಮಲ್ಲಪ್ಪ ಕಾಲೇಜಿನ ಪರೀಕ್ಷಾನಂದ ಎಸ್. 583, ಪಿರಿಯಾಪಟ್ಟಣ ತಾಲೂಕಿನ ರಾವಂದೂರಿನ ಸರ್ಕಾರಿ ಪಿಯು ಕಾಲೇಜಿನ ಬಿಂದು ಕೆ.ಆರ್. 581, ಹುಣಸೂರಿನ ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನ ನಿಶ್ಚಿತಾ ಕೆ.ಎಂ. 580, ಹುಣಸೂರು ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನ ಸಂಜನಾ ಯು.ಪಿ. 578, ಟೆರಿಷಿಯನ್ ಕಾಲೇಜಿನ ಶರಣ್ಯರಾಜ್ 578, ಸೆಂಟ್ ಮೇರಿ ಪಿಯು ಕಾಲೇಜಿನ ಝುಕಿಯಾ ಥಾಸ್ಕಿನ್ 577, ನಟರಾಜ ಪಿಯು ಕಾಲೇಜಿನ ಹೇಮಾ ಎಂ. 576, ಹೆಚ್.ಡಿ.ಕೋಟೆಯ ಆದಿಚುಂಚನಗಿರಿ ಕಾಲೇಜಿನ ಸುಶ್ಮಿತಾ 575 ಹಾಗೂ ಸೆಂಟ್ ಫಿಲೋಮಿನಾ ಕಾಲೇಜಿನ ಐಮಾನ್ ಝುಹಾ 573 ಅಂಕ ಪಡೆದು ಕಲಾ ವಿಭಾಗದ ಟಾಪ್‌ಟೆನ್ ವಿದ್ಯಾರ್ಥಿಗಳಾಗಿದ್ದಾರೆ.

ಶೇ.74.3ರಷ್ಟು ತೇರ್ಗಡೆ

ಕಾಲೇಜುಗಳ ಮುಂದೆ ಜಮಾಯಿಸಿದ್ದರು. ಮಧ್ಯಾಹ್ನ 1.20 ಆದರೂ ವೆಬ್‌ಸೈಟ್ ಓಪನ್ ಆಗುತ್ತಿರಲಿಲ್ಲ. ಆ ನಂತರ ವೆಬ್‌ಸೈಟ್‌ನಲ್ಲಿ ಫಲಿತಾಂಶ ವೀಕ್ಷಿಸಲು ಲಭ್ಯವಾಯಿತು. ಇದರಿಂದ ಕಾಲೇಜು ಆವರಣದಲ್ಲಿಯೇ ವಿದ್ಯಾರ್ಥಿಗಳು ಮೊಬೈಲ್‌ನಲ್ಲಿಯೇ ಪಿಯು ಬೋರ್ಡ್ ವೆಬ್ ಸೈಟ್‌ಗೆ ಹೋಗಿ ತಮ್ಮ ಫಲಿತಾಂಶವನ್ನು ತಾವೇ ನೋಡಿಕೊಂಡು ಸಂಭ್ರಮಿಸಿದರು. ಮಧ್ಯಾಹ್ನ 3.30ರ ನಂತರ ಕಾಲೇಜುಗಳ ನೋಟಿಸ್ ಬೋರ್ಡ್‌ನಲ್ಲಿ ಫಲಿತಾಂಶ ಪ್ರಕಟಿಸಲಾಯಿತು.

ಕುಂದಿದ ಉತ್ಸಾಹ; ಕಳೆದ ವರ್ಷ ಮೈಸೂರು ಜಿಲ್ಲೆಯ ಫಲಿತಾಂಶ ರಾಜ್ಯದಲ್ಲಿ 17ನೇ ಸ್ಥಾನದಲ್ಲಿತ್ತು. ಆದರೆ, ಈ ಬಾರಿ ಫಲಿತಾಂಶದಲ್ಲಿ ಸುಧಾರಣೆ ಕಂಡಿದ್ದರೂ ವಿದ್ಯಾರ್ಥಿಗಳಲ್ಲಿ ಅಂತಹ ಉತ್ಸಾಹ ಕಂಡುಬರಲಿಲ್ಲ. ಪ್ರತಿ ವರ್ಷವೂ ರಾಜ್ಯಕ್ಕೆ ಪ್ರಥಮ ಮೂರು ಸ್ಥಾನದಲ್ಲಿ ಒಂದಾದರೂ ಮೈಸೂರು ಪಾಲಾಗುತ್ತಿತ್ತು. ಆದರೆ, ಈ ಬಾರಿ ಆ ಸಾಧನೆ ಆಗಿಲ್ಲ.

ಮಂಡ್ಯದಲ್ಲಿ ಬಿಜೆಪಿ ಜನಾಕ್ರೋಶ

ಜನರ ಪರವಾಗಿ ನಾವಿದ್ದೇವೆ ಎಂದು ಭರವಸೆ ನೀಡಿದರು.

ಮಂಡ್ಯ ಜನರ ಛತ್ರಿಗಳು ಎಂದಿದ್ದರು: ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಮಂಡ್ಯ ಜನರನ್ನು ಛತ್ರಿಗಳು ಎಂದು ಟೀಕಿಸಿದ್ದಾರೆ. ಚುನಾವಣೆಯ ಮೊದಲು ಈ ಜನರ ಬಳಿ ಪೆನ್ನು ಪೇಪರ್ ಕೊಡಿ ಎಂದು ಭಿಕ್ಷೆ ಬೇಡಿದ್ದ ಡಿಕೆಶಿ, ಇದೀಗ ಅಧಿಕಾರಕ್ಕೇರಿದ ಬಳಿಕ ಮಂಡ್ಯ ಜನರನ್ನು ಈ ಮಟ್ಟದಲ್ಲಿ ಟೀಕಿಸಿದ್ದು, ಮಂಡ್ಯ ಜನ ಸೂಕ್ತ ಸಂದರ್ಭದಲ್ಲಿ ತಕ್ಕ ಉತ್ತರ ಕೊಡಲಿದ್ದಾರೆ. ನನ್ನ ಪ್ರಕಾರ ಮಂಡ್ಯ ಜನ ಛತ್ರಿಗಳಲ್ಲ. ಚಕ್ರವರ್ತಿಗಳು ಎಂದು ಹೇಳಿದರು.

ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳ ದೃಷ್ಟಿಯಿಂದ ನಮ್ಮ ಸರ್ಕಾರದ ಅವಧಿಯಲ್ಲಿ ವಿಶ್ವವಿದ್ಯಾಲಯ ತಂದಿದ್ದೆವು. ಆದರೆ ಈ ಸರ್ಕಾರ ವಿವಿಯನ್ನು ಕದ್ದೊಯ್ದಿದೆ. ವಿವಿ ಉಳಿಸಲು ಕೇಂದ್ರ ಸರ್ಕಾರ 50 ಕೋಟಿ ರೂ. ಅನುದಾನ ನೀಡಿತ್ತು. ಆದರೆ ಮುಸ್ಲಿಂ ತುಷ್ಟೀಕರಣದಿಂದ ರಾಜ್ಯ ಸರ್ಕಾರ ಅಭಿವೃದ್ಧಿ ಮರೆತಿದೆ ಎಂದು ಕಿಡಿಕಾರಿದರು. ರಾಜ್ಯದಲ್ಲಿ ಲೂಟಿ ಕೋರ ಸರ್ಕಾರದಲ್ಲಿ ಸೊಳ್ಳೆ, ತಿಗಣೆಗಳ ಕಾಟ ಹೆಚ್ಚಾಗಿದ್ದು, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಸೊಳ್ಳೆ ತಿಗಣೆಗಳಂತೆ ರಾಜ್ಯದ ಜನರ ರಕ್ತ ಹೀರುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಡವರ ಬದುಕಲ್ಲಿ ಚೆಲ್ಲಾಟ: ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಮಾತನಾಡಿ, ಜನಾಕ್ರೋಶ ಯಾತ್ರೆ ರಾಜಕೀಯ ಲಾಭಕ್ಕಲ್ಲ. ಬೆಲೆ ಏರಿಕೆ ಮಾಡಿ ಬಡಜನರ ಬದುಕಿನ ಜೊತೆ ಚೆಲ್ಲಾಟವಾಡುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ನಮ್ಮ ಹೋರಾಟವಾಗಿದ್ದು, ಈ ಹೋರಾಟಕ್ಕೆ ಜನರು ಬೆಂಬಲ ಸೂಚಿಸಬೇಕು ಎಂದರು. ಬಿಜೆಪಿ ವಿರುದ್ಧ 40 ಪರ್ಸೆಂಟ್ ಸುಳ್ಳು ಆರೋಪ ಮಾಡಿದ್ದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ರಾಜ್ಯದಲ್ಲಿ 80 ಪರ್ಸೆಂಟ್ ಲೂಟಿ ಹೊಡೆಯುತ್ತಿದೆ. ಎಲ್ಲ ಇಲಾಖೆಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅಷ್ಟೊಂದು ಹಗರಣ ಇರುವ ಯಾವ ಸರ್ಕಾರವನ್ನು ನಾನು ಕಂಡಿಲ್ಲ. ಈ ಹಿಂದೆ ಭ್ರಷ್ಟಾಚಾರ, ಗೂಂಡಾಗಿರಿಯಲ್ಲಿ ಬಿಹಾರವನ್ನು ಉದಾಹರಣೆ ಕೊಡುತ್ತಿದ್ದೆವು. ಇದೀಗ ಬಿಹಾರ ಮಾದರಿಯ ಆಡಳಿತ ರಾಜ್ಯದಲ್ಲಿದೆ ಎಂದು ದೂರಿದರು.

2 ಸಾವಿರ ಕೊಟ್ಟು 20 ಸಾವಿರ ಕಸಿಯುತ್ತಿದ್ದಾರೆ: ಮಾಜಿ ಸಂಸದೆ ಸುಮಲತಾ ಅಂಬರೀಷ್ ಮಾತನಾಡಿ, ರಾಜ್ಯ ಸರ್ಕಾರ ಉಚಿತ ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿದ್ದರ ಮರ್ಮ ಇದೀಗ ನಮ್ಮ ಜನಕ್ಕೆ ಅರ್ಥವಾಗುತ್ತಿದೆ. ಗ್ಯಾರಂಟಿ ಯೋಜನೆಗಳನ್ನು ಕೊಟ್ಟು ಜನರ ಮೇಲೆ ತೆರಿಗೆಯ ಬರೆ ಹಾಕುತ್ತಿರುವ ರಾಜ್ಯ ಸರ್ಕಾರ ಕೇವಲ 2 ಸಾವಿರ ರೂ. ಕೊಟ್ಟು, 20 ಸಾವಿರ ರೂ. ಕಿತ್ತುಕೊಳ್ಳುವ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದರು.

ಬಡ ಜನರು ಎರಡು ಹೊತ್ತು ಹೊಟ್ಟೆ ತುಂಬಾ ಊಟ ಮಾಡುವುದು ಕೂಡ ದುಸ್ತರವಾಗಿದೆ. ಉಚಿತ ಎಂಬುದು ರಾಜ್ಯದ ಜನರ ಪಾಲಿಗೆ ಸುಳ್ಳಾಗಿದೆ. ಜನರ ಬದುಕಿಗಾಗಿ ಬಿಜೆಪಿ ಬೀದಿಗಿಳಿದು ಹೋರಾಟ ಮಾಡುತ್ತಿದ್ದು, ಹೋರಾಟ ನಿರಂತರವಾಗಿರಲಿದೆ ಎಂದು ಹೇಳಿದರು.

ಬೆಲೆ ಏರಿಕೆ ಹೆಸರಲ್ಲಿ ಲೂಟಿ: ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ನಮ್ಮ ಹೋರಾಟ ಜನವಿರೋಧಿ ನೀತಿ, ಕೋಮುವಾದಿ ರಾಜಕಾರಣದ ವಿರುದ್ಧವಾಗಿದೆ. ಕೇಂದ್ರ ಸರ್ಕಾರದ ವಿರುದ್ಧ ಬೆಲೆ ಏರಿಕೆ ಆರೋಪ ಮಾಡುವ ಕಾಂಗ್ರೆಸ್ ಸರ್ಕಾರ ಒಂದು ವರ್ಷದ ಹಿಂದೆ ಗ್ಯಾಸ್ ಸಿಲಿಂಡರ್ ಬೆಲೆ 1113 ರೂ. ಇತ್ತು. ನಂತರ ಸತತವಾಗಿ ಮೂರು ಬಾರಿ ಸಿಲಿಂಡರ್ ಕಡಿಮೆ ಮಾಡಿದೆ. ಮೊನ್ನೆ, ಕೇವಲ 50 ರೂ. ಗ್ಯಾಸ್ ದರ ಏರಿಕೆ ಮಾಡಿದರೆ ಕೇಂದ್ರದ ವಿರುದ್ಧ ಬೊಬ್ಬೆ ಹೊಡೆಯುವ ರಾಜ್ಯ ಸರ್ಕಾರ ರಾಜ್ಯದಲ್ಲಿ ಬೆಲೆ ಏರಿಕೆ ಹೆಸರಲ್ಲಿ ಲೂಟಿ ಹೊಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಮೈಸೂರು ಮಹಾರಾಜರ ಕೊಡುಗೆ ಅಪಾರವಾಗಿದೆ. ವಿವಿಗಳು, ಕಾರ್ಖಾನೆಗಳು, ಕೆಆರ್‌ಎಸ್ ಅಣೆಕಟ್ಟೆ ಹೀಗೆ ಹಲವು ಅಭಿವೃದ್ಧಿ ಕೆಲಸ ಮಾಡಿರುವ ಮಹಾರಾಜರಿಗೆ ಸಿದ್ದರಾಮಯ್ಯ ತಮ್ಮನ್ನು ತಾವು ಹೋಲಿಸಿಕೊಳ್ಳುತ್ತಿದ್ದಾರೆ. ಪತ್ನಿಯ ಒಡವೆ ಮಾರಿ ಡ್ಯಾಂ ಕಟ್ಟಿದ ಮಹಾರಾಜರೆಲ್ಲಿ, ಪತ್ನಿಗಾಗಿ 14 ಮುಡಾ ಸೈಟು ನುಂಗಿದ ಸಿದ್ದರಾಮಯ್ಯ ಎಲ್ಲಿ ಎಂದು ಪ್ರಶ್ನಿಸಿದರು. ಜನಾಕ್ರೋಶ ರ‍್ಯಾಲಿ ಮುಕ್ತಾಯವಾದ ಬಳಿಕ ಸರ್‌ಎಂವಿ ಪ್ರತಿಮೆಯಿಂದ ಜೆ.ಸಿ.ವೃತ್ತದವರೆಗೆ ಬಿಜೆಪಿ ನಾಯಕರು ಪಾದಯಾತ್ರೆ ನಡೆಸಿದರು. ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಡಾ.ಸಿ.ಎನ್.ಅಶ್ವಥ್‌ನಾರಾಯಣ, ಬಿ.ಶ್ರೀರಾಮುಲು, ಮುರುಗೇಶ್ ನಿರಾಣಿ, ಕೆ.ಸಿ.ನಾರಾಯಣಗೌಡ, ವಿಧಾನ ಪರಿಷತ್ ಸದಸ್ಯ ರವಿಕುಮಾರ್, ಶಾಸಕರಾದ ಶ್ರೀವತ್ಸ, ಎ.ಎಸ್.ಪಾಟೀಲ್ ನಡಹಳ್ಳಿ, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್, ಮುಖಂಡರಾದ ಡಾ.ಸಿದ್ದರಾಮಯ್ಯ, ಅಶೋಕ್‌ಜಯರಾಂ, ಇಂಡುವಾಳು ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಕೆ.ಎಸ್.ನಂಜುಂಡೇಗೌಡ, ಬೂಕಳ್ಳಿ ಮಂಜು ಸೇರಿದಂತೆ ಮತ್ತಿತರರಿದ್ದರು.

ಬಾಟಲ್ ನೀರು ಆರೋಗ್ಯಕ್ಕೆ ಮಾರಕ

ಕುಡಿಯುವ ನೀರು ಸುಕ್ಷಿತವಲ್ಲ ಎಂಬ ಅಂಶ ಬೆಳಕಿಗೆ ಬಂದಿದೆ ಎಂದರು. ರಾಷ್ಟ್ರ ಮತ್ತು ರಾಜ್ಯದ 296 ಕಂಪನಿಗಳ ಬಾಟಲಿ ನೀರನ್ನು ಪರೀಕ್ಷೆಗೆ ಒಳಪಡಿಸಿದಾಗ ಕೇವಲ 72 ಬಾಟಲ್ ನೀರು ಸುರಕ್ಷಿತ ಮತ್ತು ಉಳಿದವು ಅಸುರಕ್ಷಿತ ಎಂಬ ಫಲಿತಾಂಶ ವ್ಯಕ್ತವಾಗಿದೆ. ಸುರಕ್ಷಿತವಲ್ಲದ ಬಾಟಲ್ ನೀರಿನಲ್ಲಿ ಕೆಮಿಕಲ್ ಹಾಗೂ ಬ್ಯಾಕ್ಟೀರಿಯಾ ಕಂಡಬಂದಿದೆ, ಇಂತಹ ಕಂಪನಿಗಳ ಲೀಗಲ್ ಮಾದರಿ ಸಂಗ್ರಹಿಸಿ ಅಂತಹ ಕಂಪನಿಗಳಿಗೆ ಬೀಗಮುದ್ರೆ ಹಾಕಲಾಗುವುದು. ಸ್ಥಳೀಯ ಕಂಪನಿಗಳ ನೀರು ಕುಡಿಯಲು ತೀರಾ ಅನರ್ಹವಾಗಿರುವುದು ಕಂಡಿಬಂದಿದೆ, ರಾಷ್ಟ್ರಮಟ್ಟದ ಕೆಲವು ಕಂಪನಿ ಗಳ ನೀರೂ ಸುರಕ್ಷಿತವಲ್ಲ ಎಂಬ ಅಂಶ ಬೆಳಕಿಗೆ ಬಂದಿದ್ದು, ಈ ಕಂಪನಿಗಳು ಯಾವುವು ಎಂಬುದನ್ನು ಬಹಿರಂಗ ಪಡಿಸಲಾಗುವುದು ಎಂದರು. ಬಾಟಲ್ ನೀರಿನಲ್ಲಿ ಮಿನರಲ್ ಸಹಾ ಇರುವುದಿಲ್ಲ, ಇನ್ನು ಮುಂದೆ ನಕಲಿ ವಾಟರ್ ಬಾಟಲ್ ಮಾರಾಟ ಮಾಡುವ ಕಂಪನಿಗಳ ವಿರುದ್ಧ ಇಲಾಖೆ ಸಮರ ಸಾರಲಿದೆ. ಸಿಹಿ ತಿಂಡಿಗೆ ಬಳಸುವ ಖೋವಾದಲ್ಲೂ ಕಲಬೆರಕೆ ಪತ್ತೆಯಾಗಿದ್ದು, ಇದೂ ಸಹಾ ಆರೋಗ್ಯಕ್ಕೆ ಮಾರಕ. ಇನ್ನು, ತೊಗರಿಬೇಳೆಯಲ್ಲಿ ಕೇಸರಿ ಬಣ್ಣ ಮಿಶ್ರಣ ಪತ್ತೆಯಾಗಿದೆ, ಇದು ವಿಷಕಾರಿ, ಇದರ ಸೇವನೆಯಿಂದ ಮಾರಕ ರೋಗಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಮಹಾರಾಷ್ಟ್ರದ ಗುಡ್ಡಗಾಡು ಪ್ರದೇಶದಲ್ಲಿ ಇಂತಹ ಬೇಳೆ ಬೆಳೆಯಲಾಗುತ್ತಿದ್ದು, ನಿರಂತರ ಸೇವನೆ ಯಿಂದ ಶಾಶ್ವತ ಅಂಗವೈಕಲ್ಯ ಉಂಟಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಮೌಲ್ಯಮಾಪನ; ಮರು ಎಣಿಕೆ

ಮರು ಎಣಿಕೆಯನ್ನು ಉಚಿತವಾಗಿ ಮಾಡಲಾಗುತ್ತದೆ. ಪರೀಕ್ಷೆ–2 ಕ್ಕೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಮರು ಮೌಲ್ಯ ಮಾಪನ ಫಲಿತಾಂಶಗಳಿಗಾಗಿ ಕಾಯಬೇಕಾಗಿಲ್ಲ. ಪರೀಕ್ಷೆ–1 ಕ್ಕೆ ಮರು ಮೌಲ್ಯ ಮಾಪನ ಅಂಕಗಳನ್ನು ಅಂತಿಮವೆಂದು ಪರಿಗಣಿಸಲಾಗುತ್ತದೆ ಮತ್ತು ಮರು ಮೌಲ್ಯಮಾಪನ ಸಮಿತಿಯ ನಿರ್ಧಾರವು ಬದ್ಧವಾಗಿರುತ್ತದೆ, ಮರು ಮೌಲ್ಯಮಾಪನ ಮತ್ತು ಮರು ಎಣಿಕೆ ಫಲಿತಾಂಶಗಳನ್ನು KSEAB ವೆಬ್‌ಸೈಟ್ https://kseab.karnataka.gov.inನಲ್ಲಿ ಘೋಷಿಸಲಾಗುತ್ತದೆ.

IIPU ಪರೀಕ್ಷೆ–2 ರ ನೋಂದಣಿ ಪ್ರಾರಂಭ ಕಾಲೇಜುಗಳು ಏಪ್ರಿಲ್ 8ರಿಂದ ಏಪ್ರಿಲ್ 15, 2025 ರವರೆಗೆ ಪರೀಕ್ಷೆ–2ರ ಪುನರಾವರ್ತಕ, ಮತ್ತು ಮರು ಮೌಲ್ಯಮಾಪನ ಬಯಸುವ ವಿದ್ಯಾರ್ಥಿಗಳ ವಿವರಗಳನ್ನು ದಂಡವಿಲ್ಲದೆ ಅಪ್ ಲೋಡ್ ಮಾಡಲು ಪ್ರಾರಂಭಿಸಬಹುದು. ಶುಲ್ಕ ಪಾವತಿ ಮತ್ತು ಅರ್ಜಿ ನಮೂನೆ ಗಳನ್ನು ದಂಡವಿಲ್ಲದೆ ಡಿಡಿಪಿಯು ಕಚೇರಿಗೆ ಸಲ್ಲಿಸಲು ಕೊನೆಯ ದಿನಾಂಕ ಏ.16 ಆಗಿದೆ. ತಡವಾದ ಶುಲ್ಕದೊಂದಿಗೆ, ನೋಂದಣಿ ವಿಂಡೋ ಏ.16 ಮತ್ತು ಏ.17 ರವರೆಗೆ ತೆರೆದಿರುತ್ತದೆ, ಅಂತಿಮ ಸಲ್ಲಿಕೆ ದಿನಾಂಕ ಏ.19 ಆಗಿದೆ. ವಿದ್ಯಾರ್ಥಿಗಳು ಇಂದಿನಿಂದ ಏ.17ರ ನಡುವೆ ತಮ್ಮ ಕಾಲೇಜುಗಳಲ್ಲಿ ಪೂರಕ ಪರೀಕ್ಷೆಗೆ ನೋಂದಾಯಿಸಿಕೊಳ್ಳಬಹುದು.

1200 ಇದ್ದ ಅಡುಗೆ ಅನಿಲ ಬೆಲೆ 850ಕ್ಕೆ ಇಳಿಕೆಯಾಗಿದೆ

ಗ್ಯಾಸ್ ದರ ಹೆಚ್ಚಳವನ್ನು ಸಮರ್ಥಿಸಿಕೊಂಡ ಪ್ರತಾಪ್ ಸಿಂಹ

ಮೈಸೂರು, ಏ.8(ಬಿಎಲ್‌ಯು)– ಕಳೆದ ಮೂರು ವರ್ಷದ ಹಿಂದೆ ಇದ್ದ ಅಡುಗೆ ಅನಿಲ ಬೆಲೆಯನ್ನು 1200 ರೂಪಾಯಿಯಿಂದ 850ಕ್ಕೆ ಇಳಿಕೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಕೇಂದ್ರದ ಬಿಜೆಪಿ ಸರ್ಕಾರ ಮತ್ತಷ್ಟು ಬೆಲೆ ನಿಯಂತ್ರಣ ಮಾಡಲಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಅನಿಲ ಬೆಲೆ 50 ರೂಪಾಯಿ ಹೆಚ್ಚಳ ಮಾಡಿರುವ ಕೇಂದ್ರದ ಬಿಜೆಪಿ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು.


ಪ್ರತಾಪ್ ಸಿಂಹ

ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈಗ 850 ರೂಪಾಯಿ ಇರುವ ಅಡುಗೆ ಅನಿಲ ಬೆಲೆಯನ್ನು ನಮ್ಮ ಸರ್ಕಾರ ಮತ್ತಷ್ಟು ಕಡಿಮೆ ಮಾಡಲಿದೆ ಎಂದು ಭರವಸೆ ನೀಡಿದರು.

ಆದರೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ರಾಜ್ಯ ಸರ್ಕಾರ ಒಂದು ವಸ್ತು ಬೆಲೆ ಕಡಿಮೆ ಮಾಡಿರುವ ನಿದರ್ಶನವೇ ಇಲ್ಲ. ಗೃಹಲಕ್ಷ್ಮಿ, ಯುವನಿಧಿ ಸೇರಿದಂತೆ ಗ್ಯಾರಂಟಿಯ ಯಾವ ಯೋಜನೆಗೂ ಹಣ ಕೊಡುತ್ತಿಲ್ಲ. ಆದರೆ ಗ್ಯಾರಂಟಿ ಯೋಜನೆ ಹೆಸರಿನಲ್ಲಿ ಎಲ್ಲಾ ಬೆಲೆ ಹೆಚ್ಚಳ ಮಾಡುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಆರೋಪಿಸಿದರು.

ಸಿದ್ದರಾಮಯ್ಯ ಅವರ ಸರ್ಕಾರ ಬೆಲೆ ಕಡಿಮೆ ಮಾಡುವ ಬದಲು ಲೂಟಿ ಮಾಡುತ್ತಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬ್ರ್ಯಾಂಡ್ ಬೆಂಗಳೂರು ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಬ್ರ್ಯಾಂಡ್ ಬೆಂಗಳೂರು ಬದಲು ಗುಂಡಿ ಬೆಂಗಳೂರು ಮಾಡಿದ್ದಾರೆ ಎಂದು ಲೇವಡಿ ಮಾಡಿದರು.

ಡಿ.ಕೆ.ಶಿವಕುಮಾರ್ ತಮಿಳುನಾಡು ಮುಖ್ಯಮಂತ್ರಿ ಸ್ಟ್ಯಾಲಿನ್ ಅವರನ್ನು ಭೇಟಿ ಮಾಡಿದ್ದಾರೆ. ಅಂದು ಮೇಕೆದಾಟು ವಿಚಾರವನ್ನು ಏಕೆ ಪ್ರಸ್ತಾಪ ಮಾಡಲಿಲ್ಲ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ ಅವರು, ಬಿಜೆಪಿ ಸರಿ ಇಲ್ಲ ಎಂದು ನಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ ಎಂದು ಹೇಳುತ್ತೀರಾ. ಆದರೆ ಈಗ ನಿಮ್ಮ ದುರಾಡಳಿತದಿಂದ ನೋಡುತ್ತಿರುವ ಜನರು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು. ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಸಾವಿಗೆ ಪೊನ್ನಣ್ಣನೇ ಕಾರಣ. ಆದರೆ ಪೊನ್ನಣ್ಣ ವಿರುದ್ಧ ಪ್ರಕರಣ ದಾಖಲಾಗಲಿಲ್ಲ. ನನ್ನ ವಿರುದ್ಧ ಪೊನ್ನಣ್ಣ ಮಾತನಾಡಿರುವುದಕ್ಕೆ ಮಡಿಕೇರಿಯಲ್ಲಿ ತಕ್ಕ ಉತ್ತರ ನೀಡುತ್ತೇನೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದರು.

ಸಿದ್ದರಾಮಯ್ಯ, ಜಮೀರ್ ಬರೆದು ಕೊಟ್ಟ ಆದೇಶ ಪತ್ರಕ್ಕೆ ಡಿಸಿ ಸಹಿ

ಮೈಸೂರಿನ ಕ್ಯಾತಮಾರನಹಳ್ಳಿಯ ವಿವಾದಿತ ಜಾಗದಲ್ಲಿ ಅರೇಬಿಕ್ ಶಾಲೆ ತೆರೆಯಲು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಆದೇಶ ನೀಡಿರುವುದು ಸರಿಯಲ್ಲ. ವಿವಾದಿತ ಸ್ಥಳದಲ್ಲಿ ಯಾವುದೇ ಚಟುವಟಿಕೆ ನಡೆದರೂ ಕೋಮು ಸಂಘರ್ಷ ಆಗುತ್ತದೆ ಎಂದು ಪೊಲೀಸ್ ಕಮಿಷನರ್ ಎಚ್ಚರಿಸಿದರೂ ಜಿಲ್ಲಾಡಳಿತ ಅದನ್ನು ಧಿಕ್ಕರಿಸಿದೆ ಎಂದು ಆರೋಪಿಸಿದರು.

ಮದರಸಾದಲ್ಲಿ ಗಣಿತ, ವಿಜ್ಞಾನ ಹೇಳಿ ಕೊಡುವುದಿಲ್ಲ ಬದಲಿಗೆ ಪೊಲೀಸ್ ಠಾಣೆ ಸೇರಿದಂತೆ ಇತರೆಡೆಗೆ ಕಲ್ಲು ಹೊಡೆಯುವುದು ಹೇಗೆ ಎಂದು ವಿದ್ಯಾರ್ಥಿಗಳಿಗೆ ಹೇಳಿ ಕೊಡುತ್ತಾರೆ ಎಂದು ಆರೋಪಿಸಿದರು.

ಆ ಸ್ಥಳದ ಸುತ್ತಮುತ್ತ ಇರುವ ನಾಲ್ಕೈದು ಮುಸ್ಲಿಂ ಮನೆಗಳಿಗೆ ಮದರಸಾ ಅಗತ್ಯವಿತ್ತೆ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಈ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದು ಆಪಾದಿಸಿದರು.

ಮೈಸೂರಿನ ಶಾಂತಿ, ಸುವ್ಯವಸ್ಥೆಗೆ ಧಕ್ಕೆಯಾದರೆ ಅದಕ್ಕೆ ಜಿಲ್ಲಾಧಿಕಾರಿಗಳೇ ನೇರ ಹೊಣೆ ಎಂದು ಎಚ್ಚರಿಸಿದರು.

ಅರೇಬಿಕ್ ಶಾಲೆಗೆ ಅನುಮತಿ ನೀಡಿರುವುದು ಜಿಲ್ಲಾಧಿಕಾರಿಗಳ ಸ್ವಂತ ನಿರ್ಧಾರವಲ್ಲ. ಸಿದ್ದರಾಮಯ್ಯ ಹಾಗೂ ಜಮೀರ್ ಅಹಮ್ಮದ್ ಬರೆದುಕೊಟ್ಟ ಆದೇಶ ಪತ್ರಕ್ಕೆ ಜಿಲ್ಲಾಧಿಕಾರಿ ಸಹಿ ಹಾಕಿದ್ದಾರೆ. ಈಗಲೂ ಕಾಲ ಮಿಂಚಿಲ್ಲ. ನ್ಯಾಯಾಲಯಕ್ಕೆ ವಾಸ್ತವ ಸಂಗತಿ ತಿಳಿಸಿ ಜಿಲ್ಲಾಧಿಕಾರಿಗಳು ತಮ್ಮ ಆದೇಶ ವಾಪಸು ಪಡೆಯಲಿ ಎಂದು ಪ್ರತಾಪ್ ಸಿಂಹ ಸಲಹೆ ನೀಡಿದರು.

ಮೈಸೂರು ಜಿಲ್ಲೆಯಲ್ಲಿ ಶೀಘ್ರ 'ಗೃಹ ಆರೋಗ್ಯ' ಯೋಜನೆ ಜಾರಿ

■ 4 ಲಕ್ಷ ಮನೆಗಳಿಗೆ ಭೇಟಿ ನೀಡಿ 15 ಲಕ್ಷ ಮಂದಿಯ ಆರೋಗ್ಯ ತಪಾಸಣೆ ■ ತಲಾ ಇಬ್ಬರಂತೆ 400 ತಂಡಗಳಿಂದ ಕಾರ್ಯಾಚರಣೆ ■ 30 ದಿನಗಳಲ್ಲಿ ಬಿಪಿ, ಷುಗರ್, ಕ್ಯಾನ್ಸರ್, ನಿದ್ರೆಗೆ ಅಡಚಣೆ ರೋಗ ಪತ್ತೆ ■ ತಾಲೂಕು ಸಾರ್ವಜನಿಕ ಆಸ್ಪತ್ರೆ, ಜಿಲ್ಲಾಸ್ಪತ್ರೆಗಳಲ್ಲಿ ಚಿಕಿತ್ಸಾ ವ್ಯವಸ್ಥೆ



ಮೈಸೂರು, ಏ.8(ಆರ್‌ಕೆ)– ಕ್ಯಾನ್ಸರ್, ರಕ್ತದೊತ್ತಡ, ಸಕ್ಕರೆ ಖಾಯಿಲೆಯಂತಹ ರೋಗಿಗಳನ್ನು ಪತ್ತೆ ಮಾಡಿ ಚಿಕಿತ್ಸೆ ನೀಡುವ ಸಲುವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 'ಗೃಹ ಆರೋಗ್ಯ' ಯೋಜನೆ ಜಾರಿಗೆ ಮುಂದಾಗಿದೆ.

ಕರ್ನಾಟಕ ಸರ್ಕಾರವು ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಗೊಳಿಸಿ ಸಾರ್ವಜನಿಕರ ಆರೋಗ್ಯ ರಕ್ಷಿಸಿ ಮಾರಣಾಂತಿಕ ರೋಗಗಳಿಂದ ಸಾವನ್ನಪ್ಪುವುದನ್ನು ತಡೆಗಟ್ಟಲು ಮಹತ್ವದ ಕಾರ್ಯಕ್ರಮವನ್ನು ರೂಪಿಸಿದೆ ಎಂದು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಮಾರ್ಚ್ ಕಡೇ ವಾರದಲ್ಲೇ 'ಗೃಹ ಆರೋಗ್ಯ' ಯೋಜನೆಗೆ ಚಾಲನೆ ನೀಡಲುದ್ದೇಶಿಸಲಾಗಿತ್ತಾದರೂ, ಕೆಲ ಕಾರಣದಿಂದಾಗಿ ಮುಂದೂಡಲಾಗಿದ್ದು, ಏ.15ರೊಳಗಾಗಿ ಕಾರ್ಯಾರಂಭಕ್ಕೆ ಸರ್ವ ರೀತಿಯಲ್ಲಿ ಇಲಾಖೆ ಸಿದ್ಧತೆ ಮಾಡಿಕೊಂಡಿದೆ.

4 ಲಕ್ಷ ಮನೆಗಳಿಗೆ ಭೇಟಿ: ಮೈಸೂರು ಜಿಲ್ಲೆಯ 4 ಲಕ್ಷ ಮನೆಗಳಿಗೆ ಭೇಟಿ ನೀಡಿ 15 ಲಕ್ಷ ಮಂದಿಯ ಆರೋಗ್ಯ ತಪಾಸಣೆ ನಡೆಸಲಿರುವ ವೈದ್ಯರು ಮತ್ತು ಆಶಾ ಕಾರ್ಯಕರ್ತೆಯರು, ಬಿಪಿ, ಡಯಾಬಿಟಿಸ್, ಸೆರಿಕಲ್ ಕ್ಯಾನ್ಸರ್, ಬ್ರೆಸ್ಟ್ ಕ್ಯಾನ್ಸರ್ ಹಾಗೂ ನಿದ್ರೆ ಭಂಗ ರೋಗ ಪತ್ತೆ ಮಾಡುವರು. ಈಗಾಗಲೇ ಈ ಖಾಯಿಲೆಗಳಿಗೆ ಚಿಕಿತ್ಸೆ ಪಡೆಯುತ್ತಿದ್ದರೆ ಮುಂದಿನ ಕ್ರಮಗಳ ಬಗ್ಗೆ ಮಾಹಿತಿ ನೀಡಲಿರುವ ತಂಡಗಳು, ಖಾಯಿಲೆ ಬಗ್ಗೆ ಅರಿವಿಲ್ಲದವರಿಗೆ ಲ್ಯಾಬೋರೇಟರಿಯಿಂದ ತಪಾಸಣೆ ನಡೆಸಿ ಪಾಸಿಟಿವ್ ಬಂದಲ್ಲಿ ತಾಲೂಕು ಸಾರ್ವಜನಿಕ ಆಸ್ಪತ್ರೆ ಅಥವಾ ಜಿಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಆರಂಭಿಸಲಿವೆ.


ಡಾ.ಕುಮಾರಸ್ವಾಮಿ

400 ತಂಡಗಳು: ಗೃಹ ಆರೋಗ್ಯ ಯೋಜನೆ ಅನುಷ್ಠಾನಗೊಳಿಸಲು ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತೆಯರು, ಪ್ರಾಥಮಿಕ ಆರೋಗ್ಯ ಸಮುದಾಯ ಅಧಿಕಾರಿಗಳು ಹಾಗೂ ಸಮುದಾಯ ಆರೋಗ್ಯ ಅಧಿಕಾರಿಗಳುಳ್ಳ 400 ತಂಡಗಳನ್ನು ರಚಿಸಲಾಗಿದ್ದು, ಪ್ರತೀ ತಂಡದಲ್ಲಿ ಇಬ್ಬರು ಸದಸ್ಯರಿರುತ್ತಾರೆ.

ಆಸ್ಪತ್ರೆಗಳಲ್ಲಿ ಚಿಕಿತ್ಸೆ: ಮನೆ ಮನೆಗೆ ಭೇಟಿ ನೀಡಿ ರೋಗ ಪತ್ತೆ ಮಾಡಿದ ಬಳಿಕ ರೋಗಿಗಳನ್ನು ದಾಖಲಿಸಿಕೊಂಡು ಚಿಕಿತ್ಸೆ ನೀಡಲು ತಾಲೂಕು ಜನರಲ್ ಆಸ್ಪತ್ರೆ ಮತ್ತು ಮೈಸೂರಿನ ಜಿಲ್ಲಾಸ್ಪತ್ರೆಯಲ್ಲಿ ಸೌಲಭ್ಯ ಕಲ್ಪಿಸಲಾಗಿದೆ. ಖಾಯಿಲೆಗೆ ಆರಂಭದಲ್ಲೇ ಚಿಕಿತ್ಸೆ ನೀಡಿ ಗುಣಪಡಿಸಲು ಅಗತ್ಯ ಔಷಧಿ, ಪ್ರಯೋಗಾಲಯ, ಉಪಕರಣಗಳು, ನುರಿತ ವೈದ್ಯರು, ನರ್ಸ್‌ಗಳ ಸೌಲಭ್ಯವನ್ನು ಆಸ್ಪತ್ರೆಗಳಲ್ಲಿ ಕಲ್ಪಿಸಲಾಗಿದೆ.

ಮೊದಲ ಗ್ರಾಮಗಳು: ಮೊದಲು ಮೈಸೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಗೃಹ ಆರೋಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಲು ಮ್ಯಾಪಿಂಗ್ ಮಾಡಿಕೊಳ್ಳಲಾಗಿದ್ದು, ನಂತರ ಮೈಸೂರು ನಗರದಲ್ಲಿ ಮನೆ ಮನೆಗೆ ಭೇಟಿ ನೀಡಲಾಗುವುದು.

ಜಾಗೃತಿ: ನಿದ್ರೆಗೆ ಅಡಚಣೆಯಾಗುವುದು, ಸೆರಿಕಲ್ ಕ್ಯಾನ್ಸರ್, ಬ್ರೆಸ್ಟ್ ಕ್ಯಾನ್ಸರ್, ರಕ್ತದೊತ್ತಡ, ಸಕ್ಕರೆ ಖಾಯಿಲೆಗೆ ಕಾರಣ, ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮ, ಚಿಕಿತ್ಸಾ ಕ್ರಮ, ಇಲಾಖೆಯಲ್ಲಿರುವ ಸೌಲಭ್ಯಗಳು, ರೋಗಗಳ ತೀವ್ರತೆ ಬಗ್ಗೆ ಜನರಿಗೆ ಅರಿವು ಮೂಡಿಸುವುದಲ್ಲದೆ, ರೋಗಗಳು ಬಾರದಂತೆ ಅನುಸರಿಸುವ ಕ್ರಮದ ಬಗ್ಗೆಯೂ ತಂಡದ ಸದಸ್ಯರು ಜನರಿಗೆ ಜಾಗೃತಿ ಮೂಡಿಸುವರು.

ಏನಿದು ಯೋಜನೆ?

ಮೈಸೂರು ನಗರ ಸೇರಿದಂತೆ ಜಿಲ್ಲಾದ್ಯಂತ ಪ್ರಾಥಮಿಕ ಆರೋಗ್ಯ ಸಮುದಾಯ ಅಧಿಕಾರಿ (ಪ್ರೈಮರಿ ಹೆಲ್ತ್ ಕಮ್ಯುನಿಟಿ ಆಫೀಸರ್), ಸಮುದಾಯ ಆರೋಗ್ಯ ಅಧಿಕಾರಿ (ಕಮ್ಯುನಿಟಿ ಹೆಲ್ತ್ ಆಫಿಸರ್)ಗಳು ಹಾಗೂ ಆಶಾ ಕಾರ್ಯಕರ್ತೆಯರು ಪ್ರತೀ ಮನೆ ಮನೆಗೆ ಭೇಟಿ ನೀಡಿ ಜನರ ಆರೋಗ್ಯ ತಪಾಸಣೆ ಮಾಡಿ ರೋಗ ಲಕ್ಷಣಗಳನ್ನು ದಾಖಲಿಸಿಕೊಂಡು ರೋಗ ಇರುವುದನ್ನು ಸರಿಯಾದ ಡಯಾಗ್ನಸಿಸ್ ಪ್ರಕ್ರಿಯೆ ಮೂಲಕ ದೃಢಪಡಿಸಿಕೊಂಡು ಸೂಕ್ತ ಚಿಕಿತ್ಸೆ ನೀಡಿ ಗುಣಪಡಿಸುವುದು ಹಾಗೂ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸುವುದು ಗೃಹ ಆರೋಗ್ಯ ಯೋಜನೆಯ ಉದ್ದೇಶವಾಗಿದೆ.

ನೈಪುಣ್ಯ ಬೇಸಿಗೆ ಬಂಡಿಗೆ ಚಾಲನೆ

ಬೇಸಿಗೆ ಶಿಬಿರಗಳಲ್ಲಿ ಸಹಜ ಬಾಲ್ಯದ ಅನುಭವ ದೊರಕಲಿ: ಶಾಂಭವಿ ಸ್ವಾಮಿ


ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯು ಆಯೋಜಿಸಿರುವ ಬೇಸಿಗೆ ಬಂಡಿ ಶಿಬಿರಕ್ಕೆ ಮೈಸೂರಿನ ರಾಮಕೃಷ್ಣನಗರ ವೃತ್ತದಲ್ಲಿ ಜನಪದ ಮೆರವಣಿಗೆಗೆ ಡಾ.ಶಾಂಭವಿ ಸ್ವಾಮಿ ಚಾಲನೆ ನೀಡುವ ಮೂಲಕ ಉದ್ಘಾಟಿಸಿದರು.

ಮೈಸೂರು, ಏ.8– ವೇಗದ ಜಗತ್ತಿನಲ್ಲಿ ಸಹಜ ಬಾಲ್ಯದ ಸುಖದಿಂದ ಇಂದಿನ ಮಕ್ಕಳು ವಂಚಿತರಾಗುತ್ತಿದ್ದು, ರಜಾ ಕಾಲದ ಬೇಸಿಗೆ ಶಿಬಿರಗಳಲ್ಲಿ ನಮ್ಮ ಕಳೆದು ಹೋಗುತ್ತಿರುವ ಪರಂಪರೆ ನೆನಪಿಸುವ ಹಾಗೆಯೇ ಬಾಲ್ಯದ ಬದುಕಿನ ಅನಭವ ದೊರಕಿಸಿ ಕೊಡುವ ಚಟುವಟಿಕೆಗಳನ್ನು ರೂಪಿಸುವ ಮೂಲಕ ನೈಜ ಬಾಲ್ಯ ಸವಿಯಲು ಮಕ್ಕಳಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ರಂಗ ನಿರ್ದೇಶಕಿ ಹಾಗೂ ನಾಟ್ಯ ವಿದುಷಿ ಡಾ.ಶಾಂಭವಿ ಸ್ವಾಮಿ ಕರೆ ನೀಡಿದರು.

ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯು ಆಯೋಜಿಸಿರುವ ಬೇಸಿಗೆ ಬಂಡಿ 15 ದಿನಗಳ ಬೇಸಿಗೆ ಶಿಬಿರದ ಕಾರ್ಯಕ್ರಮವನ್ನು ರಾಮಕೃಷ್ಣನಗರ ವೃತ್ತದಲ್ಲಿ ಜನಪದ ಮೆರವಣಿಗೆಗೆ ಚಾಲನೆ ನೀಡುವ ಮೂಲಕ ಉದ್ಘಾಟಿಸಿದರು. ನೈಪುಣ್ಯ ಬೇಸಿಗೆ ಬಂಡಿಯಲ್ಲಿ ದೇಸೀಯ ಆಟೋಟಗಳು ಜನಪದ ಚಟುವಟಿಕೆಗಳನ್ನು ಅಳವಡಿಸಿಕೊಂಡಿರುವುದನ್ನು ಹಾಗೂ ಹಳ್ಳಿಯ ಸೊಗಡು, ನಮ್ಮ ಸಂಸ್ಕೃತಿ ಪರಂಪರೆಯನ್ನು ಬಿಂಬಿಸುವ ಹಾಗೂ ಸಂಸ್ಕಾರವನ್ನು ಹೇಳಿಕೊಡುವ ದೂರದೃಷ್ಟಿತ್ವ ಹೊಂದಿರುವ ಈ ಬೇಸಿಗೆ ಶಿಬಿರ ಅಪರೂಪವಾದದ್ದು ಎಂದು ಪ್ರಶಂಸಿಸಿದರು. ಜನಪದ ಮೆರವಣಿಗೆಯಲ್ಲಿ ಎತ್ತಿನ ಗಾಡಿಯಲ್ಲಿ ಮಕ್ಕಳನ್ನು ಕೂರಿಸಿ ವಿವಿಧ ಜನಪದ ಕಲಾಮೇಳಗಳೊಂದಿಗೆ ರಾಮಕೃಷ್ಣನಗರ ಮತ್ತು ಕುವೆಂಪುನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮೂಲಕ ಶಿಬಿರದ ಕೇಂದ್ರ ಸ್ಥಳ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಕನಕದಾಸನಗರದ ಕ್ಯಾಂಪಸ್ ತಲುಪಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಆರ್.ರಘು, ಉಪ–ಪ್ರಾಂಶುಪಾಲರು ಶ್ರೀಮತಿ ಶೀನಾ ಕೆ.ಗುರ್ನಾನಿ, ಶಿಬಿರದ ಸಂಚಾಲಕಿ ಶ್ರೀಮತಿ ಭಾವನಾ ಶ್ರೀಕಾಂತ್ ಹಾಗೂ ಶಾಲಾ ಸಿಬ್ಬಂದಿ ವರ್ಗ ಮತ್ತು ಪೋಷಕರು ಭಾಗವಹಿಸಿದ್ದರು.

ಇದು ಜನಾಕ್ರೋಶ ಯಾತ್ರೆ ಅಲ್ಲ; ಬಿಜೆಪಿ ಆಕ್ರೋಶದ ಯಾತ್ರೆ

ಮೈಸೂರು: ಬಿಜೆಪಿಯ ಜನಾಕ್ರೋಶ ಯಾತ್ರೆ, ಆ ಪಕ್ಷದ ಯಾತ್ರೆ ಮಾತ್ರ ತಮ್ಮ ಅಸ್ತಿತ್ವ ತೋರಿಸಿಕೊಳ್ಳಲು ಹೋರಾಟ, ಜನಾಕ್ರೋಶ ಯಾತ್ರೆ ಮಾಡುತ್ತಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿಕಾರಿದರು.


ಬಿ.ಸುಬ್ರಹ್ಮಣ್ಯ

ಕರ್ನಾಟಕದ ಜನ ನೆಮ್ಮದಿಯಾಗಿದ್ದಾರೆ. ಸಿದ್ದರಾಮಯ್ಯನವರ ಆಡಳಿತ ಸಹಿಸಲಾಗದೇ ಆಕ್ರೋಶಗೊಂಡಿರುವುದು ಬಿಜೆಪಿಯವರು ಮಾತ್ರ. ಜನರಲ್ಲಂತೂ ಯಾವ ಆಕ್ರೋಶವಿಲ್ಲ. ಕೇಂದ್ರ ಸರ್ಕಾರದ ಬೆಲೆ ಏರಿಕೆಯಿಂದ ಜನ ರೋಸಿ ಹೋಗಿದ್ದರು. ಅವರ ಆರ್ಥಿಕ ಹೊರೆ ತಗ್ಗಿಸಲು ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಗ್ಯಾರಂಟಿಗಳನ್ನು ಘೋಷಣೆ ಮಾಡಿದೆ. ಈ ಮೂಲಕ ಜನರ ಬದುಕಿನಲ್ಲಿ ನೆಮ್ಮದಿ ತರುವ ಪ್ರಯತ್ನ ಮಾಡಿದೆ. ಆದರೆ ಒಬ್ಬ ಹಿಂದುಳಿದ ವರ್ಗದ ನಾಯಕನ ಆಡಳಿತ ಸಹಿಸಲಾಗದೇ ಬಿಜೆಪಿ ಕುತಂತ್ರ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಕಚ್ಚಾತೈಲ ಬೆಲೆ ಕಡಿಮೆಯಾಗಿದ್ದರೂ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಮಾಡಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ಅನುದಾನ ನೀಡುವುದಾಗಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಘೋಷಣೆ ಮಾಡಿದ್ದರು, ಈವರೆಗೂ ಒಂದು ರೂಪಾಯಿ ಕೊಟ್ಟಿಲ್ಲ. ಅದಿರಲಿ ಕರ್ನಾಟಕ ಅತೀ ಹೆಚ್ಚು ತೆರಿಗೆ ಪಾವತಿಸುವ ಎರಡನೇ ರಾಜ್ಯವಾಗಿದೆ. ಆದಾಗ್ಯೂ ನಮ್ಮ ತೆರಿಗೆ ಪಾಲನ್ನು ಸರಿಯಾಗಿ ಕೊಡದೇ ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚಿನ ತೆರಿಗೆ ಪಾಲನ್ನು ನೀಡಲಾಗುತ್ತಿದೆ. ಕೇಂದ್ರ ಸರ್ಕಾರ ರಾಜ್ಯದ ತೆರಿಗೆ ಪಾಲನ್ನು ನ್ಯಾಯಯುತವಾಗಿ ಕೊಟ್ಟರೆ, ಸಾಲದ ಅವಶ್ಯಕತೆಯೇ ಇರಲ್ಲ. ಇದೆಲ್ಲದರ ಬಗ್ಗೆ ಬಿಜೆಪಿ ನಾಯಕರು ಸೊಲ್ಲೆತ್ತುತ್ತಿಲ್ಲ ಎಂದು ಆಕ್ರೋಶ ಹೊರಹಾಕಿದರು.

ಕಳೆದ ಎರಡು ಕೇಂದ್ರ ಬಜೆಟ್‌ಗಳಲ್ಲಿ ಬಿಜೆಪಿ ಅಧಿಕಾರ ಉಳಿಸಿಕೊಳ್ಳಲು ಬಿಹಾರ, ಆಂಧ್ರ ಪ್ರದೇಶಕ್ಕೆ ಹೆಚ್ಚಿನ ಅನುದಾನ ನೀಡಿ, ಕರ್ನಾಟಕವನ್ನು ಕಡೆಗಣಿಸಿದೆ. ಇದ್ಯಾವುದರ ಬಗ್ಗೆಯೂ ಮಾತನಾಡದ ಬಿಜೆಪಿ ನಾಯಕರು ತಮ್ಮ ಆಕ್ರೋಶವನ್ನು ಜನರ ತಲೆಗೆ ಕಟ್ಟಿ ಜನಾಕ್ರೋಶ ಯಾತ್ರೆ ಮಾಡುತ್ತಿದ್ದಾರೆ. ಇದು ಅವಿವೇಕತನ ಎಂದು ಲೇವಡಿ ಮಾಡಿದರು.

ರೇಣುಕಸ್ವಾಮಿ ಕೊಲೆ ಪ್ರಕರಣ: ವಿಚಾರಣೆಗೆ ಗೈರಾದ ನಟ ದರ್ಶನ್‌ಗೆ ಕೋರ್ಟ್ ತರಾಟೆ

ಬೆಂಗಳೂರು, ಏ.8– ರೇಣುಕಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ಪವಿತ್ರಾ ಗೌಡ ಸೇರಿದಂತೆ ಎಲ್ಲಾ ಆರೋಪಿಗಳು ಸೋಮವಾರ ವಿಚಾರಣೆಗೆ ಹಾಜರಾಗಿದ್ದರು. ಆದರೆ ವಿಚಾರಣೆಗೆ ಹಾಜರಾಗದ ಎರಡನೇ ಆರೋಪಿ ನಟ ದರ್ಶನ್ ತೂಗುದೀಪ ಅವರನ್ನು ಬೆಂಗಳೂರಿನ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ತರಾಟೆಗೆ ತೆಗೆದುಕೊಂಡಿದೆ.



ತೀವ್ರ ಬೆನ್ನು ನೋವಿನಿಂದಾಗಿ ನಟ ದರ್ಶನ್ ಹಾಜರಾಗಲು ಸಾಧ್ಯವಿಲ್ಲ ಎಂದು ದರ್ಶನ್ ಪರ ವಕೀಲರು ತಿಳಿಸಿದ ನಂತರ ನ್ಯಾಯಾಲಯವು ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಪ್ರಕರಣದ ಎಲ್ಲಾ ಆರೋಪಿಗಳು ವೈಯಕ್ತಿಕವಾಗಿ ಹಾಜರಾಗುವುದು ಕಡ್ಡಾಯ ಎಂದು ನ್ಯಾಯಾಧೀಶರು ಪುನರುಚ್ಚರಿಸಿದರು. ಗಣ್ಯ ವ್ಯಕ್ತಿಗಳು ಅನಿಸಿಕೊಂಡವರು ಸೂಕ್ತ ಕಾನೂನಿನ ಕಾರಣವಿಲ್ಲದೆ ವಿನಾಯಿತಿ ಪಡೆಯಬಹುದು ಎಂಬ ಕಲ್ಪನೆ ತಪ್ಪು. ಕೇಸ್ ಇದ್ದಾಗ ಕೋರ್ಟ್‌ಗೆ ತಪ್ಪದೇ ಹಾಜರಾಗಬೇಕು. ಗೈರು ಆಗಬಾರದು ಎಂದು ಎಚ್ಚರಿಸಿದರು.

ವಿಚಾರಣೆಯ ಸಮಯದಲ್ಲಿ, ದರ್ಶನ್ ಪರ ವಕೀಲರು, ತನಿಖೆಗೆ ಸಂಬಂಧಿಸಿದಂತೆ ಅವರ ನಿವಾಸದ ಮೇಲೆ ದಾಳಿ ನಡೆಸಿದಾಗ ವಶಪಡಿಸಿಕೊಂಡ 75 ಲಕ್ಷ ರೂ. ನಗದನ್ನು ಬಿಡುಗಡೆ ಮಾಡುವಂತೆಯೂ ಕೋರಿದರು.

ಈ ವಿಷಯವನ್ನು ನಿರ್ಧರಿಸುವ ಮೊದಲು ಆದಾಯ ತೆರಿಗೆ ಇಲಾಖೆಯ ಪ್ರತಿಕ್ರಿಯೆಯನ್ನು ಕೇಳುವುದಾಗಿ ನ್ಯಾಯಾಲಯ ಹೇಳಿದೆ ಮತ್ತು ಮುಂದಿನ ವಿಚಾರಣೆಯನ್ನು ಮೇ 20ಕ್ಕೆ ನಿಗದಿಪಡಿಸಿದೆ.

ತನಿಖೆಯ ಸಮಯದಲ್ಲಿ ವಶಪಡಿಸಿಕೊಂಡ ಮೊಬೈಲ್ ಫೋನ್‌ಗಳನ್ನು ಹಿಂತಿರುಗಿಸುವಂತೆ ಕೋರಿ ಪ್ರತಿವಾದಿಯು ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಿದ್ದಾರೆ.

ಆರೋಪಿಗಳು ಜಾಮೀನು ಪಡೆದರೂ ಪ್ರತಿ ತಿಂಗಳು ನ್ಯಾಯಾಲಯಕ್ಕೆ ಹಾಜರಾಗಬೇಕು ಎಂಬ ಷರತ್ತು ಹಿನ್ನೆಲೆಯಲ್ಲಿ ಎಲ್ಲರೂ ಕೋರ್ಟ್‌ಗೆ ಹಾಜರಾಗಿದ್ದಾರೆ.

ಆದಿವಾಸಿ ಜನಾಂಗದ ಸುರೇಶ್ ಮೇಲೆ ದೌರ್ಜನ್ಯ: ಪೊಲೀಸ್ ಅಧಿಕಾರಿಗಳ ಅಮಾನತಿಗೆ ಆಗ್ರಹಿಸಿ ಇಂದು ಧರಣಿ

ಮೈಸೂರು,ಏ.8–ಮಹಿಳೆ ನಾಪತ್ತೆ ಪ್ರಕರಣದಲ್ಲಿ ಆದಿವಾಸಿ ಜನಾಂಗದ ಸುರೇಶ್ ಎಂಬುವವರಿಗೆ ಕಿರುಕುಳ ನೀಡಿದ ವಿಚಾರದಲ್ಲಿ ಸರ್ಕಲ್ ಇನ್ಸ್‌ಸ್ಪೆಕ್ಟರ್ ಬಿ.ಜಿ.ಪ್ರಕಾಶ್, ಎಎಸ್‌ಪಿ ಸೋಮಶೇಖರ್, ಸಿಬ್ಬಂದಿಗಳಾದ ಜಿತೇಂದ್ರಕುಮಾರ್, ಎಂ.ಪ್ರಕಾಶ್, ಮುಖೇಶ್‌ಕುಮಾರ್ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಅವರನ್ನು ಅಮಾನತುಗೊಳಿಸಬೇಕೆಂದು ಆಗ್ರಹಿಸಿ ಭ್ರಷ್ಟಾಚಾರ ನಿರ್ಮೂಲನಾ ಸಮಿತಿ ನಾಳೆ (ಬುಧವಾರ) ಬೆಳಗ್ಗೆ 10.30ಕ್ಕೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಮುಂದೆ ಧರಣಿ ಹಮ್ಮಿಕೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಆಟೋ ಸಹಿತ ಪಡಿತರ ಅಕ್ಕಿ ಜಪ್ತಿ

ಮೈಸೂರು, ಏ.8(ಎಸ್‌ಬಿಡಿ)– ಪಡಿತರರಿಂದ ಅನ್ನಭಾಗ್ಯ ಅಕ್ಕಿ ಖರೀದಿಸಿ ಆಟೋದಲ್ಲಿ ಸಾಗಿಸುವ ವೇಳೆ ಆಹಾರ ನಿರೀಕ್ಷಕರು ದಾಳಿ ನಡೆಸಿ, ವಶಪಡಿಸಿಕೊಂಡಿದ್ದಾರೆ.

ಹೆಬ್ಬಾಳ್ ಎರಡನೇ ಹಂತದಲ್ಲಿ ಪಡಿತರದಾರರಿಂದ ಅಕ್ಕಿ ಖರೀದಿಸುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಆಹಾರ ನಿರೀಕ್ಷಕ ಬಿ.ಎಸ್.ವೇಣುಗೋಪಾಲ್ ಕೂಡಲೇ ಸ್ಥಳಕ್ಕೆ ದೌಡಾಯಿಸಿದ್ದಾರೆ. ಅಲ್ಲಿನ 4ನೇ ಕ್ರಾಸ್‌ನಲ್ಲಿ ಮೂಟೆ ತುಂಬಿದ್ದ ಪ್ಯಾಸೆಂಜರ್ ಆಟೋ (ಕೆಎಲ್–13, ಎಹೆಚ್–9562) ತಡೆದು, ಪರಿಶೀಲಿಸಿದಾಗ ಅದರಲ್ಲಿ ಸರ್ಕಾರದಿಂದ ಬಡವರಿಗೆ ನೀಡುವ ಅನ್ನಭಾಗ್ಯ ಅಕ್ಕಿ ಪತ್ತೆಯಾಗಿದೆ.

ಈ ಬಗ್ಗೆ ಆಟೋ ಚಾಲಕ ಗೌಸಿಯಾ ನಗರದ ನದೀಂ ಪಾಷಾ(36)ನನ್ನು ವಿಚಾರಿಸಿದಾಗ ಪಡಿತರದಾರರಿಂದ ಅಕ್ಕಿ ಖರೀದಿಸಿ, ಇದನ್ನು ಹೋಟೆಲ್‌ಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದಾಗಿ ಹೇಳಿದ. ಆದ್ದರಿಂದ ಆಟೋ ಸಹಿತ 12 ಚೀಲಗಳಲ್ಲಿದ್ದ 6.32 ಕ್ವಿಂಟಾಲ್ ಅಕ್ಕಿ ಹಾಗೂ ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ವಶಪಡಿಸಿಕೊಳ್ಳಲಾಗಿದ್ದು, ಈ ಸಂಬಂಧ ಮುಂದಿನ ಕ್ರಮ ಜರುಗಿಸುವಂತೆ ಆಹಾರ ನಿರೀಕ್ಷಕರು ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಈ ಸಂಬಂಧ ನದೀಂ ಪಾಷಾ ಇನ್ನಿತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಗ್ಯಾಸ್, ಪೆಟ್ರೋಲ್–ಡೀಸೆಲ್ ದರ ಹೆಚ್ಚಳ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

ಮೈಸೂರು, ಏ.8(ಜಿಎ)–ಕೇಂದ್ರ ಸರ್ಕಾರ ಗ್ಯಾಸ್ ಸಿಲಿಂಡರ್, ಪೆಟ್ರೋಲ್, ಡೀಸೆಲ್ ಅಬಕಾರಿ ಸುಂಕ ಹೆಚ್ಚಳ ಮಾಡಿರುವುದನ್ನು ಖಂಡಿಸಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಈ ವೇಳೆ ಎಂ.ಕೆ.ಸೋಮಶೇಖರ್ ಮಾತನಾಡಿ, ಬಿಜೆಪಿ ರಾಜ್ಯಾದ್ಯಂತ ಜನಾಕ್ರೋಶ ಯಾತ್ರೆ ಆರಂಭಿಸಿದೆ. ಇದೇ ವೇಳೆ ಕೇಂದ್ರ ಸರ್ಕಾರ ಜನಾಕ್ರೋಶ ಯಾತ್ರೆಯ ದಿನವೇ ಗ್ಯಾಸ್ ಸಿಲಿಂಡರ್ ಬೆಲೆ ಏರಿಸಿ ರಾಜ್ಯ ಬಿಜೆಪಿಯ ಜನಾಕ್ರೋಶ ಕಾರ್ಯಕ್ರಮಕ್ಕೆ ಮಂಗಳಾರತಿ ಮಾಡಿದೆ. ಗ್ಯಾಸ್ ಸಿಲಿಂಡರ್ ಬೆಲೆ 50ರೂ. ಏರಿಕೆ ಮಾಡಿದ್ದು, ಡೀಸೆಲ್, ಪೆಟ್ರೋಲ್ ಅಬಕಾರಿ ಸುಂಕವನ್ನು 2 ರೂ. ಹೆಚ್ಚಳ ಮಾಡುವ ಮೂಲಕ ಜನಾಕ್ರೋಶ ಸಮಾವೇಶ ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಎಂಬುದನ್ನು ಸಾಬೀತು ಮಾಡಿದೆ ಎಂದು ವ್ಯಂಗ್ಯವಾಡಿದರು.

ಇತ್ತೀಚೆಗೆ ರೈತರಿಗೆ ಅತ್ಯವಶ್ಯಕವಾಗಿರುವ ಪದಾರ್ಥಗಳ ಬೆಲೆ ಏರಿಕೆಯಾಗಿದ್ದು ರೈತರಿಗೆ ನೆರವಾಗುವ ದೃಷ್ಟಿಯಿಂದ ರಾಜ್ಯ ಸರ್ಕಾರ ಹಾಲಿನ ದರ ಏರಿಸಿ ನೇರವಾಗಿ ರೈತರಿಗೆ ಅನುಕೂಲ ಮಾಡಿಕೊಟ್ಟಿದೆ. ಅದನ್ನು ಸಹಿಸದ ಬಿಜೆಪಿ ಹಾಲಿನ ದರ ಏರಿಕೆ ಮುಂದಿಟ್ಟುಕೊಂಡು ಸಿದ್ದರಾಮಯ್ಯ ರಾಜ್ಯದ ಜನತೆಯ ಕಲ್ಯಾಣಕ್ಕಾಗಿ ನೀಡಿರುವ ಜನಪರ ಕಾರ್ಯಕ್ರಮಗಳನ್ನು ಮರೆಮಾಚಲು ಯತ್ನಿಸಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಯಾಗುತ್ತಿದ್ದರೂ ಗ್ಯಾಸ್, ತೈಲೋತ್ಪನ್ನಗಳ ಮೇಲೆ ಸುಂಕ ಏರಿಸಿರುವುದು ಮೋದಿಗೆ ಜನತೆಯ ಮೇಲಿರುವ ಕಪಟ ಪ್ರೀತಿ ತೋರಿಸುತ್ತದೆ. ಇದನ್ನು ಅರ್ಥ ಮಾಡಿಕೊಂಡು ಬಿಜೆಪಿ ನಾಯಕರು ಈ ನಾಟಕೀಯ ಜನಾಕ್ರೋಶ ಸಮಾವೇಶ ಕೈಬಿಡಬೇಕು. ಬದಲಾಗಿ ಕೇಂದ್ರ ಸರ್ಕಾರದ ಮುಂದೆ ಜನರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಮನವರಿಕೆ ಮಾಡಿ ಜನರಿಗೆ ನೆರವಾಗಬೇಕು ಎಂದು ಒತ್ತಾಯಿಸಿದರು.


ಕೇಂದ್ರ ಸರ್ಕಾರ ಗ್ಯಾಸ್ ಸಿಲಿಂಡರ್, ಪೆಟ್ರೋಲ್, ಡೀಸೆಲ್ ಅಬಕಾರಿ ಸುಂಕ ಹೆಚ್ಚಳ ಮಾಡಿರುವುದನ್ನು ಖಂಡಿಸಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಿ.ಸೋಮಮಶೇಖರ್, ಶ್ರೀಧರ್, ರವಿಶಂಕರ್, ವಿಜಯ್ ಕುಮಾರ್, ಅಸಂಘಟಿತ ಕಾರ್ಮಿಕ ಘಟಕದ ಅಧ್ಯಕ್ಷ ವಿನಯ್‌ಕುಮಾರ್, ವಿಶ್ವನಾಥ್, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಭವ್ಯ, ಇಂದಿರಾ, ಆಶ್ರಯ ಸಮಿತಿ ಸದಸ್ಯ ಗುಣಶೇಖರ್, ಮಹ್ಮದ್ ಫಾರೂಖ್, ಮುಖಂಡರಾದ ಜೋಗಿ ಮಹೇಶ್, ಪುಟ್ಟ, ಮಂಜುನಾಥ್, ಯುವ ಕಾಂಗ್ರೆಸ್ ನಗರಾಧ್ಯಕ್ಷ ಅಬ್ರಾರ್, ಕೆ.ಆರ್. ಕ್ಷೇತ್ರದ ಅಧ್ಯಕ್ಷ ಹೊಯ್ಸಳ, ಉಪಾಧ್ಯಕ್ಷ ರಾಕೇಶ್, ಮಲ್ಲೇಶ್, ಶೇಖರ್, ಲಖನ್, ಎಐಎನ್‌ಟಿಸಿಯ ಅಧ್ಯಕ್ಷ ಮದನ್‌ಕುಮಾರ್, ವೆಂಕಟೇಶ್, ಕುಮಾರ್, ಮಹದೇವ್ರ, ನಾಸೀರ್, ಪ್ರತಾಪ್‌ರಾವ್, ರಮೇಶ್, ಲಕ್ಷ್ಮಿ, ಜ್ಯೋತಿ, ಚಿಕ್ಕಲಿಂಗು, ಅಶೋಕ್ ಇದ್ದರು.

ದೇಶ – ವಿದೇಶ

ಕಾಂಗೋ: ಧಾರಾಕಾರ ಮಳೆ, ಪ್ರವಾಹಕ್ಕೆ ಕನಿಷ್ಠ 30 ಬಲಿ

ಕಿನ್ಶಾಸ: ಕಾಂಗೋ ಗಣರಾಜ್ಯದ ರಾಜಧಾನಿ ಕಿನ್ಶಾಸದಲ್ಲಿ ಧಾರಾಕಾರ ಮಳೆ ಹಾಗೂ ಪ್ರವಾಹದಿಂದ ಕನಿಷ್ಠ 30 ಮಂದಿ ಸಾವನ್ನಪ್ಪಿದ್ದು ವ್ಯಾಪಕ ನಾಶ–ನಷ್ಟ ಸಂಭವಿಸಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ನಿರಂತರ ಸುರಿದ ಮಳೆಯಿಂದಾಗಿ ಪ್ರಮುಖ ರಸ್ತೆಗಳು ಪ್ರವಾಹದ ನೀರಿನಲ್ಲಿ ಮುಳುಗಿದ್ದು ತಗ್ಗುಪ್ರದೇಶಗಳು ಜಲಾವೃತಗೊಂಡಿವೆ. ಹಲವು ಮನೆಗಳು, ಕಟ್ಟಡಗಳು ಕುಸಿದಿದ್ದು ಪ್ರಾಥಮಿಕ ಮಾಹಿತಿ ಪ್ರಕಾರ 30 ಮಂದಿ ಸಾವನ್ನಪ್ಪಿದ್ದು ಇತರ ಹಲವರು ಗಾಯಗೊಂಡಿದ್ದಾರೆ. ಕಿನ್ಶಾಸ ನಗರವನ್ನು ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ಪ್ರಮುಖ ಹೆದ್ದಾರಿಯಲ್ಲಿ ಪ್ರವಾಹದ ನೀರು ಹರಿಯುತ್ತಿರುವುದರಿಂದ ಸಂಚಾರ ಅಸ್ತವ್ಯಸ್ತಗೊಂಡಿದೆ. ಕಿನ್ಶಾಸದ ಪೂರ್ವದಲ್ಲಿರುವ ಡೆಬೋನ್‌ಹೊಮ್ ಜಿಲ್ಲೆಯಲ್ಲಿ ಹಲವು ವಾಹನಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿವೆ ಎಂದು ಎಎಫ್‌ಪಿ ಸುದ್ದಿಸಂಸ್ಥೆ ವರದಿ ಮಾಡಿದೆ.

ಕಳ್ಳ ಸಾಗಣೆ; 1.2 ಕೆ.ಜಿ ಚಿನ್ನ ವಶ: ಇರಾಕ್ ಪ್ರಜೆ ಬಂಧನ

ನವದೆಹಲಿ: ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 1.2 ಕೆ.ಜಿ ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದ ಆರೋಪದ ಮೇಲೆ ಇರಾಕ್ ಪ್ರಜೆಯನ್ನು ಬಂಧಿಸಲಾಗಿದೆ ಎಂದು ಕಸ್ಟಮ್ಸ್ ಇಲಾಖೆ ತಿಳಿಸಿದೆ. ಬಾಗ್ದಾದ್‌ನಿಂದ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕನನ್ನು ತಪಾಸಣೆ ನಡೆಸಲಾಯಿತು. ಈ ವೇಳೆ ಚಿನ್ನ ಎಂದು ಶಂಕಿಸಲಾದ ಹಳದಿ ಲೋಹ ಮತ್ತು ಬೆಳ್ಳಿ ಲೇಪಿತ ಆಭರಣಗಳು ಪ್ರಯಾಣಿಕನ ಲಗೇಜ್ ಬ್ಯಾಗ್‌ನಲ್ಲಿ ಪತ್ತೆಯಾಗಿವೆ' ಎಂದು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಇಲಾಖೆ ಪೋಸ್ಟ್ ಮಾಡಿದೆ.



ಚಿನ್ನವನ್ನು ಕಳ್ಳಸಾಗಣೆ ಮಾಡುವ ಉದ್ದೇಶದಿಂದ ಸಾಮಾನುಗಳಲ್ಲಿ ಬಚ್ಚಿಟ್ಟಿರುವುದು ತಿಳಿದು ಬಂದಿದೆ. ಒಟ್ಟು 1,203 ಗ್ರಾಂ ತೂಕದ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ. ಘಟನೆ ಕುರಿತು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಯಾಣಿಕನನ್ನು ಬಂಧಿಸಲಾಗಿದೆ ಎಂದು ಕಸ್ಟಮ್ಸ್ ಇಲಾಖೆ ತಿಳಿಸಿದೆ.

ಅಮೆರಿಕದ ವಿರುದ್ಧ ವಾಣಿಜ್ಯ ಸಮರ ಸಾರಿದ ಚೀನಾ

ಬೀಜಿಂಗ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಶ್ವದ ಹಲವು ದೇಶಗಳ ವಸ್ತುಗಳ ಮೇಲೆ ಆಮದು ಸುಂಕವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಳ ಮಾಡಿದ್ದ ಬೆನ್ನಲ್ಲೇ ಚೀನಾಕ್ಕೆ ಶೇ.50ರಷ್ಟು ಹೆಚ್ಚುವರಿ ಸುಂಕ ವಿಧಿಸುವುದಾಗಿ ಎಚ್ಚರಿಕೆ ನೀಡಿದ್ದು, ಈ ಬೆದರಿಕೆಗೆ ಮಣಿಯುವುದಿಲ್ಲ ಎಂದು ತಿರುಗೇಟು ನೀಡಿರುವ ಚೀನಾ, ಇದೀಗ ಏ.10ರಿಂದ ಅಮೆರಿಕದ ಉತ್ಪನ್ನಗಳ ಮೇಲೆ ಶೇ.34ರಷ್ಟು ಪ್ರತಿಸುಂಕ ವಿಧಿಸುವುದಾಗಿ ಘೋಷಿಸುವ ಮೂಲಕ ವ್ಯಾಪಾರ ಸಮರಕ್ಕೆ ಸಜ್ಜಾಗಿದೆ. ಅಮೆರಿಕದ ಆಮದು ವಸ್ತುಗಳ ಮೇಲಿನ ಶೇ.34ರಷ್ಟು ಪ್ರತಿಸುಂಕವನ್ನು ರದ್ದುಗೊಳಿಸಲು ಟ್ರಂಪ್ ಚೀನಾಕ್ಕೆ ಒಂದು ದಿನದ ಕಾಲಾವಕಾಶ ನೀಡಿದ್ದು, ಈ ಗಡುವಿನೊಳಗೆ ಪ್ರತಿಸುಂಕ ಹಿಂಪಡೆಯದಿದ್ದರೆ ಏ.9ರಿಂದ ಚೀನಾದ ಆಮದು ವಸ್ತುಗಳ ಮೇಲೆ ಹೆಚ್ಚುವರಿ ಶೇ.50ರಷ್ಟು ಸುಂಕ ಅನ್ವಯವಾಗಲಿದೆ ಎಂದು ಎಚ್ಚರಿಸಿರುವುದಾಗಿ ವರದಿ ವಿವರಿಸಿದೆ. ಟ್ರಂಪ್ ಬೆದರಿಕೆ ಕುರಿತು ಪ್ರತಿಕ್ರಿಯಿಸಿರುವ ಚೀನಾ, ತನ್ನ ಹಕ್ಕು ಹಾಗೂ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವುದಾಗಿ ತಿರುಗೇಟು ನೀಡಿದೆ. ಅಷ್ಟೇ ಅಲ್ಲ ಅಮೆರಿಕದ ಪ್ರತಿಸುಂಕದ ಬೆದರಿಕೆ, ಅಮೆರಿಕದ ಬ್ಲ್ಯಾಕ್ ಮೇಲ್ ಸ್ವಭಾವವನ್ನು ಮತ್ತೊಮ್ಮೆ ಬಹಿರಂಗಪಡಿಸಿದೆ.

ಬಿಜೆಪಿ ನಾಯಕನ ನಿವಾಸದ ಹೊರಗೆ ಸ್ಫೋಟ: ತನಿಖೆ

ಚಂಡೀಗಢ: ಪಂಜಾಬ್‌ನ ಜಲಂಧರ್ ಜಿಲ್ಲೆಯಲ್ಲಿ ಬಿಜೆಪಿ ನಾಯಕ ಮನೋರಂಜನ್ ಕಾಲಿಯಾ ಅವರ ನಿವಾಸದ ಹೊರಗೆ ಸ್ಫೋಟ ಸಂಭವಿಸಿದೆ. ಜಲಂಧರ್‌ನ ಶಾಸ್ತ್ರಿ ಮಾರುಕಟ್ಟೆ ಬಳಿ ಇರುವ ಕಾಲಿಯಾ ಅವರ ನಿವಾಸದ ಹೊರಗೆ ನಸುಕಿನ 1 ಗಂಟೆ ಸುಮಾರಿಗೆ ಸ್ಫೋಟ ಸಂಭವಿಸಿದೆ.



ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ. ಆರೋಪಿಗಳನ್ನು ಪತ್ತೆ ಹಚ್ಚಲು ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದ್ದಾರೆ ಎಂದು ಉಪ ಪೊಲೀಸ್ ಆಯುಕ್ತ ಮನ್‌ಪ್ರೀತ್ ಸಿಂಗ್ ಹೇಳಿದ್ದಾರೆ. ಜಲಂಧರ್ ಪೊಲೀಸ್ ಆಯುಕ್ತ ಧನಪ್ರೀತ್ ಕೌರ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ವಿಧಿವಿಜ್ಞಾನ ತಂಡ ಸ್ಥಳಕ್ಕೆ ಭೇಟಿ ನೀಡಿದ್ದು, ಮಾದರಿಗಳನ್ನು ಸಂಗ್ರಹಿಸುತ್ತಿವೆ. ಘಟನೆ ಕುರಿತು ಎಫ್‌ಐಆರ್ ದಾಖಲಿಸಿ ಹೆಚ್ಚಿನ ತನಿಖೆ ನಡೆಸುತ್ತೇವೆ ಎಂದು ತಿಳಿಸಿದ್ದಾರೆ. ಕಳೆದ ನಾಲ್ಕೈದು ತಿಂಗಳುಗಳಲ್ಲಿ ಅಮೃತಸರ ಮತ್ತು ಗುರುದಾಸ್‌ಪುರ ಪೊಲೀಸ್ ಠಾಣೆಗಳನ್ನು ಗುರಿಯಾಗಿಸಿ ಅನೇಕ ಸ್ಫೋಟ ಘಟನೆಗಳು ನಡೆದಿವೆ. ಕಳೆದ ತಿಂಗಳು, ಅಮೃತಸರದ ದೇವಾಲಯದ ಹೊರಗೆ ಸ್ಫೋಟ ಸಂಭವಿಸಿದೆ ಎಂದು ಪೊಲೀಸ್ ಆಯುಕ್ತರು ಹೇಳಿದ್ದಾರೆ.

14 ದೇಶಗಳ ನಾಗರಿಕರಿಗೆ ವೀಸಾ ಸ್ಥಗಿತಗೊಳಿಸಿದ ಸೌದಿ

ರಿಯಾದ್: ಸೌದಿ ಅರೇಬಿಯಾ ಹಜ್ ಯಾತ್ರೆಗೆ ಮುಂಚಿತವಾಗಿ ಮಹತ್ವದ ನಿರ್ಧಾರ ತೆಗೆದುಕೊಂಡಿದೆ. 14 ದೇಶಗಳ ನಾಗರಿಕರಿಗೆ ವೀಸಾ ನೀಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.



ಹಜ್ ಯಾತ್ರೆ ಹಿನ್ನೆಲೆ ಜನಸಂದಣಿಯನ್ನು ನಿಯಂತ್ರಿಸುವ ಪ್ರಯತ್ನಗಳ ಭಾಗವಾಗಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಮಾಧ್ಯಮ ವರದಿಗಳ ಪ್ರಕಾರ, ಹಜ್ ಯಾತ್ರೆಯು ಮುಕ್ತಾಯಗೊಳ್ಳುವವರೆಗೆ ಅಂದರೆ ಜೂನ್ ಮಧ್ಯದವರೆಗೆ ನಿಷೇಧವು ಜಾರಿಯಲ್ಲಿರಲಿದೆ.

ಸೌದಿ ಅರೇಬಿಯಾ ಉಮ್ರಾ, ವ್ಯಾಪಾರ ಮತ್ತು ಕೌಟುಂಬಿಕ ವೀಸಾಗಳನ್ನು ನೀಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ನೋಂದಣಿ ಇಲ್ಲದ ವ್ಯಕ್ತಿಗಳು ಹಜ್ ನಿರ್ವಹಿಸಲು ಪ್ರಯತ್ನಿಸುವುದನ್ನು ತಡೆಯಲು, ಜನಸಂದಣಿಯನ್ನು ನಿಯಂತ್ರಿಸಲು, ಹಜ್ ವೇಳೆ ಕಾಲ್ತುಳಿತದಂತಹ ಘಟನೆಯನ್ನು ತಪ್ಪಿಸಲು ಈ ನಿರ್ಧಾರಕ್ಕೆ ಬರಲಾಗಿದೆ. ಸೌದಿ ಯುವರಾಜ ಮುಹಮ್ಮದ್ ಬಿನ್ ಸಲ್ಮಾನ್ ಅವರು ವೀಸಾ ನಿಯಮಾವಳಿಗಳನ್ನು ಬಿಗಿಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಮೈಸೂರು ಮಿತ್ರ ಬುಧವಾರ 9 ಏಪ್ರಿಲ್ 2025

ದ್ವಿತೀಯ ಪಿಯು ಪರೀಕ್ಷೆ: ಜಿಲ್ಲೆಗೆ 4ನೇ ಸ್ಥಾನ

ಕುಶಾಲನಗರದ ತೇಜಸ್ವಿನಿ ಕಾಮರ್ಸ್ ವಿಭಾಗದಲ್ಲಿ ರಾಜ್ಯಕ್ಕೆ 2ನೇ ರ್‍ಯಾಂಕ್

ಮಡಿಕೇರಿ,ಏ.8: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕೊಡಗು ಜಿಲ್ಲೆ ಶೇ.83.84 ಅಂಕ ದಾಖಲಿಸಿ ರಾಜ್ಯದಲ್ಲಿ 4ನೇ ಸ್ಥಾನ ಪಡೆದಿದೆ. ಕಳೆದ ಸಾಲಿನಲ್ಲಿ ಶೇ.92.13 ರಷ್ಟು ಪಡೆದುಕೊಂಡು 5ನೇ ಸ್ಥಾನ ಪಡೆದಿತ್ತು. ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿ ಬೀಗಿದ್ದಾರೆ. ಜಿಲ್ಲೆಯಲ್ಲಿ 4697 ವಿದ್ಯಾರ್ಥಿಗಳ ಪೈಕಿ 3928 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಕಲಾ ವಿಭಾಗದಲ್ಲಿ 786 ವಿದ್ಯಾರ್ಥಿಗಳ ಪೈಕಿ 516 ಮಂದಿ ಉತ್ತೀರ್ಣರಾಗಿದ್ದು, ಶೇ.65.65 ಫಲಿತಾಂಶ ದಾಖಲಾಗಿದ್ದರೆ, ವಾಣಿಜ್ಯ ವಿಭಾಗದಲ್ಲಿ 2376 ವಿದ್ಯಾರ್ಥಿಗಳ ಪೈಕಿ 2027ವಿದ್ಯಾರ್ಥಿಗಳು ತೇರ್ಗಡೆಯಾಗಿ, ಶೇ.85.31 ಫಲಿತಾಂಶ ಲಭಿಸಿದೆ. ಇನ್ನು ವಿಜ್ಞಾನ ವಿಭಾಗದಲ್ಲಿ 1535 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು, ಈ ಪೈಕಿ 1395 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.90.88 ಫಲಿತಾಂಶ ಲಭಿಸಿದೆ. ಖಾಸಗಿಯಾಗಿ ಪರೀಕ್ಷೆ ಬರೆದಿದ್ದ 250 ವಿದ್ಯಾರ್ಥಿಗಳ ಪೈಕಿ 121 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.48.40ರಷ್ಟು ಫಲಿತಾಂಶ ಹಾಗೂ ಪುನರಾವರ್ತಿತ 121 ಅಭ್ಯರ್ಥಿಗಳ ಪೈಕಿ 24 ಮಂದಿ ತೇರ್ಗಡೆಯಾಗಿ ಶೇ.19.38 ಫಲಿತಾಂಶ ಲಭಿಸಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಕೆ.ಮಂಜುಳಾ ತಿಳಿಸಿದ್ದಾರೆ.

ಕಲಾ ವಿಭಾಗ : ಕಲಾ ವಿಭಾಗದಲ್ಲಿ ಮಡಿಕೇರಿಯ ಸಂತ ಜೋಸೆಫರ ಪಿಯು ಕಾಲೇಜಿನ ಅಫಿಯಾ ಪ್ರಥಮ(572), ಕುಶಾಲನಗರ ಕನ್ನಡ ಭಾರತಿ ಪಿಯು ಕಾಲೇಜಿನ ನವನಿಧನ್ ಎಂ.ಆರ್ (569) ಮತ್ತು ಕೂಡಿಗೆ ಸರಕಾರಿ ಪದವಿ ಪೂರ್ವ ಕಾಲೇಜಿನ ಎಸ್.ಸಾಜಿದಾ(569) ಅವರುಗಳು ದ್ವಿತೀಯ ಸ್ಥಾನ ಹಂಚಿಕೊಂಡಿದ್ದಾರೆ. ಮದರೆ ಮಹೇಶ್ವರ ಪಿಯು ಕಾಲೇಜಿನ ವಿದ್ಯಾರ್ಥಿನಿ ಕೆ.ಮೇಘಶ್ರಿ 568 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗ : ವಾಣಿಜ್ಯ ವಿಭಾಗದಲ್ಲಿ ಸುಂಟಿಕೊಪ್ಪ ಸಂತ ಮೇರಿ ಸಂಯುಕ್ತ ಪಿಯು ಕಾಲೇಜಿನ ಸಿ.ಎಂ.ಡಿಂಪಲ್ ತಮ್ಮಯ್ಯ (591) ಪ್ರಥಮ, ಗೋಣಿಕೊಪ್ಪ ವಿದ್ಯಾನಿಕೇತನ ಪಿಯು ಕಾಲೇಜಿನ ಶಿವಾನಿ ಕೆ.ಎಸ್. ದ್ವಿತೀಯ(590) ಮತ್ತು ಗೋಣಿಕೊಪ್ಪ ವಿದ್ಯಾನಿಕೇತನ ಪಿಯು ಕಾಲೇಜಿನ ನೀಕ್ಷಾ ಮತ್ತು ಸುಂಟಿಕೊಪ್ಪ ಸಂತ ಮೇರಿ ಸಂಯುಕ್ತ ಪಿಯು ಕಾಲೇಜಿನ ಸೃಜನ ಡಿ.ಡಿ ಅವರುಗಳು ತಲಾ (587) ಅಂಕಗಳನ್ನು ಪಡೆಯುವ ಮೂಲಕ ತೃತೀಯ ಸ್ಥಾನ ಪಡೆದಿದ್ದಾರೆ.

ವಿಜ್ಞಾನ ವಿಭಾಗ : ವಿಜ್ಞಾನ ವಿಭಾಗದಲ್ಲಿ ಗೋಣಿಕೊಪ್ಪ ವಿದ್ಯಾನಿಕೇತನ ಪಿಯು ಕಾಲೇಜಿನ ವೈಷ್ಣವಿ ಟಿ.ವಿ(588) ಪ್ರಥಮ ಸ್ಥಾನ ಪಡೆದಿದ್ದಾರೆ. ಪೊನ್ನಂಪೇಟೆ ಹಳ್ಳಿಗಟ್ಟು ಕೂರ್ಗ್ ಪಿಯು ಕಾಲೇಜಿನ ಎ.ಆರ್.ಪನ್ಯ ಪೊನ್ನಮ್ಮ (586) ದ್ವಿತೀಯ, ಅದೇ ಕಾಲೇಜಿನ ಲಿರ್ಶೋ ಜೇಮ್ಸ್ ಮತ್ತು ಎಂ.ಪಿ.ಮಮತ 583 ಅಂಕ ಪಡೆದು ಅವರುಗಳು ತೃತೀಯ ಸ್ಥಾನ ಪಡೆದಿದ್ದಾರೆ.

ಕುಶಾಲನಗರ ವಿದ್ಯಾರ್ಥಿನಿ ತೇಜಸ್ವಿನಿಗೆ ದ್ವಿತೀಯ ರ್‍ಯಾಂಕ್


ತೇಜಸ್ವಿನಿ


ನವನಿಧನ್

ಕುಶಾಲನಗರ,ಏ.8– ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಭಾರತ ಮಾತ ಪಿಯು ಕಾಲೇಜಿನ ವಿದ್ಯಾರ್ಥಿನಿ ತೇಜಸ್ವಿನಿ ದ್ವಿತೀಯ ಪಿಯುಸಿ ಕಾಮರ್ಸ್ ವಿಭಾಗದಲ್ಲಿ 600 ಅಂಕಗಳಿಗೆ 598 ಅಂಕಗಳನ್ನು ಗಳಿಸುವ ಮೂಲಕ ರಾಜ್ಯಕ್ಕೆ 2ನೇ ರ್‍ಯಾಂಕ್ ಪಡೆದು ಕೀರ್ತಿ ತಂದಿದ್ದಾರೆ.

ಇಲ್ಲಿನ ಆದಿಶಂಕರಾಚಾರ್ಯ ಬಡಾವಣೆಯ ನಿವಾಸಿ ಅರಣ್ಯ ಇಲಾಖೆಯ ಅಧಿಕಾರಿ ಎಂ.ಎ.ಆನಂದ ಮತ್ತು ಸುಜಾತ ದಂಪತಿಯ ಪುತ್ರಿಯಾಗಿದ್ದು, ಉತ್ತಮ ಅಂಕಗಳನ್ನು ಗಳಿಸುವ ಮೂಲಕ ಕಾಲೇಜಿಗೆ ಹಾಗೂ ಕುಶಾಲನಗರ ಪಟ್ಟಣಕ್ಕೆ ಹೆಸರು ತಂದಿದ್ದಾಳೆ.

ಸಂತಸ: ತನ್ನ ಕಲಿಕೆಗೆ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ತಂದೆ–ತಾಯಿಯ ಸೂಕ್ತ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ಕಾರಣವಾಗಿದೆ. ತಾನು ಮೊದಲಿನಿಂದಲೂ ಪ್ರತಿ ನಿತ್ಯ ಐದಾರು ಗಂಟೆ ಕಾಲ ಪರಿಶ್ರಮಪಡುತ್ತಿದ್ದೆ. ಪರೀಕ್ಷೆಯ ಪೂರ್ವದಲ್ಲಿ ದಿನಕ್ಕೆ 8–10 ಗಂಟೆಗಳ ಕಾಲ ಅಭ್ಯಾಸ ಮಾಡುತ್ತಿದ್ದೆ. ನನಗೆ ಉತ್ತಮ ಅಂಕಗಳು ಬರುತ್ತವೆ ಎಂಬ ವಿಶ್ವಾಸ ಇತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿನ ಕನ್ನಡ ಭಾರತಿ ಪಿಯು ಕಾಲೇಜಿನ ಕಲಾ ವಿಭಾಗದ ವಿದ್ಯಾರ್ಥಿ ಎಂ.ಆರ್. ನವನಿಧನ್ 600 ಅಂಕಕ್ಕೆ 569 ಅಂಕ ಗಳಿಸಿ ಜಿಲ್ಲೆಗೆ ದ್ವಿತೀಯ ಸ್ಥಾನ ಗಳಿಸಿದ್ದಾನೆ. ಈತ ಬೈಲುಕೊಪ್ಪೆಯ ದೊಡ್ಡ ಹೊನ್ನೂರು ಗ್ರಾಮದ ಆಟೋ ಸ್ಪೇರ್ ಪಾರ್ಟ್ ಅಂಗಡಿಯ ರಂಗನಾಥ್ ಮತ್ತು ಧನಲಕ್ಷ್ಮಿ ದಂಪತಿ ಪುತ್ರ ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿದೆ

ನೂತನ ಎಎಸ್‌ಪಿಯಾಗಿ ಅಧಿಕಾರ ಸ್ವೀಕಾರ


ದಿನೇಶ್ ಕುಮಾರ್

ಮಡಿಕೇರಿ,ಏ.8– ಜಿಲ್ಲೆಯ ನೂತನ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ (ಎಎಸ್‌ಪಿ) ಆಗಿ ಜಿಲ್ಲೆಯವರೇ ಆದ ಬಾರಿಕೆ ದಿನೇಶ್ ಕುಮಾರ್ ಅಧಿಕಾರ ವಹಿಸಿಕೊಂಡಿದ್ದಾರೆ. ಈ ಹಿಂದೆ ಮಡಿಕೇರಿ ಉಪ ವಿಭಾಗದ ಡಿವೈಎಸ್‌ಪಿಯಾಗಿದ್ದ ದಿನೇಶ್ ಕುಮಾರ್ ಬಳಿಕ ಮಂಗಳೂರು ಡಿಸಿಪಿಯಾಗಿ ಕಾರ್ಯನಿರ್ವಹಿಸಿದ್ದರು. ಈ ಹಿಂದೆ ಎಎಸ್‌ಪಿ ಆಗಿ ಕರ್ತವ್ಯದಲ್ಲಿದ್ದ ಸುಂದರ್ ರಾಜು ಅವರು ಮೈಸೂರು ಅಪರಾಧ ವಿಭಾಗಕ್ಕೆ ವರ್ಗವಾಗಿದ್ದು, ತೆರವಾದ ಸ್ಥಾನಕ್ಕೆ ಬಾರಿಕೆ ದಿನೇಶ್ ಕುಮಾರ್ ನೇಮಕವಾಗಿದೆ.

ವಿನಯ್ ಸಾವು ಪ್ರಕರಣ: ಕಾಂಗ್ರೆಸ್ ಬೃಹತ್ ಪ್ರತಿಭಟನೆ


ಬಿಜೆಪಿ ವಿರುದ್ಧ ಕಾಂಗ್ರೆಸ್ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ಕುಶಾಲನಗರ, ಏ.8– ವಿನಯ್ ಸೋಮಯ್ಯ ಸಾವಿನ ಪ್ರಕರಣವನ್ನು ರಾಜಕೀಯವಾಗಿ ದಾಳವಾಗಿಸಿಕೊಂಡಿರುವ ಬಿಜೆಪಿ ವಿರುದ್ಧ ಕಾಂಗ್ರೆಸ್ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ನೇತೃತ್ವದಲ್ಲಿ ಪಕ್ಷದ ನೂರಾರು ಕಾರ್ಯಕರ್ತರು ಬಾವುಟ ಹಿಡಿದು ಬಿಎಂ ರಸ್ತೆಯ ಮೂಲಕ ಕಾರ್ಯಪ್ಪ ವೃತ್ತದವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ಮೆರವಣಿಗೆಯುದ್ದಕ್ಕೂ ಬಿಜೆಪಿ ಮುಖಂಡರ ವಿರುದ್ಧ ಧಿಕ್ಕಾರ ಕೂಗುತ್ತಾ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಕೆಲಹೊತ್ತು ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು. ಪಕ್ಷದ ವಕ್ತಾರ ಲಕ್ಷ್ಮಣ್, ಕಾಂಗ್ರೆಸ್ ಮುಖಂಡ ನಾಪಂಡ ಮುತ್ತಪ್ಪ ಮುಖಂಡ ಕೆ.ಕೆ.ಮಂಜುನಾಥ್ ಕುಮಾರ್ ಮಾತನಾಡಿ, ಈ ಪ್ರಕರಣದ ಬಗ್ಗೆ ತನಿಖೆ ಆಗಬೇಕು ಎಂದು ಒತ್ತಾಯಿಸಿದರು.

ಯೋಜನಾ ಪ್ರಾಧಿಕಾರದ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಪುರಸಭೆ ಅಧ್ಯಕ್ಷೆ ಜಯಲಕ್ಷ್ಮಿ ಚಂದ್ರು, ಕೆಪಿಸಿಸಿ ಸದಸ್ಯ ಮಂಜುನಾಥ್ ಗುಂಡೂರಾವ್, ಎಚ್.ಕೆ. ನಟೇಶ್ ಗೌಡ, ಮಹಿಳಾ ಘಟಕದ ಅಧ್ಯಕ್ಷೆ ಜೆ.ಫಿಲೋಮಿನಾ, ಜಿಲ್ಲಾ ಭರವಸೆ ಸಮಿತಿ ಸದಸ್ಯೆ ಸುನೀತಾ,ನಗರ ಕಾಂಗ್ರೆಸ್ ಘಟಕದ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ಭೂ ನ್ಯಾಯ ಮಂಡಳಿ ಅಧ್ಯಕ್ಷ ಗೋವಿಂದಪ್ಪ, ಪುರಸಭೆ ಸದಸ್ಯರಾದ ನವೀನ್, ಶಿವಶಂಕರ್, ಪ್ರಕಾಶ್, ಮುಖಂಡರಾದ ಎಸ್.ಎಸ್.ಚಂದ್ರಶೇಖರ್, ರಮೇಶ್, ಟಿ.ಬಿ. ಜಗದೀಶ್, ಕೆ.ಎಸ್.ಕೃಷ್ಣೇಗೌಡ, ಎಚ್.ಟಿ. ದಿನೇಶ್, ರವೀಂದ್ರನಾಥ್, ಟಿ.ಪಿ.ಹಮೀದ್, ಬಿ.ಡಿ.ಅಣ್ಣಯ್ಯ, ಗೀತಾ, ಪುಷ್ಪಲತಾ, ರುಬೀಯಾ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸೋಮಯ್ಯ ಸಾವಿನ ಪ್ರಕರಣ: ಜಿಲ್ಲಾಡಳಿತಕ್ಕೆ ಮನವಿ


ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿ, ಮೃತನ ಸೋದರ ಜೀವನ್ ಮನವಿ ಸಲ್ಲಿಸಿದರು. ಮಾಜಿ ಸಂಸದ ಪ್ರತಾಪ್ ಸಿಂಹ ಉಪಸ್ಥಿತರಿದ್ದರು.

ಮಡಿಕೇರಿ,ಏ.8: ಪ್ರತಿಭಟನೆಯ ನೆಪದಲ್ಲಿ ಸಾವನ್ನು ಸಂಭ್ರಮಿಸಿದ ಕಾಂಗ್ರೆಸ್ ಒಟ್ಟು ಪ್ರಕರಣವನ್ನು ತಿರುಚುತ್ತಿದೆಯೆಂದು ಮಾಜಿ ಸಂಸದ ಪ್ರತಾಪ ಸಿಂಹ ಕಿಡಿಕಾರಿದ್ದಾರೆ

ವಿನಯ್ ಸೋಮಯ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ಸಲ್ಲಿಸುವ ಸಂದರ್ಭ ಮೃತನ ಸಹೋದರನೊಂದಿಗಿದ್ದ ಪ್ರತಾಪ ಸಿಂಹ, ಸುದ್ದಿಗಾರರೊಂದಿಗೆ ಮಾತನಾಡಿ, ತಾನೊಬ್ಬ ಸಭ್ಯ ಸಂಭಾವಿತ ಎಂದು ತೋರಿಸಿಕೊಳ್ಳುತ್ತಿರುವ ಶಾಸಕ ಪೊನ್ನಣ್ಣ ಕೆಲವರನ್ನು ಛೂ ಬಿಟ್ಟು ಬಿಜೆಪಿ ವಿರುದ್ಧ ಟೀಕೆಗಳನ್ನು ಮಾಡಿಸುತ್ತಿದ್ದಾರೆಂದು ಹರಿ ಹಾಯ್ದರು. ವಿನಯ್ ಸೋಮಯ್ಯ ಆತ್ಮಹತ್ಯೆಗೂ ಮುನ್ನ ಬರೆದಿದ್ದ ಡೆತ್ ನೋಟ್‌ನಲ್ಲಿ ಜಿಲ್ಲೆಯ ಶಾಸಕರ ಹೆಸರನ್ನು ಉಲ್ಲೇಖಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಶಾಸಕರನ್ನು ಎಫ್‌ಐಆರ್‌ನಲ್ಲಿ ಸೇರಿಸಬೇಕೆಂದು ಪ್ರತಿಭಟನೆ ಮಾಡಿ ಒತ್ತಾಯಿಸಿದ್ದೇವೆ ಎಂದರು.

ಶಾಸಕರ ಮನೆ ಶೋಧಿಸಲಿ : ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಮಾಡಿಕೊಂಡು 4 ದಿನಗಳೇ ಕಳೆದು ಹೋಗಿದೆ. ಹೀಗಿದ್ದೂ ಇದರ ಪ್ರಮುಖ ಆರೋಪಿ ತೆನ್ನೀರಾ ಮೈನಾ ಬಂಧನವಾಗಿಲ್ಲ. ಅಪರಾಧಿಗಳು, ಭಯೋತ್ಪಾದಕರನ್ನು ಸೆರೆ ಹಿಡಿಯುವ ಪೊಲೀಸರಿಗೆ ಈತನನ್ನು ಬಂಧಿಸಲು ಸಾಧ್ಯವಾಗಿಲ್ಲವೆ? ಎಂದು ಪ್ರಶ್ನಿಸಿದರು. ಆರೋಪಿ ಸ್ಥಾನದಲ್ಲಿ ಇರುವಾತನಿಗೆ ಜಾಮೀನು ಕೊಡಿಸಲು ಶಾಸಕ ಪೊನ್ನಣ್ಣ ಪ್ರಯತ್ನಿಸುತ್ತಿದ್ದಾರೆ. ಹೀಗಾಗಿಯೇ ಆತನನ್ನು ಬಚ್ಚಿಡಲಾಗುತ್ತಿದೆ. ಹೀಗಾಗಿ ಪೊಲೀಸರು ಮೊದಲು ಶಾಸಕರ ಮನೆಯನ್ನು ಶೋಧಿಸಲಿ ಎಂದು ಆಗ್ರಹಿಸಿದರು. ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಮಾಡಿರುವ ಟೀಕೆಗಳ ಕುರಿತು ಪ್ರತಿಕ್ರಿಯಿಸಿ, 5 ಬಾರಿ ಚುನಾವಣೆಯಲ್ಲಿ ತಿರಸ್ಕರಿಸಿರುವ ಜನತೆ ಅವರನ್ನು ತಿಪ್ಪೆಗೆ ಒಗೆದಿದ್ದಾರೆ ಎಂದು ಲೇವಡಿ ಮಾಡಿದರು. ಮಾಜಿ ಶಾಸಕ ಕೆ.ಜಿ. ಬೋಪಯ್ಯ, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮೊದಲಾದವರಿದ್ದರು.

ಕ್ರಮಕ್ಕೆ ಮನವಿ: ವಿನಯ್ ಸೋಮಯ್ಯ ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿ, ಮೃತನ ಸೋದರ ಜೀವನ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾಡಳಿತಕ್ಕೆ ದೂರು ಸಲ್ಲಿಸಿದ್ದಾರೆ.

ವಿನಯ್ ಸೋದರ ಜೀವನ್ ಕೆ.ಎಸ್. ಅವರು ಇಂದು ಸಂಸದ ಪ್ರತಾಪ ಸಿಂಹ, ಮಾಜಿ ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮತ್ತು ಬಿಜೆಪಿ ಪ್ರಮುಖರೊಂದಿಗೆ ಎಸ್‌ಪಿ ಕೆ.ರಾಮರಾಜನ್ ಅವರನ್ನು ಭೇಟಿಯಾಗಿ, ಪ್ರಕರಣ ಸಂಬಂಧ ಚರ್ಚಿಸಿ ದೂರನ್ನು ಸಲ್ಲಿಸಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷರಾದ ರಾಬಿನ್ ದೇವಯ್ಯ, ಬಿ.ಬಿ.ಭಾರತೀಶ್, ಬಿ.ಕೆಅರುಣ್ ಕುಮಾರ್, ಬಿ.ಕೆ. ಜಗದೀಶ್, ಮಹೇಶ್ ಜೈನಿ, ಉಮೇಶ್ ಸುಬ್ರಮಣಿ, ಪಿ.ಎಂ.ರವಿ ಸೇರಿದಂತೆ ಹಲವು ಪಕ್ಷದ ಪ್ರಮುಖರು ಕಾರ್ಯಕರ್ತರು ಈ ಸಂದರ್ಭದಲ್ಲಿ ಹಾಜರಿದ್ದರು.

ನಾಪೋಕ್ಲು ವ್ಯಾಪ್ತಿಯಲ್ಲಿ ಭಾರಿ ಮಳೆ


ಮರಂದೊಡ ಗ್ರಾಮದಲ್ಲಿ ಸುರಿದ ಭಾರಿ ಗಾಳಿ, ಮಳೆಗೆ ಬಿದ್ದ ಮರ.

ನಾಪೋಕ್ಲು,ಏ.8– ನಾಪೋಕ್ಲು ವ್ಯಾಪ್ತಿಯಲ್ಲಿ ಮಂಗಳವಾರ ಮಧ್ಯಾಹ್ನ ರಭಸದ ಮಳೆಯಾಗಿದೆ.

ವಿವಿಧೆಡೆ ಗಾಳಿ, ಗುಡುಗು ಸಹಿತ ಮಳೆಯಾಗಿದ್ದು ಚರಂಡಿ ವ್ಯವಸ್ಥೆ ಇಲ್ಲದ ರಸ್ತೆಯಲ್ಲಿ ಮಳೆ ನೀರು ಹರಿದು ವಾಹನ ಸಂಚಾರಕ್ಕೆ ತೊಡಕುಂಟಾಗಿತ್ತು. ತೋಡುಗಳಲ್ಲಿ ನೀರು ಉಕ್ಕಿ ಹರಿದಿದೆ. ಹಲವೆಡೆ ರಭಸದ ಗಾಳಿ ಮಳೆಗೆ ಮರಗಳು ಬಿದ್ದು ಹಾನಿಯಾಗಿದೆ. ಸಮೀಪದ ಮರಂದೊಡ ಗ್ರಾಮದಲ್ಲಿ ಸುರಿದ ಭಾರಿ ಗಾಳಿ, ಮಳೆಗೆ ಮರದ ಬುಡ ಕುಸಿದು ಬಿದ್ದು ನಾಪೋಕ್ಲು–ವಿರಾಜಪೇಟೆ ಮುಖ್ಯ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತ್ತು . ಮಾತ್ರವಲ್ಲದೆ ವಿದ್ಯುತ್ ಸಂಪರ್ಕವು ಕಡಿತಗೊಂಡಿದೆ. ಸ್ಥಳೀಯ ಗ್ರಾಮಸ್ಥರು ಮರ ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಮರಂದೊಡ ಗ್ರಾಮದಲ್ಲಿ ಸುಮಾರು ಮೂರು ಇಂಚು ಮಳೆ ಸುರಿದಿರುವ ವರದಿಯಾಗಿದೆ.

ಜಿಲ್ಲೆಯಲ್ಲಿ ವಾಹನ ಸಂಚಾರ ನಿರ್ಬಂಧ

ಮಡಿಕೇರಿ,ಏ.8–ಮಡಿಕೇರಿ ಕುಟ್ಟ ಹೆದ್ದಾರಿ ಸಂ–89ರ ಕಿ.ಮೀ. 80.40 ರಲ್ಲಿನ (ಮಂಚಳ್ಳಿ ಗ್ರಾಮ, ಶ್ರೀಮಂಗಲ ಹೋಬಳಿ) ರಸ್ತೆ ಭಾಗದಲ್ಲಿ ಮಳೆಹಾನಿ ಕಾಮಗಾರಿ ಕೈಗೊಳ್ಳುವ ನಿಟ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿಯಿಂದ ಮೇ.10 ರವರೆಗೆ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿರುವುದಾಗಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶಿಸಿದ್ದಾರೆ.

ಸಾರ್ವಜನಿಕರು ಶ್ರೀಮಂಗಲ–ನಾಲ್ಕೇರಿ ಜಿಲ್ಲಾ ಮುಖ್ಯ ರಸ್ತೆಯ ಮುಖಾಂತರ (6 ಕಿ.ಮೀ), ಕಾಕೂರು –ಹೆರ್ಮಾಡು–ಬೊಳ್ಳರಿಗೇಟ್ ಜಿಲ್ಲಾ ಮುಖ್ಯ ರಸ್ತೆಯ ಮುಖಾಂತರ ಮಾರ್ಗವನ್ನು ಬಳಸುವುದು.

ವಿರಾಜಪೇಟೆ: ತಾಲೂಕಿನ ವಿರಾಜಪೇಟೆ–ಕರಡ ಜಿಲ್ಲಾ ಮುಖ್ಯರಸ್ತೆಯಲ್ಲಿನ ರಸ್ತೆ ಭಾಗದಲ್ಲಿ ಮಳೆಹಾನಿ ಕಾಮಗಾರಿ ಕೈಗೊಳ್ಳುವ ನಿಟ್ಟಿನಲ್ಲಿ ಮೇ, 10 ರವರೆಗೆ ತಾಲೂಕಿನ ವಿರಾಜಪೇಟೆ–ಕರಡ ಜಿಲ್ಲಾ ಮುಖ್ಯ ರಸ್ತೆ ಭಾಗದಲ್ಲಿ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿದ್ದಾರೆ

ಸಾರ್ವಜನಿಕರು ತೋರ–ಕೆದಮುಳ್ಳೂರು–ಬೋಯಿಕೇರಿ ಕಡೆಯಿಂದ ವಿರಾಜಪೇಟೆ ತೋರ–ಹೆಗ್ಗಳ–ಆರ್ಜಿ ಕಡೆಯಿಂದ ವಿರಾಜಪೇಟೆಗೆ ಮಾರ್ಗವನ್ನು ಬಳಸುವುದು.

ವಿದ್ಯುತ್ ತಂತಿ ತಗುಲಿ ಕಾಡಾನೆ ಸಾವು


ತಾಲೂಕಿನ ಕುರುಬರಹುಂಡಿ ಗ್ರಾಮದ ಜಮೀನಿನಲ್ಲಿ ವಿದ್ಯುತ್ ಸ್ಪರ್ಶಿಸಿ ಸಾವಿಗೀಡಾದ ಗಂಡಾನೆ.

ಗುಂಡ್ಲುಪೇಟೆ: ಏ–8: ಅಕ್ರಮವಾಗಿ ಹಾಯಿಸಿದ್ದ ವಿದ್ಯುತ್ ತಂತಿ ತಗುಲಿ ಕಾಡಾನೆ ಸಾವಿಗೀಡಾದ ಘಟನೆ ತಾಲೂಕಿನ ಕುರುಬರಹುಂಡಿ ಗ್ರಾಮದಲ್ಲಿ ನಡೆದಿದೆ.

ಬಂಡೀಪುರ ಹುಲಿ ಯೋಜನೆಯ ಓಂಕಾರ್ ವಲಯದ ಕಾಡಿನಿಂದ ಆಹಾರ ಅರಸಿ ಹೊರ ಬಂದಿದ್ದ 10 ವರ್ಷದ ಗಂಡಾನೆಯೊಂದು ಗ್ರಾಮದ ರಾಜೇಶ್ ಎಂಬುವರು ತಮ್ಮ ಜಮೀನಿನಲ್ಲಿ ಬೆಳೆದಿದ್ದ ಬೆಳೆ ರಕ್ಷಣೆಗೆ ಅಕ್ರಮವಾಗಿ ಅಳವಡಿಸಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಸ್ಥಳದಲ್ಲಿಯೇ ಸಾವಿಗೀಡಾಗಿದೆ.

ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಅರಣ್ಯಾಧಿಕಾರಿಗಳು ತೆರಳಿ ಪರಿಶೀಲಿಸಿದರು. ಇಲಾಖೆಯ ಪಶುವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಕಳೇಬರವನ್ನು ಹೂತುಹಾಕಲಾಯಿತು. ಈ ಬಗ್ಗೆ ಪ್ರಕರಣ ದಾಖಲಾಗಿದ್ದು ತಲೆಮರೆಸಿಕೊಂಡಿರುವ ಆರೋಪಿಯ ಪತ್ತೆಗೆ ಕ್ರಮಕೈಗೊಳ್ಳಲಾಗಿದೆ ಎಂದು ವಲಯಾರಣ್ಯಾಧಿಕಾರಿ ಸತೀಶ್ ಕುಮಾರ್ ತಿಳಿಸಿದ್ದಾರೆ.

ಜೆಎಸ್‌ಎಸ್ ಮಹಿಳಾ ಪಿಯು ಕಾಲೇಜಿಗೆ ಶೇ.79.1 ಫಲಿತಾಂಶ

ಯಳಂದೂರು,ಏ.8– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪಟ್ಟಣದ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿಗೆ ಶೇಕಡ 79.1 ಫಲಿತಾಂಶ ಲಭ್ಯವಾಗಿದೆ. ಪರೀಕ್ಷೆಗೆ ಹಾಜರಾದ 177 ವಿದ್ಯಾರ್ಥಿನಿಯರಲ್ಲಿ 140 ವಿದ್ಯಾರ್ಥಿನಿಯರುಗಳು ತೇರ್ಗಡೆ ಹೊಂದಿದ್ದಾರೆ ಇವರಲ್ಲಿ 14 ಅತ್ಯುನ್ನತ ಶ್ರೇಣಿ, 90 ಪ್ರಥಮ ದರ್ಜೆ. 29 ದ್ವಿತೀಯ ದರ್ಜೆ ಹಾಗೂ 7 ವಿದ್ಯಾರ್ಥಿನಿಯರುಗಳು ತೃತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ವಿಜ್ಞಾನ ವಿಭಾಗದಲ್ಲಿ 36 ವಿದ್ಯಾರ್ಥಿನಿಯರುಗಳು ತೇರ್ಗಡೆ ಹೊಂದಿದ್ದು, ಶೇ.92. 31, ವಾಣಿಜ್ಯ ವಿಭಾಗದಲ್ಲಿ 54 ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿ ಶೇ. 73.97, ಕಲಾ ವಿಭಾಗದಲ್ಲಿ 50 ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿದ್ದಾರೆ ಶೇ.76.92 ಫಲಿತಾಂಶ ಬಂದಿದೆ ಎಂದು ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ ಹೆಚ್‌ಎಸ್ ಹೇಳಿದರು.

ದ್ವಿತೀಯ ಪಿಯು ಪರೀಕ್ಷೆಯಲ್ಲಿ ಜಿಲ್ಲೆಗೆ ಶೇ.73.97ರಷ್ಟು ಫಲಿತಾಂಶ

ಚಾಮರಾಜನಗರ, ಏ.8 – ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು ಜಿಲ್ಲೆಯು ಶೇ. 73.97ರಷ್ಟು ಫಲಿತಾಂಶ ಪಡೆದಿದ್ದು ರಾಜ್ಯದಲ್ಲಿ 13ನೇ ಸ್ಥಾನ ಪಡೆದಿದೆ.

ಹಿಂದಿನ ವರ್ಷದಲ್ಲಿ ಜಿಲ್ಲೆಯು ಶೇ. 84.99 ರಷ್ಟು ಫಲಿತಾಂಶ ಪಡೆದು ರಾಜ್ಯದಲ್ಲಿ 14ನೇ ಸ್ಥಾನದಲ್ಲಿತ್ತು. ಈ ಬಾರಿ ಫಲಿತಾಂಶದಲ್ಲಿ ಸುಧಾರಣೆಯಾಗಿದ್ದು 13ನೇ ಸ್ಥಾನಕ್ಕೆ ಬಂದಿದೆ. ಒಟ್ಟು 6488 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 4799 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪರೀಕ್ಷೆಗೆ ಹಾಜರಾದ ಬಾಲಕರಲ್ಲಿ 3064ಕ್ಕೆ 1876 ಬಾಲಕರು ತೇರ್ಗಡೆಯಾಗಿದ್ದು, ಫಲಿತಾಂಶ ಶೇ. 61.23 ರಷ್ಟಿದೆ. ಇದೇ ರೀತಿ ಬಾಲಕಿಯರಲ್ಲಿ 4028ಕ್ಕೆ 3059 ಬಾಲಕಿಯರು ತೇರ್ಗಡೆಯಾಗಿ ಫಲಿತಾಂಶ ಶೇ.75.94 ರಷ್ಟಿದೆ.

ಕಲಾ ವಿಭಾಗದಲ್ಲಿ ಒಟ್ಟು 2122 ವಿದ್ಯಾರ್ಥಿಗಳಲ್ಲಿ 1122 ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ. 62.3ರಷ್ಟು ಫಲಿತಾಂಶ ಬಂದಿದೆ. ವಾಣಿಜ್ಯ ವಿಭಾಗದಲ್ಲಿ ಒಟ್ಟು 2343 ವಿದ್ಯಾರ್ಥಿಗಳಲ್ಲಿ 1873 ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ.79.94ರಷ್ಟು ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಲ್ಲಿ ಒಟ್ಟು 2023 ವಿದ್ಯಾರ್ಥಿಗಳಲ್ಲಿ 1604 ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ. 79.29ರಷ್ಟು ಫಲಿತಾಂಶ ಬಂದಿದೆ.

ಪರೀಕ್ಷೆಗೆ ಹಾಜರಾದ ಪಟ್ಟಣ ಪ್ರದೇಶದ ವಿದ್ಯಾರ್ಥಿಗಳ ಸಂಖ್ಯೆ 4700. ಇವರಲ್ಲಿ ಉತ್ತೀರ್ಣರಾದವರ ಸಂಖ್ಯೆ 3463 ಇದ್ದು, ಶೇ.73.68ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾದ ಗ್ರಾಮೀಣ ವಿದ್ಯಾರ್ಥಿಗಳಲ್ಲಿ 1788ಕ್ಕೆ 1336 ಆಗಿದ್ದು ಶೇ.74. 72ರಷ್ಟು ಫಲಿತಾಂಶ ಬಂದಿದೆ.

ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ವಿವರ: ಕಲಾ ವಿಭಾಗ: ಅಶ್ವಿನಿ. ಬಿ, ನಿಸರ್ಗ ಪದವಿ ಪೂರ್ವ ಕಾಲೇಜು, ಕೊಳ್ಳೇಗಾಲ, 573 (ಶೇ.95.50), ಕಾವ್ಯ ಎಂ, ಸರ್ಕಾರಿ ಪದವಿ ಪೂರ್ವ ಕಾಲೇಜು, ಕಬ್ಬಳ್ಳಿ, 573 (ಶೇ.95.50), ಮನೋಜ್ ಕುಮಾರ್, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಾಮರಾಜನಗರ, 572 (ಶೇ.95.30), ಹರ್ಷಿತ.ಎಂ.ಕೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ಆಲೂರು, 571 (ಶೇ.95.16).

ವಾಣಿಜ್ಯ ವಿಭಾಗ: ಮಹೇಶ್. ಎನ್, ನಿಸರ್ಗ ಪದವಿ ಪೂರ್ವ ಕಾಲೇಜು, ಕೊಳ್ಳೇಗಾಲ, 589 (ಶೇ.98.16), ಸುಪ್ರೀತಾ. ಕೆ, ಬ್ರೈಟ್ ಪದವಿ ಪೂರ್ವ ಕಾಲೇಜು, ಚಾಮರಾಜನಗರ, 586 (ಶೇ.97.66), ತನುಶ್ರೀ ಹೆಚ್., ನಿಸರ್ಗ ಪದವಿ ಪೂರ್ವ ಕಾಲೇಜು, ಕೊಳ್ಳೇಗಾಲ, 584 (ಶೇ.97.33),.

ವಿಜ್ಞಾನ ವಿಭಾಗ : ಅಮೃತಾ. ವಿ, ನಿಸರ್ಗ ಪದವಿ ಪೂರ್ವ ಕಾಲೇಜು, ಕೊಳ್ಳೇಗಾಲ, ಪಡೆದ ಅಂಕ 584 (ಶೇ.97.33), ಪ್ರಿಯಾ. ಆರ್, ನಿಸರ್ಗ ಪದವಿ ಪೂರ್ವ ಕಾಲೇಜು, ಕೊಳ್ಳೇಗಾಲ, 583 (ಶೇ.97.16), ಯತೀನ್ ಗೌಡ. ಪಿ, ನಿಸರ್ಗ ಪದವಿ ಪೂರ್ವ ಕಾಲೇಜು, ಕೊಳ್ಳೇಗಾಲ, 583 (ಶೇ.97.16), ಜೀವನ್. ಎಸ್. ನಿಸರ್ಗ ಪದವಿ ಪೂರ್ವ ಕಾಲೇಜು, ಕೊಳ್ಳೇಗಾಲ, 581 (ಶೇ. 96.83), ಪ್ರಭಾಮಣಿ ಕೆ.ಪಿ, ಮುರುಘರಾಜೇಂದ್ರ ಪದವಿ ಪೂರ್ವ ಕಾಲೇಜು, ಮರಿಯಾಲ, 581 (ಶೇ. 96.83), ಸಾನಿಕಾ. ಜಿ, ಶ್ರೀ ವಾಸವಿ ಪದವಿ ಪೂರ್ವ ಕಾಲೇಜು ಕೊಳ್ಳೇಗಾಲ, 581 (ಶೇ.96.83) ಆಗಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಂಜುನಾಥ ಪ್ರಸನ್ನ ತಿಳಿಸಿದ್ದಾರೆ.

ಮಾನವ ಸರಪಳಿ ನಿರ್ಮಿಸಿ ಬಂಡೀಪುರ ಉಳಿಸಿ ಜಾಗೃತಿ



ಪರಿಸರ ಸಂರಕ್ಷಣಾ ಸಂಘಟನೆಗಳ ವತಿಯಿಂದ ಇಂದು ಮಾನವ ಸರಪಳಿ ನಿರ್ಮಿಸಿ ಜಾಗೃತಿ ಮೂಡಿಸಲಾಯಿತು.

ಚಾಮರಾಜನಗರ,ಏ.8–ಬಂಡೀಪುರ ಉಳಿಸಿ, ಅಭಿಯಾನ ಅಂಗವಾಗಿ ಸಂಜೀವಿನಿ ಟ್ರಸ್ಟ್‌ನ ಹಸಿರು ಪಡೆ ಸೇರಿದಂತೆ ವಿವಿಧ ಪರಿಸರ ಸಂರಕ್ಷಣಾ ಸಂಘಟನೆಗಳ ವತಿಯಿಂದ ಇಂದು ಮಾನವ ಸರಪಳಿ ನಿರ್ಮಿಸಿ ಜಾಗೃತಿ ಮೂಡಿಸಲಾಯಿತು.

ನಗರದ ಶ್ರೀಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡ ವಿವಿಧ ಸಂಘಟನೆಗಳ ಕಾರ್ಯಕರ್ತರು ಸುಮಾರು 30 ನಿಮಿಷಕ್ಕೂ ಹೆಚ್ಚು ಕಾಲ ಮಾನವ ಸರಪಳಿ ನಿರ್ಮಿಸಿ ಬಂಡೀಪುರದಲ್ಲಿ ರಾತ್ರಿ ಸಂಚಾರಕ್ಕೆ ಅವಕಾಶ ನೀಡಬಾರದು ಎಂದು ಆಗ್ರಹಿಸಿದರು. ಇದರಿಂದ ಕೆಲಕಾಲ ರಸ್ತೆ ಸಂಚಾರದಲ್ಲಿ ಅಸ್ತವ್ಯಸ್ತವಾಯಿತು.

ಈ ವೇಳೆ ಪರಿಸರವಾದಿ ಅಬ್ರಹಾಂ ಡಿ.ಸಿಲ್ವ ಮಾತನಾಡಿ, ಬಂಡೀಪುರದಲ್ಲಿ ರಾತ್ರಿ ವೇಳೆಯಲ್ಲಿ ವಾಹನ ಸಂಚಾರ ನಿಷೇಧ ಮುಂದುವರಿಸಬೇಕು. ಇದನ್ನು ತೆರವುಗೊಳಿಸಿದರೆ ವನ್ಯಜೀವಿಗಳ ಪ್ರಾಣಕ್ಕೆ ಕಂಟಕ ಹಾಗೂ ಪರಿಸರಕ್ಕೆ ಹಾನಿಯಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಹಿಂದೆ ವಯನಾಡ್ ಸಂಸದರಾಗಿದ್ದ ರಾಹುಲ್‌ಗಾಂಧಿ ಮೂಲಕ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಿದ್ದರು ಈಗ ಪ್ರಿಯಾಂಕಾ ಗಾಂಧಿ ಮೂಲಕ ರಾತ್ರಿ ಸಂಚಾರಕ್ಕೆ ಅವಕಾಶ ಕಲ್ಪಿಸುವಂತೆ ಒತ್ತಡ ಹಾಕಲಾಗುತ್ತಿದೆ ಎಂದು ದೂರಿದರು.

ಕೇರಳದವರು ನಮ್ಮ ರಾಜ್ಯದಿಂದ ಹಣ್ಣು ತರಕಾರಿ, ಕಲ್ಲು, ಮಣ್ಣು ಸಾಗಿಸುತ್ತಾರೆ. ರಾಜ್ಯ ಸರ್ಕಾರ ಕೇರಳದ ಯಾವುದೇ ಲಾಬಿಗೆ ಮಣಿಯಬಾರದು. ರಾಜಕೀಯ ಹಿತಾಸಕ್ತಿಗಾಗಿ ವನ್ಯ ಪ್ರಾಣಿಗಳನ್ನು ಬಲಿ ಕೊಡುವುದು ಬೇಡ. ರಾತ್ರಿ ವೇಳೆ ವಾಹನ ಸಂಚಾರಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಇತರರು ಹಾಜರಿದ್ದರು.

ಮೇವಿನ ಸಮಸ್ಯೆ ಎದುರಾಗದಂತೆ ಗಮನಹರಿಸಲು ಆದೇಶ


ಶಾಸಕ ಗಣೇಶ್ ಪ್ರಸಾದ್ ಟಾಸ್ಕ್ ಫೋರ್ಸ್ ಸಮಿತಿಯ ಸಭೆಯಲ್ಲಿ ಮಾತನಾಡಿದರು.

ಗುಂಡ್ಲುಪೇಟೆ,ಏ.8– ಗ್ರಾಮಾಂತರ ಪ್ರದೇಶಗಳಲ್ಲಿ ಜನ–ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವಿನ ಸಮಸ್ಯೆ ಎದುರಾಗದಂತೆ ಕಟ್ಟುನಿಟ್ಟಿನ ಗಮನಹರಿಸಿ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅಧಿಕಾರಿಗಳಿಗೆ ಕಟ್ಟಪ್ಪಣೆ ನೀಡಿದ್ದಾರೆ

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಟಾಸ್ಕ್ ಫೋರ್ಸ್ ಸಮಿತಿಯ ಸಭೆಯಲ್ಲಿ ಮಾತನಾಡಿದ ಅವರು, ಬೇಸಿಯ ಕಾಲವಾದ್ದರಿಂದ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಅಗತ್ಯ ಮೇವಿನ ಸಮಸ್ಯೆಯಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಮುತುವರ್ಜಿ ವಹಿಸಿ ಕರ್ತವ್ಯ ನಿರ್ವಹಿಸಬೇಕು ಎಂದು ಸೂಚಿಸಿದರು. ಕಚೇರಿಗೆ ಬರುವ ಸಾರ್ವಜನಿಕರು ಪದೇ ಪದೆ ಅಲೆದಾಡದಂತೆ ಕಾಲಮಿತಿಯಲ್ಲಿ ಅವರ ಕೆಲಸಗಳನ್ನು ಮಾಡಿಕೊಡಬೇಕು. ರೈತರಿಗೆ ಸಮರ್ಪಕವಾಗಿ ಬಿತ್ತನೆ ಬೀಜದ ವಿತರಣೆ ಮಾಡಬೇಕು ಎಂದು ಹೇಳಿದರು.

ಪುರಸಭಾಧ್ಯಕ್ಷ ಜಿ.ಎಸ್.ಮಧುಸೂಧನ್, ತಹಸೀಲ್ದಾರ್ ಟಿ.ರಮೇಶಬಾಬು, ತಾ ಪಂ ಸಿಇಓ ಷಣ್ಮುಖ, ಸಹಾಯಕ ಕೃಷಿ ನಿರ್ದೇಶಕ ಶಶಿಧರ್, ತಾಲೂಕು ಆರೋಗ್ಯಾಧಿಕಾರಿ ಡಾ.ಅಲೀಂ ಪಾಷಾ, ಕುಡಿಯುವ ನೀರು ವಿಭಾಗದ ಎಇಇ ಮಧುಸೂಧನ್, ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಮೋಹನ್ ಕುಮಾರ್ ಸೇರಿದಂತೆ ಇತರರು ಇದ್ದರು.

ಕೊಳ್ಳೇಗಾಲದ ನಿಸರ್ಗ ಕಾಲೇಜಿನ ಮೂವರು ಜಿಲ್ಲಾ ಟಾಪರ್

ಕೊಳ್ಳೇಗಾಲ,ಏ.8– ದ್ವಿತೀಯ ಪಿಯು ಪರೀಕ್ಷೆಯಲ್ಲಿ ಪಟ್ಟಣದ ನಿಸರ್ಗ ಪದವಿ ಪೂರ್ವ ಕಾಲೇಜಿನ ಮೂವರು ವಿದ್ಯಾರ್ಥಿಗಳು ಜಿಲ್ಲಾ ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ

ವಿಜ್ಞಾನ ವಿಭಾಗದಲ್ಲಿ ಅಮೃತ 600 ಅಂಕಗಳಿಗೆ 584 ಅಂಕ, ವಾಣಿಜ್ಯ ವಿಭಾಗದ ಮಹೇಶ 600 ಅಂಕಗಳಿಗೆ 589, ಕಲಾ ವಿಭಾಗದಲ್ಲಿ ಅಶ್ವಿನಿ 600 ಅಂಕಗಳಿಗೆ 573 ಅಂಕಗಳಿಸಿ ಪ್ರಥಮ ಸ್ಥಾನಗಳಿಸಿದ್ದಾರೆ. ಜಿಲ್ಲಾ ಪಟ್ಟಿಯಲ್ಲಿ ಪ್ರಥಮ ಸ್ಥಾನಕ್ಕೆ ಭಾಜನರಾದ ಮೂವರು ವಿದ್ಯಾರ್ಥಿಗಳು ಗ್ರಾಮೀಣ ಭಾಗದಿಂದ ಅಧ್ಯಯನಕ್ಕೆ ಬಂದ ರೈತರ ಮಕ್ಕಳು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಅಮೃತ, ಯಳಂದೂರು ತಾಲೂಕಿನ ಮೆಲ್ಲಹಳ್ಳಿ ಮಾಳ ಗ್ರಾಮದ ವಿದ್ಯಾರ್ಥಿನಿ, ಮಹೇಶ್ ಸತ್ತೇಗಾಲ ಗ್ರಾಮದ ಸಮೀಪದ ಅಗ್ರಹಾರದ ವಾಸಿ, ಅದೇ ರೀತಿ ಅಶ್ವಿನಿ ಹನೂರು ತಾಲೂಕಿನ ಹೂಗ್ಯಂ ಗ್ರಾಮದ ವಾಸಿಯಾಗಿದ್ದು 3 ಮಂದಿಯೂ ಕಡು ಬಡತನದಲ್ಲಿ ಓದಿ ಸಾಧನೆಗೈದ ಪ್ರತಿಭೆಗಳು.

ವೈದ್ಯಳಾಗುವಾಸೆ: ವಿಜ್ಞಾನ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನಕ್ಕೆ ಭಾಜನರಾದ ವಿದ್ಯಾರ್ಥಿನಿ ವಿ. ಅಮೃತಾಗೆ ವೈದ್ಯಳಾಗಿ ಗ್ರಾಮೀಣದ ಭಾಗದ ಜನರ ಸೇವೆ ಮಾಡುವಾಸೆ. ಈ ಸಾಧನೆ ಸಂತಸ ತಂದಿದೆ. ಈ ಸಾಧನೆ ಹಿಂದೆ ನಮ್ಮ ಪೋಷಕರು, ಗುರುಗಳ ಸಹಕಾರ, ಹೆಚ್ಚು ಹೆಚ್ಚು ವಿಶೇಷ ತರಗತಿಗಳನ್ನು ಕಾಲೇಜಿನಲ್ಲಿ ನಡೆಸುತ್ತಿದ್ದು ಸಹಕಾರಿಯಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು

ಕುರಿಕಾಯುವ ಮಗನ ಸಾಧನೆ : ವಾಣಿಜ್ಯ ವಿಭಾಗದಲ್ಲಿ ಜಿಲ್ಲಾ ಟಾಪರ್ ಆಗಿ 589 ಅಂಕಗಳಿಸಿರುವ ಮಹೇಶ್ ರೈತ ಕುರಿ ಕಾಯುವವರ ಪುತ್ರ. ತಾಲೂಕಿನ ಸತ್ತೇಗಾಲ ಅಗ್ರಹಾರ ಗ್ರಾಮದ ಈತನಿಗೆ ಪರೀಕ್ಷೆಯಲ್ಲಿ ತಾನು ಅಂದುಕೊಂಡದ್ದಕ್ಕಿಂತ ಹೆಚ್ಚು ಅಂಕಪಡೆದ ತೃಪ್ತಿ ಇದ್ದು, ಈ ಸಾಧನೆ ನನಗೆ ಸಂತಸ ತಂದಿದೆ. ಕೆಎಎಸ್ ಮಾಡಬೇಕೆಂಬ ಮಹಾದಾಸೆ ನನ್ನದು ಎಂದು ತನ್ನ ಅಭಿಲಾಷೆ ಹಂಚಿಕೊಂಡರು

ಐಎಎಸ್ ಮಾಡುವಾಸೆ ಅಶ್ವಿನಿ : ಹೂಗ್ಯಂ ಗ್ರಾಮೀಣದ ಭಾಗ ವಿದ್ಯಾರ್ಥಿನಿ ಅಶ್ವಿನಿ ಐಎಎಸ್ ಮಾಡುವಾಸೆಯನ್ನು ವ್ಯಕ್ತಪಡಿಸಿದರು. ಜಿಲ್ಲಾ ಟಾಪ್ ಆಗಿರುವುದಕ್ಕೆ ಸಂತಸ ತಂದಿದೆ. ನನ್ನ ಸಾಧನೆಗೆ ಪೋಷಕರು, ಗುರುಗಳ ಸಹಕಾರ ಕಾರಣ ಎಂದರು.

ಇಬ್ಬರು ವ್ಯಕ್ತಿಗಳ ನಾಪತ್ತೆ



ಮಹೇಶ


ಸಿದ್ದರಾಜು

ಚಾಮರಾಜನಗರ: ಹನೂರು ತಾಲೂಕಿನ ಭುಟಗುಪ್ಪೆ ಗ್ರಾಮದ ನಿವಾಸಿ ಎಂ.ಮಹೇಶ (43) ಕಾಣೆಯಾಗಿದ್ದಾರೆ. 5.5 ಅಡಿ ಎತ್ತರ, ಕೆಂಪು ಮೈ ಬಣ್ಣ ದುಂಡುಮುಖ ಹೊಂದಿದ್ದು, ನೀಲಿ ಬಣ್ಣದ ಚೆಕ್ಸ್ ಶರ್ಟ್ ಹಾಗೂ ನೀಲಿ ಬಣ್ಣದ ಪ್ಯಾಂಟ್ ಧರಿಸಿದ್ದರು.

ಸಿದ್ದರಾಜು, 28 ವರ್ಷದ ಯುವಕ ಕಾಣೆಯಾಗಿದ್ದು, 4.5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಕೋಲು ಮುಖ, ಕಪ್ಪು ಮೈ ಬಣ್ಣ ಹೊಂದಿದ್ದು, ಮಾತನಾಡಲು ಬರುವುದಿಲ್ಲ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ


ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅವಿರೋಧವಾಗಿ ಆಯ್ಕೆಯಾದ ಕೆ.ನಂದೀಶ್, ಸದಾಶಿವಮೂರ್ತಿ ಬೆಂಬಲಿಗರೊಂದಿಗೆ ಸಂಭ್ರಮಾಚರಣೆ.

ಬೇಗೂರು,ಏ.8– ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಅರೇಪುರ ಕೆ.ನಂದೀಶ್, ಉಪಾಧ್ಯಕ್ಷರಾಗಿ ಸದಾಶಿವಮೂರ್ತಿ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಇವರಿಬ್ಬರನ್ನು ಹೊರತುಪಡಿಸಿ ಬೇರಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಎಸ್. ನಾಗೇಶ್ ಇವರನ್ನೇ ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಘೋಷಿಸಿದರು.

ಕಾಂಗ್ರೆಸ್ ಬೆಂಬಲಿತ ನಿರ್ದೇಶಕರಾದ ತಗ್ಗಲೂರು ತಮ್ಮಯ್ಯಪ್ಪ, ನಾರಾಯಣ, ರಾಜಣ್ಣ ಜೈನ್, ಶಂಕರಪ್ಪ, ಬಿಳಿಗಿರಿನಾಯಕ, ಪಿ.ಚಂದ್ರು, ರತ್ನಮ್ಮ, ಗ್ರಾಮದ ಯಜಮಾನ ಶಿವಮೂರ್ತಿ, ಮುಖಂಡರಾದ ಆಟೋ ಮಹೇಶ್, ಬೇಗೂರು ಮಂಜುನಾಥ್, ಸಿದ್ದರಾಜು, ಮಹೇಶ್, ಮಲ್ಲಿಕಾರ್ಜುನ, ವೆಂಕಟನಾಯಕ, ಕಬ್ಬೇಪುರ ಮಂಜುಸೂಧನ್, ಸಂಘದ ಸಿಇಓ ಶ್ರೀನಿವಾಸ ಶೆಟ್ಟಿ ಸೇರಿದಂತೆ ಹಲವರಿದ್ದರು.

ಕಾಂಗ್ರೆಸ್ ಬೆಂಬಲಿತರಾದ ನೂತನ ನಿರ್ದೇಶಕರಾದ ಮಲ್ಲಿದಾಸ್, ಚಂದ್ರಪ್ರಸಾದ್, ನಿರ್ಮಲ ಅವರು ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ಗೈರಾಗಿದ್ದರು.

ಅಭಿನಂದನೆ



ವಿಜ್ಞಾನ ವಿಭಾಗದಲ್ಲಿ 594 ಅಂಕ ಪಡೆದ ಆದಿಚುಂಚನಗಿರಿ ಕಾಲೇಜಿನ ವಿದ್ಯಾರ್ಥಿನಿ ಸಂಗೀತಾ ಹಾಗೂ ವಾಣಿಜ್ಯ ವಿಭಾಗದಲ್ಲಿ 594 ಅಂಕ ಪಡೆದ ಹರ್ಷಿಣಿ ಅವರನ್ನು ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸುತ್ತಿರುವುದು.

ನಿರ್ಮಿತ್‌ಗೆ 556 ಅಂಕ



ಮೈಸೂರು,ಏ.8(ಎಂಟಿವೈ)– ಮೈಸೂರಿನ ಎಂಎವಿಎಎಸ್ ಗುರುಕುಲ ಕಾಲೇಜಿನ ವಿದ್ಯಾರ್ಥಿ ಕೆ.ನಿರ್ಮಿತ್ ದ್ವಿತೀಯ ಪಿಯು ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಶೇ.93 ಅಂಕಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕನ್ನಡ 100, ಇಂಗ್ಲಿಷ್ 90, ಭೌತಶಾಸ್ತ್ರ 94, ರಸಾಯನಶಾಸ್ತ್ರ 90, ಗಣಿತ 88, ಜೀವಶಾಸ್ತ್ರ 94 ಸೇರಿದಂತೆ ಒಟ್ಟು 556 ಅಂಕ ಗಳಿಸಿದ್ದಾರೆ. ಈತ ಟಿ.ಕೆ.ಬಡಾವಣೆಯ ಶಿವಕುಮಾರ್, ರಜಿನಿ ದಂಪತಿ ಪುತ್ರ

ಎಸ್ತರ್ ಕೃಪರಾಜ್‌ಗೆ ಶೇ. 97 ಅಂಕ



ಮೈಸೂರು, ಏ.8(ಎಂಟಿವೈ)– ಮೈಸೂರಿನ ಸಾತಗಳ್ಳಿಯಲ್ಲಿರುವ ಲರ್ನರ್ ಪಿಯು ಕಾಲೇಜು ವಿದ್ಯಾರ್ಥಿನಿ ಎಸ್ತರ್ ಕೃಪರಾಜ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 582 (ಶೇ.97) ಅಂಕಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ–99, ಇಂಗ್ಲೀಷ್–95, ಭೌತಶಾಸ್ತ್ರ–95, ರಸಾಯನಶಾಸ್ತ್ರ–96, ಗಣಿತ–97, ಜೀವಶಾಸ್ತ್ರ–100 ಅಂಕ ಪಡೆದಿದ್ದಾಳೆ. ಈಕೆ ಟಿ. ನರಸೀಪುರ ತಾಲ್ಲೂಕು, ಸೋಸಲೆಯಲ್ಲಿರುವ ಜ್ಞಾನೋದಯ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಮೋಹನ್‌ರಾಜ್ ಹಾಗೂ ಡಾ. ವಿಜಯಲಕ್ಷ್ಮಿ ಪುತ್ರಿ.

ನಿರ್ಮಿತಾ ಎಂ.ಕೆ ಅವರಿಗೆ 558 ಅಂಕ



ಮೈಸೂರು, ಏ.8(ಎಂಟಿವೈ)– ಮೈಸೂರಿನ ಟೆರಿಷಿಯನ್ ಕಾಲೇಜಿನ ವಿದ್ಯಾರ್ಥಿನಿ ನಿರ್ಮಿತಾ ಎಂ.ಕೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 558 ಅಂಕ ಪಡೆದ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಯಾಗಿದ್ದಾರೆ. ಈಕೆ ಕನ್ನಡದಲ್ಲಿ 97, ಇಂಗ್ಲೀಷ್‌ನಲ್ಲಿ 91, ಅರ್ಥಶಾಸ್ತ್ರದಲ್ಲಿ 87, ಬ್ಯುಸಿನೆಸ್ ಸ್ಟಡೀಸ್‌ನಲ್ಲಿ 92, ಅಕೌಂಟೆನ್ಸಿಯಲ್ಲಿ 95, ಕಂಪ್ಯೂಟರ್ ಸೈನ್ಸ್‌ನಲ್ಲಿ 96 ಅಂಕ ಪಡೆದು ತೇರ್ಗಡೆಯಾಗಿದ್ದಾರೆ. ಈಕೆ ಕುಪ್ಪೇಗಾಲದ ನಿವಾಸಿ ಮಾಜಿ ತಾ.ಪಂ ಸದಸ್ಯ ಕೆ.ಎನ್.ಮಹೇಂದ್ರ ಅವರ ಪುತ್ರಿ

ಅಭಯ್ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.8–ಮೈಸೂರಿನ ಪ್ರಮತಿ ಪಿಯು ಕಾಲೇಜು ವಿದ್ಯಾರ್ಥಿ ಅಭಯ್ ಮಂಗಳವಾರ ಪ್ರಕಟವಾದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.89ರಷ್ಟು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡದಲ್ಲಿ 86, ಇಂಗ್ಲಿಷ್–85, ಭೌತಶಾಸ್ತ್ರ–86, ರಸಾಯನಶಾಸ್ತ್ರ–85, ಗಣಿತಶಾಸ್ತ್ರ–94, ಕಂಪ್ಯೂಟರ್ ಸೈನ್ಸ್‌ನಲ್ಲಿ 96 ಅಂಕಗಳನ್ನು ಪಡೆದಿರುವ ಈತ ಜಯನಗರದ ನಿವಾಸಿ ಚೆಸ್ಕಾಂ ಕಾರ್ಯಪಾಲಕ ಇಂಜಿನಿಯರ್ ಅನಿತಾ, ಜಿಪಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆನಂದ್ ದಂಪತಿಯ ಪುತ್ರ.

ಪಿಯುಸಿ: ಮನೀಷಾಗೆ 579 ಅಂಕ



ಮೈಸೂರು: ಶ್ರೀಮತಿ ದೇವಮಣಿ ಮತ್ತು ಮಂಜುನಾಥ್ ಪುತ್ರಿ ಕುಮಾರಿ ಮನೀಷ ಆರ್.ಎಂ. ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ (PCMC) 600ಕ್ಕೆ 579 ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ. ಕಂಪ್ಯೂಟರ್ ಸೈನ್ಸ್ 100 ಔಟ್ ಆಫ್ 100 ಗಳಿಸಿದ್ದಾರೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ




ಮೈಸೂರು, ಏ.8– ಜಯಚಾಮರಾಜೇಂದ್ರ ಪದವಿಪೂರ್ವ ಕಾಲೇಜು ವಿದ್ಯಾರ್ಥಿನಿ ಸಂಜನಾ ಪಿ.ಅರಸ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 537(ಶೇ.89.5) ಅಂಕ ಗಳಿಸಿ, ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, ಕನ್ನಡದಲ್ಲಿ 98, ಇಂಗ್ಲಿಷ್ 91, ಭೌತಶಾಸ್ತ್ರ 90, ರಸಾಯನಶಾಸ್ತ್ರ 85, ಗಣಿತ 79 ಹಾಗೂ ಜೀವಶಾಸ್ತ್ರದಲ್ಲಿ 94 ಅಂಕ ಪಡೆದಿದ್ದಾಳೆ.

ಉನ್ನತ ಶ್ರೇಣಿಯಲ್ಲಿ ಪಾಸ್




ಮೈಸೂರು, ಏ.8– ನಗರದ ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಟಿ.ಯು.ಪ್ರಿಯಾಂಕ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ.89ರಷ್ಟು ಅಂಕಗಳೊಂದಿಗೆ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡದಲ್ಲಿ 96, ಇಂಗ್ಲೀಷ್ 94, ಕಂಪ್ಯೂಟರ್ ಸೈನ್ಸ್ 95, ಭೌತಶಾಸ್ತ್ರ 89, ರಸಾಯನಶಾಸ್ತ್ರ 76, ಗಣಿತ 84 ಸೇರಿ ಒಟ್ಟು 600ಕ್ಕೆ 534 ಅಂಕ ಗಳಿಸಿದ್ದಾರೆ.

ಜಿ.ಧಾತ್ರಿಗೆ ಅಭಿನಂದನೆ



ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 596 ಅಂಕ ಗಳಿಸಿದ ಸದ್ವಿದ್ಯಾ ಸೆಮಿ–ರೆಸಿಡೆನ್ಷಿಯಲ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಜಿ.ಧಾತ್ರಿಯನ್ನು ಕಾಲೇಜು ಆಡಳಿತ ಮಂಡಳಿ ವತಿಯಿಂದ ಅಭಿನಂದಿಸಲಾಯಿತು.



ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಕಾಲೇಜಿನ ಜಿ.ಧಾತ್ರಿ ಪೋಷಕರೊಂದಿಗೆ ಸಂಭ್ರಮಿಸಿದ ಕ್ಷಣ.

ಬಿಇಓ ಪುತ್ರಿ ಧೃತಿ ಉನ್ನತ ಶ್ರೇಣಿ



ವಿದ್ಯಾರ್ಥಿ ಧೃತಿ ಅವರನ್ನು ಪೋಷಕರು ಅಭಿನಂದಿಸಿದರು.

ಮೈಸೂರು: ನಂಜನಗೂಡು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಮಹೇಶ್ ಅವರ ಪುತ್ರಿ ಧೃತಿ ಎಂ. ಅವರು ಮಂಗಳವಾರ ಪ್ರಕಟವಾದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 590 (ಶೇ.98.33) ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.

ಕನ್ನಡದಲ್ಲಿ 100, ಇಂಗ್ಲಿಷ್–96, ಭೌತಶಾಸ್ತ್ರ–97, ರಸಾಯನಶಾಸ್ತ್ರ–98, ಗಣಿತಶಾಸ್ತ್ರ–99 ಮತ್ತು ಕಂಪ್ಯೂಟರ್ ಸೈನ್ಸ್‌ನಲ್ಲಿ 100 ಅಂಕ ಪಡೆದಿರುವ ಈಕೆಯನ್ನು ಮಹೇಶ್ ಮತ್ತು ದಂಪತಿ ಅಭಿನಂದಿಸಿದ್ದಾರೆ. ಈಕೆ ಮೈಸೂರಿನ ಜ್ಞಾನೋದಯ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ.

ಮೈಸೂರು ರಿಂಗ್ ರಸ್ತೆ ಇಕ್ಕೆಲಗಳಲ್ಲಿ ರಾಶಿ ರಾಶಿ ನಾನಾ ತ್ಯಾಜ್ಯದ ಹೀನ ದರ್ಶನ; ಸ್ವಚ್ಛ ನಗರಿ ಅಪಹಾಸ್ಯದ ಚಿತ್ರಣ

ಪ್ಲಾಸ್ಟಿಕ್ ನಿಷೇಧಿಸುವ ಹೇಳಿಕೆ ಅಧಿಕಾರಿಗಳ ಮಾಮೂಲಿ ಸ್ಲೋಗನ್ ಅಷ್ಟೇ!



> ಬೇರೆಡೆಯಿಂದ ಮೈಸೂರಿಗೆ ಸಂಪರ್ಕ ಕಲ್ಪಿಸುವ ರಿಂಗ್ ರೋಡ್‌ನಲ್ಲಿ ತ್ಯಾಜ್ಯ ದರ್ಶನವಾದರೆ, ಸ್ವಚ್ಛತಾ ನಗರಿ ಮೈಸೂರಿನ ಬಗ್ಗೆ ಪ್ರವಾಸಿಗರು ಯಾವ ಮನೋಭಾವ ಹೊಂದುತ್ತಾರೆ ಎಂಬುದನ್ನು ಮೈಸೂರು ಜಿಲ್ಲಾಡಳಿತ ಚಿಂತನೆ ಮಾಡಬೇಕು. ಪ್ಲಾಸ್ಟಿಕ್ ನಿಷೇಧಿಸಲಾಗಿದೆ ಎಂದು ಸರ್ಕಾರ ಬಾಯಿಮಾತಿನಲ್ಲಿ ಹೇಳಿದರೆ ಸಾಲದು. ಪ್ಲಾಸ್ಟಿಕ್ ತಯಾರಿಕಾ ಘಟಕಗಳನ್ನೇ ಬಂದ್ ಮಾಡಿಸುವ ಎದೆಗಾರಿಕೆ ಇರಬೇಕಿತ್ತು ಆಗ ಮಾತ್ರ ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕೆ ತರಬಹುದಿತ್ತು.
> – ಭಾನು ಮೋಹನ್, ಪರಿಸರ ಹೋರಾಟಗಾರ್ತಿ

> ಹೊರಗಿನಿಂದ ಬರುವ ಲಕ್ಷಾಂತರ ಪ್ರವಾಸಿಗರು, ಮೈಸೂರಿನ ರಿಂಗ್‌ರಸ್ತೆಯಲ್ಲಿ ಹಾದುಹೋಗುತ್ತಾರೆ. ಈ ವೇಳೆ ಅವರಿಗೆ ಇಲ್ಲಿನ ಕಟ್ಟಡವೂ ಸೇರಿದಂತೆ ನಾನಾ ರೀತಿಯ ತ್ಯಾಜ್ಯ ರಾಶಿ ದರ್ಶನವಾಗುತ್ತಿದೆ. ಈ ರಸ್ತೆಯಲ್ಲಿ ಓಡಾಡುವ ವಾಹನ ಸವಾರರು, ಪ್ರವಾಸಿಗರಿಗೆ ದುರ್ನಾತ ಬೀರಿ, ಸ್ಥಳೀಯ ಆಡಳಿತದ ವಿರುದ್ಧ ಶಪಿಸಿ, ಮುಂದೆ ಸಾಗುತ್ತಾರೆ. ಹಾಗಾಗಿ ಮೈಸೂರು ರಿಂಗ್ ರಸ್ತೆಯಲ್ಲಿ ತ್ಯಾಜ್ಯ ಸುರಿಯುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು.
> –ಬಿ.ಬಸವರಾಜು, ಸಾಮಾಜಿಕ ಹೋರಾಟಗಾರರು.

ಮೈಸೂರು, ಏ.8(ಎಸ್‌ಪಿಎನ್)– ಅಂದವಾಗಿದ್ದ ಮೈಸೂರು ರಿಂಗ್ ರೋಡ್, ಇದೀಗ ಕಟ್ಟಡ ಮತ್ತು ಪ್ಲಾಸ್ಟಿಕ್ ತ್ಯಾಜ್ಯ ಸುರಿಯುವ ಸ್ಥಳವಾಗಿ ಬದಲಾಗಿದೆ.

ಮನೆ ಕಟ್ಟಿಸುವಾಗ ಹಳೆ ಮನೆ ಕೆಡವುತ್ತಾರೆ. ನಂತರ ಅದರ ತ್ಯಾಜ್ಯವನ್ನು ರಾತ್ರಿ ವೇಳೆ ಲಾರಿ, ಟ್ರಾಕ್ಟರ್‌ಗಳಲ್ಲಿ ತಂದು ರಿಂಗ್ ರಸ್ತೆಯ ಎಡ–ಬಲ ಬದಿ ಸರ್ವೀಸ್ ರಸ್ತೆಗಳಲ್ಲಿ ಸುರಿದು ಹೋಗುತ್ತಿದ್ದಾರೆ. ಇದನ್ನು ತಡೆಗಟ್ಟಬೇಕಾದ ಅಧಿಕಾರಿಗಳು ಜಾಣ ಮೌನಕ್ಕೆ ಜಾರಿದ್ದಾರೆ. ಜನರಿಗೆ ಒಳ್ಳೆಯ ರಸ್ತೆ ಬೇಕು. ಅದು ಹಳ್ಳ–ಕೊಳ್ಳ ಇರದ ರಸ್ತೆಯಾಗಿರಬೇಕು. ಅಂತಹ ರಸ್ತೆ ಅನುಷ್ಠಾನಗೊಂಡಾಗ ಅದನ್ನು ಜೋಪಾನವಾಗಿ ಕಾಪಾಡಿಕೊಳ್ಳಬೇಕೆಂಬ ಸಾಮಾನ್ಯ ಜ್ಞಾನವೂ ನಮ್ಮ ಜನರಿಗಿಲ್ಲ ಎಂದು ಪರಿಸರ ಪ್ರಿಯರು ಬೇಸರ ವ್ಯಕ್ತಪಡಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಹಳೆ ಕಟ್ಟಡಗಳನ್ನು ಕೆಡವಿ, ಹೊಸ ಕಟ್ಟಡಗಳನ್ನು ಕಟ್ಟುವವರ ಸಂಖ್ಯೆ ಹೆಚ್ಚಾಗುತ್ತಿದೆ. ನಂತರ ಈ ತ್ಯಾಜ್ಯವನ್ನು ರಾತ್ರಿ ವೇಳೆ ರಿಂಗ್‌ರೋಡ್‌ನಲ್ಲಿ ಸುರಿದು ಹೋಗುತ್ತಿದ್ದಾರೆ. ಇದರ ಬಗ್ಗೆ ಜಿಲ್ಲಾಡಳಿತ, ಮೈಸೂರು ನಗರ ಪಾಲಿಕೆ, ಮುಡಾ ಅಧಿಕಾರಿಗಳು ಕಾನೂನು ಕ್ರಮವಹಿಸುವಂತೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎನ್ನುತ್ತಾರೆ ಸಾಮಾಜಿಕ ಹೋರಾಟಗಾರ ಬಸವರಾಜು.

ಗಾಳಿ ಬಂದಾಗ ರಿಂಗ್‌ರೋಡ್ ಅಕ್ಕ–ಪಕ್ಕದ ಮನೆಗಳಿಗೆ ಪ್ಲಾಸ್ಟಿಕ್ ತ್ಯಾಜ್ಯ ತೂರಿಕೊಂಡು ಬರುತ್ತಿದೆ ಎಂದು ಮನೆ ಮಾಲೀಕರು ದೂರುತ್ತಿದ್ದಾರೆ. ಹಾಗಾಗಿ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಲು ಅಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳಬೇಕು. ಅಂತೆಯೇ ಇತ್ತೀಚೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು, ಪ್ಲಾಸ್ಟಿಕ್ ಉಪಯೋಗಿಸಿದರೆ, ಕ್ಯಾನ್ಸರ್ ಕಾರಕ ಎಂದು ಪತ್ರಿಕಾ ಹೇಳಿಕೆ ನೀಡಿದ್ದರು. ಆದರೂ ಸಾರ್ವಜನಿಕರು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿಲ್ಲ ಎಂದು ದೂರಿದರು.

ಹಾಲಿ ಶಾಸಕರು, ಸಂಸದರು ಬಾಯ್ಬಿಡುತ್ತಿಲ್ಲ: ರಿಂಗ್ ರೋಡ್ ಎಡ–ಬಲದಲ್ಲಿ ಕಟ್ಟಡ ತ್ಯಾಜ್ಯ ಸುರಿಯುವುದರಿಂದ ಮಳೆಗಾಲದಲ್ಲಿ ರಸ್ತೆ ಅಕ್ಕ–ಪಕ್ಕದ ಚರಂಡಿಯಲ್ಲಿ ಮಳೆ ನೀರು ಹರಿಯುವ ಬದಲಾಗಿ, ರಸ್ತೆಯಲ್ಲಿ ಹರಿಯುತ್ತದೆ. ಇದರಿಂದ ರಸ್ತೆ ಹಾಳಾಗಿ, ಗುಂಡಿಮಯವಾಗುತ್ತದೆ. ಇದರ ಮುನ್ಸೂಚನೆ ಇದ್ದರೂ ದುಷ್ಕರ್ಮಿಗಳು ಕಟ್ಟಡ ತ್ಯಾಜ್ಯ ಸುರಿದು, ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುವುದು ಬೇಸರ ಸಂಗತಿ. ಪ್ರಾಣಿಗಳ ತ್ಯಾಜ್ಯ, ಬಾರ್‌ಗಳಲ್ಲಿ ಉತ್ಪತ್ತಿಯಾದ ತ್ಯಾಜ್ಯವನ್ನು ಇಲ್ಲಿ ತಂದು ಸುರಿಯಲಾಗುತ್ತಿದೆ

ಪ್ರತಾಪ್ ಸಿಂಹ ಇದ್ದಾಗ ನಿಯಂತ್ರಣದಲ್ಲಿತ್ತು: ಮಾಜಿ ಸಂಸದ ಪ್ರತಾಪ ಸಿಂಹ ಅವರ ಅಧಿಕಾರಾವಧಿಯಲ್ಲಿ ರಿಂಗ್ ರೋಡ್ ಸ್ವಚ್ಛತೆಗೆ ಅಧಿಕಾರಿಗಳ ಮೇಲೆ ಒತ್ತಡ ತರುತ್ತಿದ್ದರು. ಆ ವೇಳೆ ವಿಪಕ್ಷಗಳು ಅವರ ಮೇಲೆ ಮುಗಿಬೀಳುತ್ತಿದ್ದರು. ಇದೀಗ ಪ್ರತಾಪ ಸಿಂಹ ಮಾಜಿ ಆಗಿದ್ದಾರೆ. ಪ್ರಸ್ತುತ ಹಾಲಿ ಶಾಸಕರು, ಸಂಸದರೂ ಸೇರಿದಂತೆ ಮೈಸೂರಿನ ಯಾವೊಬ್ಬ ಜನಪ್ರತಿನಿಧಿಯೂ ರಿಂಗ್‌ರೋಡ್‌ನಲ್ಲಿನ ಕಟ್ಟಡ ತ್ಯಾಜ್ಯದ ವಿಲೇವಾರಿ ಕುರಿತು ಮಾತನಾಡುತ್ತಿಲ್ಲ

ಈ ಹೆದ್ದಾರಿ ಅಭಿವೃದ್ಧಿಗೆ ಕೋಟಿಗಟ್ಟಲೇ ತೆರಿಗೆದಾರರ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ವ್ಯಯಿಸಿವೆ. ಈ ರಿಂಗ್‌ರೋಡ್, ಮಾನಂದವಾಡಿ ರಸ್ತೆ, ನಂಜನಗೂಡು ರಸ್ತೆ, ಬನ್ನೂರು ರಸ್ತೆ, ತಿ.ನರಸೀಪುರ ರಸ್ತೆ, ಬೆಂಗಳೂರು, ಕೊಡಗು, ಹಾಸನ ರಸ್ತೆಗಳಿಗೆ ಸಂಪರ್ಕದ ಕೊಂಡಿಯಾಗಿದೆ. ಹಾಗಾಗಿ ದಿನನಿತ್ಯ ಲಕ್ಷಾಂತರ ಪ್ರವಾಸಿಗರು, ಮೈಸೂರು ರಿಂಗ್ ರೋಡ್‌ನಲ್ಲಿ ಹಾದು ಹೋಗುವ ವೇಳೆ ಇಲ್ಲಿ ಸುರಿದಿರುವ ತ್ಯಾಜ್ಯ ಗಮನಿಸಿ, ತಮ್ಮತಮ್ಮ ಊರುಗಳಿಗೆ ತೆರಳಿದ ಮೇಲೆ ಮೈಸೂರಿನ ಮಾನ ಹರಾಜು ಹಾಕುವುದು ಗ್ಯಾರಂಟಿ ಎನ್ನುತ್ತಾರೆ ಪರಿಸರ ರಕ್ಷಣಾ ವೇದಿಕೆ ಅಧ್ಯಕ್ಷೆ ಭಾನುಮೋಹನ್.

ಬಾರ್ ತೆರವುಗೊಳಿಸಿ: ರಿಂಗ್ ರೋಡ್ ಸುತ್ತಮುತ್ತ ನಾಯಿ ಕೊಡೆಗಳಂತೆ ಬಾರ್‌ಗಳು ತಲೆ ಎತ್ತಿವೆ. ರಾತ್ರಿ ಮದ್ಯಪಾನ ಮಾಡಿ ರಸ್ತೆ ದಾಟುವಾಗ ಅನಾಹುತ ಸಂಭವಿಸಿದರೆ ಯಾರು ಹೊಣೆ ಎಂಬ ಪ್ರಶ್ನೆ ಎದುರಾಗುತ್ತದೆ. ಹಾಗಾಗಿ ರಿಂಗ್ ರಸ್ತೆಯುದ್ದಕ್ಕೂ ಇರುವ ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ಬೇರೆಡೆಗೆ ಸ್ಥಳಾಂತರ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಾಪಸಿಂಹ ದೂರದೃಷ್ಟಿಯ ಜನಪ್ರತಿನಿಧಿ: ಪ್ರತಾಪ ಸಿಂಹ ಸಂಸದರಾಗಿದ್ದಾಗ ಮೈಸೂರು ರಿಂಗ್‌ರೋಡ್‌ನಲ್ಲಿ ಬೇವಿನ ಮರ ಸೇರಿದಂತೆ ವಿವಿಧ ಮರಗಳನ್ನು ನೆಟ್ಟು, ರಿಂಗ್ ರಸ್ತೆ ಸದಾ ಹಸಿರಿನಿಂದ ಕಂಗೊಳಿಸುವಂತೆ ಮಾಡಿದ್ದರು. ಅಲ್ಲದೆ, ರಿಂಗ್‌ರೋಡ್ ಅಕ್ಕ–ಪಕ್ಕದಲ್ಲಿ ಸುರಿದ ಕಟ್ಟಡ ತ್ಯಾಜ್ಯದ ವಿಲೇವಾರಿಗೂ ಕ್ರಮ ವಹಿಸಿದ್ದರು. ಇಂದಿಗೂ ಹೊರಗಿನಿಂದ ಮೈಸೂರಿಗೆ ಬರುವ ಪ್ರವಾಸಿಗರು, ರಿಂಗ್‌ರೋಡ್‌ನಲ್ಲಿ ಹಾದುಹೋಗುವಾಗ ಹಸಿರಿಂದ ಕೂಡಿದ ಬೇವಿನ ಮರಗಳನ್ನು ನೋಡಿ ಆನಂದ ಪಡುತ್ತಾರೆ. ಹಾಗಾಗಿ ಪ್ರತಾಪಸಿಂಹ ದೂರ ದೃಷ್ಟಿಯ ಜನಪ್ರತಿನಿಧಿ ಎಂದು 'ಮೈಸೂರು ಮಿತ್ರ'ನಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದರು.

ವಕ್ಫ್ ಕಾಯ್ದೆ ಜಾರಿ: ಕೇಂದ್ರ ಸರ್ಕಾರದ ಅಧಿಸೂಚನೆ



ದೆಹಲಿ: ದೇಶದ ಇತಿಹಾಸದಲ್ಲೇ ಅತೀ ಮಹತ್ವದ ಕಾಯ್ದೆಗಳಲ್ಲಿ ಒಂದು ಎನಿಸಿಕೊಂಡ ವಕ್ಫ್ ತಿದ್ದುಪಡಿ ಕಾಯ್ದೆ 2025 ಇಂದಿನಿಂದ ಅಧಿಕೃತವಾಗಿ ಜಾರಿಗೆ ಬಂದಿದೆ. ಕಳೆದ ಭಾನುವಾರವಷ್ಟೇ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಕ್ಫ್ ತಿದ್ದುಪಡಿ ಮಸೂದೆಗೆ ಅಂಕಿತ ಹಾಕಿದ್ದರು. ಆಗಲೇ ಮಸೂದೆಗೆ ಕಾನೂನಿನ ಮುದ್ರೆ ಸಿಕ್ಕಿತ್ತು ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿದ್ದು, ಇಂದಿನಿಂದ ಅಧಿಕೃತವಾಗಿ ವಕ್ಫ್ ತಿದ್ದುಪಡಿ ಕಾಯ್ದೆ ಜಾರಿಗೆ ಬರಲಿದೆ.

ವಕ್ಫ್ (ತಿದ್ದುಪಡಿ) ಕಾಯ್ದೆ 2025 (2025ರ 14) ಸೆಕ್ಷನ್ 1ರ ಉಪವಿಭಾಗ (2) ರಮೂಲಕ ನೀಡಲಾದ ಅಧಿಕಾರವನ್ನು ಚಲಾಯಿಸುವಾಗ, ಕೇಂದ್ರ ಸರ್ಕಾರವು ಏಪ್ರಿಲ್ 8, 2025 ಅನ್ನು ಸದರಿ ಕಾಯ್ದೆಯ ನಿಬಂಧನೆಗಳು ಜಾರಿಗೆ ಬರುವ ದಿನಾಂಕವಾಗಿ ಘೋಷಿಸಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಲೋಕಸಭೆಯಲ್ಲಿ 288 ಮತಗಳನ್ನು ಪಡೆದಿದ್ದ ಮಸೂದೆ: ವಕ್ಫ್ ತಿದ್ದುಪಡಿ ಮಸೂದೆಯನ್ನು, ಇದೇ ಏಪ್ರಿಲ್ 2ರಂದು ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಕೇಂದ್ರ ಸಂಸದೀಯ ವ್ಯವಹಾರಗಳು ಮತ್ತು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಕ್ಫ್ ಮಸೂದೆ ಮಂಡಿಸಿದ್ದರು. ಭಾರೀ ವಿರೋಧ, ಸುದೀರ್ಘ ಚರ್ಚೆಯ ಬಳಿಕ ಅಂದೇ ತಡರಾತ್ರಿ 1.30ರ ಸುಮಾರಿಗೆ ವೋಟಿಂಗ್ ಮಾಡಲಾಗಿತ್ತು. ಆಗ ಎಲೆಕ್ಟ್ರಾನಿಕ್ ಮತದಾನದ ಮೂಲಕ ನಡೆದ ಪ್ರಕ್ರಿಯೆಯಲ್ಲಿ ಮಸೂದೆಗೆ 288 ಮತಗಳು ಒಲಿದವು, ಆದರೆ ಇನ್ನೊಂದೆಡೆ 232 ಸದಸ್ಯರು ವಿರೋಧಿಸಿದರು. ಇದರೊಂದಿಗೆ, ಅಸಾದುದ್ದೀನ್ ಓವೈಸಿ ಮತ್ತು ಗೌರವ್ ಗೊಗೊಯ್ ಅವರ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ಜೊತೆಗೆ ಕೆ.ಸಿ. ವೇಣುಗೋಪಾಲ್ ಮತ್ತು ಸೌಗತ ರಾಯ್ ಅವರು ಮಸೂದೆಯಲ್ಲಿ ಒತ್ತಾಯಿಸಿದ ತಿದ್ದುಪಡಿಗಳು ಸಹ ತಿರಸ್ಕರಿಸಲಾಗಿತ್ತು.

ರಾಜ್ಯಸಭೆಯಲ್ಲೂ ಗೆದ್ದಿದ್ದ ಮಸೂದೆ: ಬಳಿಕ ಮರುದಿನ ಅಂದರೆ ಏಪ್ರಿಲ್ 3ರಂದು ಸಂಸತ್ತಿನ ಮೇಲ್ಮನೆಯಾದ ರಾಜ್ಯಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆ ಮಂಡಿಸಲಾಗಿತ್ತು. ಅಲ್ಲೂ ಕೂಡ ಭಾರೀ ವಿರೋಧ ವ್ಯಕ್ತವಾಯ್ತು. ಸುದೀರ್ಘ ಚರ್ಚೆಯ ಬಳಿಕ ಮತದಾನ ನಡೆಸಲಾಯ್ತು. ಮಸೂದೆಯ ಪರವಾಗಿ 128 ಮತಗಳು ಚಲಾವಣೆಗೊಂಡರೆ, ವಿರುದ್ಧವಾಗಿ 95 ಮತಗಳು ಚಲಾವಣೆಯಾದವು. ಸದನವು ವಿರೋಧ ಪಕ್ಷದ ಎಲ್ಲಾ ತಿದ್ದುಪಡಿಗಳನ್ನು ಧ್ವನಿ ಮತದ ಮೂಲಕ ತಿರಸ್ಕರಿಸಿತು.

ಕಳೆದ ಭಾನುವಾರ ಅಂಕಿತ ಹಾಕಿದ್ದ ರಾಷ್ಟ್ರಪತಿ: ವಕ್ಫ್ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಒಪ್ಪಿಗೆ ದೊರೆತಿತ್ತು. ವಕ್ಫ್ ತಿದ್ದುಪಡಿ ಮಸೂದೆ 2025 ಶನಿವಾರ ರಾಷ್ಟ್ರಪತಿಯವರ ಸಹಿಗಾಗಿ ಕಳಿಸಿಕೊಡಲಾಗಿತ್ತು. ಪರಿಶೀಲನೆ ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮುಸಲ್ಮಾನ್ ವಕ್ಫ್ (ರದ್ದತಿ) ಮಸೂದೆ 2025 ಕ್ಕೆ ಸಹ ತಮ್ಮ ಒಪ್ಪಿಗೆ ನೀಡಿದ್ದು, ಸಹಿ ಮಾಡಿದ್ದರು.

ರಾಜ್ಯದ ಜನತೆಗೆ ಮತ್ತೊಂದು ಬೆಲೆ ಏರಿಕೆ ಶಾಕ್ ಖಾಸಗಿ ಬಸ್ ಟಿಕೆಟ್ ಬೆಲೆ ಹೆಚ್ಚಳ ನಿರ್ಧಾರ

ಬೆಂಗಳೂರು, ಏ. 8: ಕರ್ನಾಟಕದಲ್ಲಿ ಉಚಿತ ಗ್ಯಾರಂಟಿ ನೀಡಿ ಜನರನ್ನು ಖುಷಿಪಡಿಸಿದ್ದ ಕಾಂಗ್ರೆಸ್ ಸರ್ಕಾರ ಇದೀಗ ಬೆಲೆ ಏರಿಕೆ ಮಾಡಿ ಜನರ ಕಂಗಾಲು ಮಾಡಿದೆ. ಪ್ರತಿ ದಿನ ಒಂದಲ್ಲಾ ಒಂದರ ಬೆಲೆ ಏರಿಕೆಯಾಗುತ್ತಿದೆ. ಹಾಲಿನ ದರ ಏರಿಕೆ, ವಿದ್ಯುತ್ ದರ ಏರಿಕೆ, ಡೀಸೆಲ್ ಮೇಲಿನ ಸೆಸ್ ಏರಿಕೆ, ಕಸ ಸಂಗ್ರಹ ವಿಲೇವಾರಿಗೆ ಶುಲ್ಕ, ಪಾರ್ಕಿಂಗ್ ಶುಲ್ಕ ಪಾವತಿ ಸೇರಿದಂತೆ ಸತತ ಬೆಲೆ ಏರಿಕೆಯಾಗುತ್ತಿದೆ. ಇದರ ಪರಿಣಾಮ ಅಗತ್ಯ ವಸ್ತುಗಳ ಬೆಲೆ ಭಾರೀ ಏರಿಕೆಯಾಗಿದೆ.

ಈ ಬೆಳವಣಿಗೆ ನಡುವೆ ಇದೀಗ ಖಾಸಗಿ ಬಸ್ ಟಿಕೆಟ್ ದರ ಏರಿಕೆ ಖಚಿತವಾಗಿದೆ. ಖಾಸಗಿ ಬಸ್ ಒಕ್ಕೂಟದಿಂದ ಇದೇ ವಾರದಲ್ಲಿ ಅಧಿಕೃತ ಘೋಷಣೆ ಹೊರಬೀಳಲಿದೆ.

ಏಪ್ರಿಲ್ 15ರಿಂದ ಜಾರಿ: ಟೂರ್ಸ್ ಅಂಡ್ ಟ್ರಾವೆಲ್ಸ್, ಕ್ಯಾಬ್ ಬಾಡಿಗೆ ದರಗಳು ಏರಿಕೆಯಾಗಿವೆ. ಇತ್ತ ಡೀಸೆಲ್ ಮೇಲೆ ಸೆಸ್ ಹೆಚ್ಚಳವಾಗಿದೆ. ಜೊತೆಗೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಹೀಗಾಗಿ ಖಾಸಗಿ ಬಸ್ ದರ ಏರಿಕೆಗೆ ಖಾಸಗಿ ಬಸ್ ಒಕ್ಕೂಟ ಮುಂದಾಗಿದೆ. ಇದೇ ತಿಂಗಳ 15ರ ಬಳಿಕ ಪರಿಷ್ಕೃತ ದರ ಜಾರಿಯಾಗಲಿದೆ.

ಶೇಕಡಾ 15ರಿಂದ 20 ರಷ್ಟು ಏರಿಕೆ: ಖಾಸಗಿ ಬಸ್ ಟಿಕೆಟ್ ಪ್ರಯಾಣದ ದರ ಶೇಕಡಾ 15 ರಿಂದ 20 ರಷ್ಟು ಏರಿಕೆಗೆ ಖಾಸಗಿ ಬಸ್ ಒಕ್ಕೂಟ ನಿರ್ಧರಿಸಿದೆ. ಈ ಕುರಿತು ಸಭೆ ನಡೆಸಿದೆ. ರಾಜ್ಯ ಸರ್ಕಾರಕ್ಕೆ ಬಸ್ ಒಕ್ಕೂಟ ಡೆಡ್‌ಲೈನ್ ಸಹ ನೀಡಿದೆ. ಇದೇ ವೇಳೆ ತಮ್ಮ ಹಲವು ಬೇಡಿಕೆಗಳನ್ನು ಮುಂದಿಟ್ಟಿದೆ. ಈ ಬೇಡಿಕೆ ಈಡೇರಿಕೆಗೆ ಒಪ್ಪದಿದ್ದರೆ ಬೆಲೆ ಏರಿಕೆ ಖಚಿತ ಎಂದಿದೆ.

ಏಪ್ರಿಲ್ 15ಕ್ಕೆ ಲಾರಿ ಮಾಲೀಕರ ಮುಷ್ಕರ: ಬೆಲೆ ಏರಿಕೆ ವಿರೋಧಿಸಿ ಎಪ್ರಿಲ್ 15ಕ್ಕೆ ಲಾರಿ ಮಾಲೀಕರು ಮುಷ್ಕರಕ್ಕೆ ಕರೆ ಕೊಟ್ಟಿದ್ದಾರೆ. ಸೇಲ್, ಟೋಲ್, ಫಿಟ್ನೆಸ್ ಸರ್ಟಿಫಿಕೇಟ್ ದರ ಹೆಚ್ಚಳ ವಿರೋಧಿಸಿ ಸೇರಿ ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಲಾರಿ ಮಾಲೀಕರು ಮುಷ್ಕರ ನಡೆಸಲಿದ್ದಾರೆ. ಈ ಮುಷ್ಕರಕ್ಕೆ ಇದೀಗ ಬಸ್ ಮಾಲೀಕರ ಒಕ್ಕೂಟ ಕೂಡ ಬೆಂಬಲ ಸೂಚಿಸಿದೆ. ಈ ಮೂಲಕ ಭಾರೀ ಪ್ರತಿಭಟನೆ ಕೈಗೊಳ್ಳಲು ಲಾರಿ ಹಾಗೂ ಬಸ್ ಮಾಲೀಕರ ಸಂಘ ಮುಂದಾಗಿದೆ.

ಮನೆಯಲ್ಲಿ 14 ಕೋಟಿ ಮೌಲ್ಯದ ನಕಲಿ ನೋಟು ಪತ್ತೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಗಾಂಧಿನಗರದ ಅರ್ಷದ್ ಖಾನ್ ಎಂಬಾತನ ಮನೆಯಲ್ಲಿ 500 ರೂ. ಮುಖಬೆಲೆಯ 14 ಕೋಟಿ ರೂ.ನಷ್ಟು ನಕಲಿ ನೋಟುಗಳು ಪತ್ತೆಯಾಗಿವೆ.

ಸ್ಥಳೀಯರೊಬ್ಬರು ನೀಡಿದ ಮಾಹಿತಿ ಮೇರೆಗೆ ದಾಂಡೇಲಿ ಪೊಲೀಸರು ಅರ್ಷದ್ ಖಾನ್ ಎಂಬಾತನ ಮನೆಗೆ ತೆರಳಿ ಪರಿಶೀಲನೆ ನಡೆಸಿ ವಶಕ್ಕೆ ಪಡೆದಿದ್ದಾರೆ. ಪೊಲೀಸರು ಪರಿಶೀಲನೆ ನಡೆಸಿದಾಗ ಭಾರತೀಯ ರಿಸರ್ವ್ ಬ್ಯಾಂಕ್ ಬರಹ ಇಲ್ಲದ, ಗವರ್ನರ್ ಸಹಿ ಇಲ್ಲದ ನೋಟುಗಳು ಪತ್ತೆಯಾಗಿವೆ. ಅಲ್ಲದೇ ನೋಟುಗಳ ಮೇಲೆ 'ಮೂವಿ ಶೂಟಿಂಗ್ ಪರ್ಪಸ್' ಎಂದೂ ಸಹ ಬರೆದಿರುವುದು ಬೆಳಕಿಗೆ ಬಂದಿದೆ.

ಇನ್ನೂ ನೋಟಿನ ಸಂಖ್ಯೆಯಲ್ಲಿ ಸೊನ್ನೆ ಅಷ್ಟೇ ನಮೂದು ಮಾಡಲಾಗಿದ್ದು ಯಾವ ಉದ್ದೇಶಕ್ಕಾಗಿ ಈ ನೋಟುಗಳನ್ನು ಬಳಸಲಾಗುತ್ತಿದೆ ಅನ್ನೋದರ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಆದರೇ ಮನೆಯ ಮಾಲೀಕ ಅರ್ಷದ್ ಖಾನ್ ಕಳೆದ ಒಂದು ತಿಂಗಳಿಂದ ಘಟನಾ ಸ್ಥಳಕ್ಕೆ ಆಗಮಿಸಿಯೇ ಇಲ್ಲ ಆದ್ದರಿಂದ ಇಷ್ಟೊಂದು ನೋಟುಗಳು ಯಾವುದಕ್ಕೆ ಬಳಕೆ ಮಾಡಲು ಸಂಗ್ರಹಿಸಲಾಗಿದೆ ಎಂಬುದು ನಿಗೂಢವಾಗಿದೆ. ಪೊಲೀಸರ ಪ್ರಾಥಮಿಕ ತನಿಖೆ ಪ್ರಕಾರ, ಈ ನೋಟುಗಳನ್ನು ಸಿನಿಮಾ ಚಿತ್ರೀಕರಣಕ್ಕೆ ತರಿಸಲಾಗಿದೆ ಎನ್ನಲಾಗುತಿದೆ. ಮುಂದಿನ ತನಿಖೆ ನಂತರ ಹೆಚ್ಚಿನ ವಿವರ ಹೊರಬರಲಿದೆ. ಸದ್ಯ ಘಟನೆ ಸಂಬಂಧ ದಾಂಡೇಲಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂಜಾಡುತ್ತಿದ್ದವರು ವಶ

ಮೈಸೂರು, ಏ.8– ತೋಟದಲ್ಲಿ ಜೂಜಾಡುತ್ತಿದ್ದ ಐವರನ್ನು ಮೈಸೂರಿನ ಇಲವಾಲ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಇಲವಾಲ–ಸಾಗರಕಟ್ಟೆ ಮುಖ್ಯರಸ್ತೆ, ಗುಂಗ್ರಾಲ್‌ಛತ್ರ ಗ್ರಾಮದ ಬಳಿಯ ತೋಟವೊಂದರಲ್ಲಿ ಜೂಜಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಇಲವಾಲ ಠಾಣೆ ಸಬ್‌ಇನ್ಸ್‌ಪೆಕ್ಟರ್ ಬಿ.ಕೆ.ಮಹೇಶ್‌ಕುಮಾರ್, ಸಿಬ್ಬಂದಿ ಮಹೇಶ್, ಅಭಿಷೇಕ್, ಸಾಗರ್, ಹರೀಶ್ ಅವರೊಂದಿಗೆ ದಾಳಿ ನಡೆಸಿ, ಜೂಜಾಡುತ್ತಿದ್ದ ಐವರನ್ನು ವಶಕ್ಕೆ ಪಡೆದು, ಪಣಕ್ಕಿಟ್ಟಿದ್ದ 27,140 ರೂ. ಹಣವನ್ನು ಜಪ್ತಿ ಮಾಡಿದ್ದಾರೆ. ಈ ಸಂಬಂಧ ಇಲವಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಡಾವಣೆ ಅಭಿವೃದ್ಧಿಪಡಿಸದೇ ನಿವೇಶನಾಕಾಂಕ್ಷಿಗಳಿಗೆ ಮುಡಾ ವಂಚನೆ

ಮಾಜಿ ಮೇಯರ್ ಸಂದೇಶ್‌ಸ್ವಾಮಿ ಆರೋಪ



ಮೈಸೂರು,ಏ.8(ಪಿಎಂ)– ಕಳೆದ ಎರಡು ದಶಕಗಳಲ್ಲಿ ಒಂದೇ ಒಂದು ಬಡಾವಣೆ ಸಹ ಅಭಿವೃದ್ಧಿಪಡಿಸದೆ ನಿವೇಶನಾಕಾಂಕ್ಷಿಗಳಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವಂಚನೆ ಮಾಡುತ್ತಿದೆ ಎಂದು ದೂರಿರುವ ಮಾಜಿ ಮೇಯರ್ ಸಂದೇಶ್‌ಸ್ವಾಮಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಶಯದಂತೆ ಮುಡಾ ಸೇವಾ ಸಂಸ್ಥೆಯಾಗಿರಬೇಕೇ ಹೊರತು, ವಾಣಿಜ್ಯ ಕೇಂದ್ರವಾಗಬಾರದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಮುಡಾ ಮಂಡಿಸಿರುವ 2025–26ನೇ ಸಾಲಿನ ಆಯವ್ಯಯ ಕುರಿತು ಪ್ರಕಟಣೆ ಮೂಲಕ ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, ಸ್ವಂತ ಸೂರು ಇಲ್ಲದವರಿಗೆ ಬಡಾವಣೆಗಳನ್ನು ರಚಿಸಿ ಕೈಗೆಟಕುವ ದರದಲ್ಲಿ ನಿವೇಶನಗಳನ್ನು ಕಲ್ಪಿಸುವ ಮೂಲ ಉದ್ದೇಶದಿಂದ ಅಂದು ಸಿಐಟಿಬಿ ಸ್ಥಾಪಿಸಲಾಗಿತ್ತು. ಅಲ್ಲದೆ, ಮೂಲ ಸೌಕರ್ಯದೊಂದಿಗೆ ನಗರವನ್ನು ಯೋಜನಾಬದ್ಧವಾಗಿ ನಿರ್ಮಿಸುವುದಾಗಿತ್ತು. ಆದರೆ ಈ ಆಶಯಗಳನ್ನು ಬದಿಗೊತ್ತಿ ನಿಯಮಬಾಹಿರ ಕಾರ್ಯಗಳನ್ನು ಮಾಡುವಲ್ಲಿ ತೊಡಗಿಸಿಕೊಂಡಿದ್ದು, ಈ ಬಗ್ಗೆ ನಗರಾಭಿವೃದ್ಧಿ ಇಲಾಖೆ ಗಮನಹರಿಸಬೇಕಿದೆ.

ಮುಡಾ ಕಳೆದ ಎರಡು ದಶಕದಲ್ಲಿ ಬಡಾವಣೆ ರಚಿಸಲು ಒಂದು ಎಕರೆ ಜಮೀನು ಸಹ ಸ್ವಾಧೀನಕ್ಕೆ ಪಡೆದಿಲ್ಲ. 50:50 ಅನುಪಾತದಲ್ಲಿ ರೈತರ ಜಮೀನು ಪಡೆದು ಬಡಾವಣೆ ನಿರ್ಮಿಸುವ ನಿಯಮ ಜಾರಿಗೊಳಿಸಿದರೂ ಈವರೆಗೆ ಕಾರ್ಯಗತವಾಗಿಲ್ಲ. ಬದಲಾಗಿ ಹಳೇ ಪ್ರಕರಣ ಗಳನ್ನು ಮುಂದಿಟ್ಟುಕೊಂಡು 50:50 ಅನುಪಾತದಡಿ ತನ್ನ ಸ್ವಾಧೀನದಲ್ಲಿದ್ದ ನಿವೇಶನಗಳನ್ನು ಹಂಚಿಕೆ ಮಾಡಿ ನಿಜವಾದ ಫಲಾನುಭವಿಗಳಿಗೆ ವಂಚಿಸಿದೆ. ಅಲ್ಲದೆ, ಇಂದು ಬಹುಕೋಟಿ ಹಗರಣಕ್ಕೆ ಮುಡಾ ಸಿಲುಕಿರುವುದು ಮೈಸೂರಿನ ಕಳಂಕಕ್ಕೂ ಕಾರಣವಾಗಿದೆ.

ಅನೇಕ ವರ್ಷಗಳಿಂದ ಮುಡಾ ನೂರಾರು ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡುವಲ್ಲಿ ಅತೀವ ಆಸಕ್ತಿ ವಹಿಸಿ ರಿಯಲ್ ಎಸ್ಟೇಟ್ ಏಜೆಂಟ್‌ನಂತೆ ವರ್ತಿಸುತ್ತಿದೆ. ಇನ್ನೂ ಖಾಸಗಿ ಬಡಾವಣೆಗಳಿಗೆ ನೀರು, ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಅಭಿವೃದ್ಧಿದಾರರಿಂದ ಕೋಟ್ಯಾಂತರ ರೂ. ಶುಲ್ಕ ವಸೂಲಿ ಮಾಡಿದೆ. ಅದಾಗ್ಯೂ ಹಲವು ಖಾಸಗಿ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸದ ಕಾರಣ ನಿವೇಶನದಾರರು ಮನೆ ನಿರ್ಮಿಸಿ ವಾಸಕ್ಕೆ ಹೋಗಲಾರದೆ ಅತಂತ್ರ ಸ್ಥಿತಿಗೆ ಸಿಲುಕಿದ್ದಾರೆ. ಮುಡಾ ರಚಿಸಿರುವ ಕೆಲ ಬಡಾವಣೆಗಳಿಗೆ ಇನ್ನೂ ಮೂಲಸೌಕರ್ಯ ಕಲ್ಪಿಸಿಲ್ಲ.

ವಲಸಿಗರ ವಸತಿ ಉದ್ದೇಶಕ್ಕೆ ನಗರದ ಹೊರವಲಯದಲ್ಲಿ ಉಪನಗರ ನಿರ್ಮಾಣಕ್ಕೂ ಮುಂದಾಗಲಿಲ್ಲ. ಗುಂಪುಮನೆ ನಿರ್ಮಿಸುವುದಾಗಿ ಹೇಳಿದ್ದ ಮುಡಾ, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಈ ಯೋಜನೆಗೆ ಮಹತ್ವ ನೀಡಿಲ್ಲ. ವಾಣಿಜ್ಯ ಕಟ್ಟಡಗಳ ನಿರ್ಮಾಣದ ಪ್ರಸ್ತಾವನೆ ಗಮನಿಸಿದರೆ, ಆದಾಯಕ್ಕಾಗಿ ವಾಣಿಜ್ಯ ಕಟ್ಟಡಗಳ ನಿರ್ಮಾಣಕ್ಕೆ ಆಸಕ್ತಿ ವಹಿಸಿದಂತಿದೆ. ಸೇವಾ ಸಂಸ್ಥೆಯಾಗಿ ಕೆಲಸ ಮಾಡಬೇಕಾಗಿದ್ದ ಮುಡಾ ವ್ಯವಹಾರ ಕೇಂದ್ರವಾಗುತ್ತಿದ್ದು, ಅದನ್ನೇ ಅಧಿಕೃತಗೊಳಿಸಿಕೊಂಡರೆ ಒಳಿತೇನೋ.

1992ರಿಂದ ನಿವೇಶನ ಬಯಸಿ 80 ಸಾವಿರಕ್ಕೂ ಅಧಿಕ ಮಂದಿ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಇನ್ನಾದರೂ ಮುಡಾ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿಗಳು ಮತ್ತು ಮುಡಾ ಆಯುಕ್ತರು ಜನ ಸಾಮಾನ್ಯರ ಸೇವೆಗೆ ಯೋಜನೆಗಳನ್ನು ರೂಪಿಸಿ, ಪ್ರಾಧಿಕಾರ ಅಭಿವೃದ್ಧಿಗೂ ಒತ್ತು ನೀಡಬೇಕು ಎಂದು ಸಂದೇಶ್‌ಸ್ವಾಮಿ ಆಗ್ರಹಿಸಿದ್ದಾರೆ.

ಪೋಷಕರೊಂದಿಗೆ ಸಂಭ್ರಮ



ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 594 ಅಂಕ ಗಳಿಸಿದ ಎಸ್‌ವಿಐಸಿ ಜ್ಞಾನೋದಯ ಪಿಯು ಕಾಲೇಜಿನ ವಿದ್ಯಾರ್ಥಿನಿ ಅನಘ ಎಸ್.ಕಾರ್ನಿಸ್, ಪೋಷಕರೊಂದಿಗೆ ಸಂಭ್ರಮಿಸಿದರು.

ಹಾಜರಾತಿ ಕೊರತೆಯಿಂದ ಪರೀಕ್ಷೆ 1ಕ್ಕೆ ಗೈರಾದವರು ಖಾಸಗಿ ಅಭ್ಯರ್ಥಿಯಾಗಲು ಅವಕಾಶ



ಬೆಂಗಳೂರು, ಏ.8– ಹಾಜರಾತಿ ಕೊರತೆಯಿಂದ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗದಿರುವ ವಿದ್ಯಾರ್ಥಿಗಳು ಪರೀಕ್ಷೆ–2ಕ್ಕೆ ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಈ ಸಂಬಂಧ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಸುತ್ತೋಲೆ ಹೊರಡಿಸಿದ್ದು, ಹಾಜರಾತಿ ಕೊರತೆಯ ಕಾರಣದಿಂದ 2025ರ ದ್ವಿತೀಯ ಪಿಯುಸಿ ಪರೀಕ್ಷೆ–1ಕ್ಕೆ ಹಾಜರಾಗದಿರುವ 31–03–2025ಕ್ಕೆ 17 ವರ್ಷ ತುಂಬಿದ ವಿದ್ಯಾರ್ಥಿಗಳು ಪರೀಕ್ಷೆ–2ರಲ್ಲಿ ನೇರ ಅಭ್ಯರ್ಥಿಯಾಗಿ ಹಾಜರಾಗಬಹುದು.

ಇದಕ್ಕಾಗಿ ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಆಯ್ದ ಸಂಯೋಜನೆಗಳೊಂದಿಗೆ ತಾವು ಅಭ್ಯಸಿಸಿದ ಕಾಲೇಜಿನಲ್ಲಿಯೇ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಬಹುದು. ಈ ವೇಳೆ ಪರಿಶಿಷ್ಟ ಜಾತಿ/ಪಂಗಡ/ಪ್ರವರ್ಗ–1ರ ವಿದ್ಯಾರ್ಥಿಗಳು 1560 ರೂ. ಹಾಗೂ ಇತರ ಅಭ್ಯರ್ಥಿಗಳು 1960 ರೂ. ಶುಲ್ಕ ಪಾವತಿಸಬೇಕಿದೆ ಎಂದು ತಿಳಿಸಲಾಗಿದೆ.

ದ್ವಿತೀಯ ಫಲಿತಾಂಶದ ಹಿಂದಿನ ದಿನ ವಿದ್ಯಾರ್ಥಿನಿ ನಾಪತ್ತೆ

ಮೈಸೂರು, ಏ.8(ಎಸ್‌ಬಿಡಿ)– ದ್ವಿತೀಯ ಪಿಯು ಫಲಿತಾಂಶದ ಹಿಂದಿನ ದಿನ ವಿದ್ಯಾರ್ಥಿನಿಯೊಬ್ಬಳು ನಾಪತ್ತೆಯಾಗಿರುವ ಬಗ್ಗೆ ನಗರದ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದ್ವಿತೀಯ ಪಿಯುಸಿ ಪರೀಕ್ಷೆ ಮುಗಿಸಿ ಮನೆಯಲ್ಲಿದ್ದ ಆಕೆ, ಸೋಮವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಅಂಗಡಿಗೆ ಹೋಗಿ ಬರುವುದಾಗಿ ಮನೆಯವರಿಗೆ ತಿಳಿಸಿ ಹೋದವಳು ವಾಪಸ್ಸಾಗಿಲ್ಲ. ಮೊಬೈಲ್ ಸ್ವಿಚ್ ಆಫ್ ಆಗಿದೆ ಎಂದು ಆಕೆಯ ತಂದೆ ದೂರಿನಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಬುಧವಾರ 9 ಏಪ್ರಿಲ್ 2025

ಯುವಕರಿಗೆ ದೇಶದ ಕೃಷಿ ಪದ್ಧತಿ, ಸಂಸ್ಕೃತಿ ಅರಿವು ಅಗತ್ಯ

ಜಾನಪದ ಸಂಭ್ರಮ ಕಾರ್ಯಕ್ರಮದಲ್ಲಿ ಶಾಸಕ ದರ್ಶನ್



ಜಾನಪದ ಸಂಭ್ರಮ ಕಾರ್ಯಕ್ರಮವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು, ಏ.8– ಕಾಲೇಜಿನಲ್ಲಿ ಹಬ್ಬದ ವಾತಾವರಣವಿದೆ. ನಿಜಕ್ಕೂ ಇಂತಹ ಕಾರ್ಯಕ್ರಮ ನೋಡಿ ಖುಷಿಯಾಗುತ್ತಿದೆ. ನಾನು ಕಲಿಯುತ್ತಿದ್ದ ವೇಳೆ ಇಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೆ. ಆದರೆ ಸಂಭ್ರಮಾಚರಣೆ ಕಂಡಿರಲಿಲ್ಲ. ಕಾಲೇಜಿನ ವಿದ್ಯಾರ್ಥಿಗಳು ಸಡಗರ ಸಂಭ್ರಮದಿಂದ ಜಾನಪದ ಸಂಭ್ರಮ ಆಚರಿಸುತ್ತಿರುವುದು ಮಾದರಿಯಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಮಂಗಳವಾರ ನಡೆದ ಜಾನಪದ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿಕರ ಕುಟುಂಬದಿಂದ ಬಂದ ನಮ್ಮ ತಂದೆ ದಿ.ಧ್ರುವನಾರಾಯಣ್ ಕೃಷಿ ಪದವಿ ಪಡೆದವರು. ನಾನು ಕೂಡ ಶಾಸಕನಾಗಿ ಹಳ್ಳಿಗಳ ನಿರಂತರ ಸಂಪರ್ಕ ಹೊಂದಿದ್ದೇನೆ. ವಾರದಲ್ಲಿ 2 ದಿನ ಕೃಷಿ ಚಟುವಟಿಕೆಯಲ್ಲಿ ತೊಡಗುತ್ತೇನೆ. ಜಾನಪದ ಸಂಭ್ರಮದಲ್ಲಿ ಎಲ್ಲಾ ರೀತಿಯ ಕೃಷಿ ಸಲಕರಣೆಗಳನ್ನು ಪ್ರದರ್ಶನ ಮಾಡಿದ್ದೀರಿ. ನಮ್ಮ ಪೂರ್ವಜರು ಬಳಸುತ್ತಿದ್ದ ಕೃಷಿ ಉಪಕರಣಗಳನ್ನು ಕಂಡು ಸಂತೋಷವಾಯಿತು. ಕೃಷಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ರಾಜ್ಯದೆಲ್ಲೆಡೆ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಆಯೋಜಿಸಬೇಕು. ಆ ಮೂಲಕ ದೇಶದ ಕೃಷಿ ಪದ್ಧತಿ, ಸಂಸ್ಕೃತಿ ಬಗ್ಗೆ ಇಂದಿನ ಯುವಕ ಯುವತಿಯರಿಗೆ ಅರಿವು ಮೂಡಿಸುವ ಕೆಲಸವಾಗಬೇಕಿದೆ. ಕೃಷಿ ಸಂಸ್ಕೃತಿ ನಮ್ಮ ಜಾನಪದ ಸಂಸ್ಕೃತಿಯ ಒಂದು ಭಾಗವಾಗಿದೆ. ನಮ್ಮ ಜಾನಪದ ಸಂಸ್ಕೃತಿ, ಕಲಾ ಸಂಸ್ಕೃತಿಯನ್ನು ಉಳಿಸುವ ಕೆಲಸವಾಗಬೇಕು. ಕಾಲೇಜಿನ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಒಂದು ಕೋಟಿ ಅನುದಾನ ತಂದು ಶೌಚಾಲಯ ನಿರ್ಮಿಸಲಾಗುವುದು. ಅಲ್ಲದೇ ಕಾಲೇಜಿನ ಆಡಿಟೋರಿಯಂಗೆ 3 ಕೋಟಿ ರೂ. ಅಂದಾಜು ವೆಚ್ಚ ತಯಾರು ಮಾಡಲಾಗಿದೆ. ಕಾಲೇಜಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಿ ಮಾದರಿ ಕಾಲೇಜು ಮಾಡಲು ಪ್ರಯತ್ನಿಸುತ್ತೇನೆ ಎಂದರು.

ಇದಕ್ಕೂ ಮುನ್ನ ನಗರದ ದೇವಿರಮ್ಮನಹಳ್ಳಿ ವೃತ್ತದಿಂದ ಕಾಲೇಜಿನವರೆಗೆ ಎತ್ತಿನಗಾಡಿ, ಕೃಷಿ ಸಲಕರಣೆಗಳ ಜೊತೆಗೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ನಡೆಸಿದ ಮೆರವಣಿಗೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಶೋಭಾ, ಜಂಟಿ ನಿರ್ದೇಶಕ ಚಂದ್ರಶೇಖರ, ಸಾಹಿತಿ ಡಾ.ಭೈರಮಂಗಲ ರಾಮೇಗೌಡ, ಉದ್ಯಮಿ ವೃಷಬೇಂದ್ರಸ್ವಾಮಿ, ಯಶವಂತ್, ಪ್ರಾಂಶುಪಾಲರಾದ ಕೆಂಪೇಗೌಡ, ಪ್ರಾಧ್ಯಾಪಕ ಡಾ.ಜಯಶಂಕರ, ಹರೀಶ್, ಡಾ.ಕೆಂಪಮ್ಮ, ಮಹೇಶ್, ನಗರಸಭಾ ಸದಸ್ಯ ಎಸ್.ಪಿ.ಮಹೇಶ್, ಮುಖಂಡರಾದ ನಾಗರಾಜಯ್ಯ, ಬಸವಣ್ಣ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್, ಸೇರಿದಂತೆ ಕಾಲೇಜಿನ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಆಂತರಿಕ ಒಪ್ಪಂದ: ತಿ.ನರಸೀಪುರ ಪುರಸಭಾಧ್ಯಕ್ಷೆ ರಾಜೀನಾಮೆ



ಪುರಸಭಾಧ್ಯಕ್ಷೆ ವಸಂತ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ತಿ.ನರಸೀಪುರ, ಏ.8– ಆಂತರಿಕ ಒಪ್ಪಂದದಂತೆ ಪುರಸಭಾಧ್ಯಕ್ಷೆ ವಸಂತ ಬಿ.ಶ್ರೀಕಂಠ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕಾಂಗ್ರೆಸ್ ವರಿಷ್ಠರ ಆದೇಶ ಪಾಲನೆ ಹಿನ್ನೆಲೆಯಲ್ಲಿ ಉಪವಿಭಾಗಾಧಿಕಾರಿ ರಕ್ಷಿತ್ ಅವರನ್ನು ಭೇಟಿ ಮಾಡಿದ ಪುರಸಭಾಧ್ಯಕ್ಷೆ ವಸಂತ ಶ್ರೀಕಂಠ ತಮ್ಮ 6 ತಿಂಗಳ ಅಧಿಕಾರಾವಧಿ ಪೂರೈಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಕಳೆದ 15 ದಿನಗಳಿಂದ ರಾಜೀನಾಮೆ ಪ್ರಹಸನ ಸುದ್ದಿಯಲ್ಲಿತ್ತಾದರೂ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸದಂತೆ ಕೆಲವು ಸದಸ್ಯರಿಂದ ಒತ್ತಡ ಬಂದಿತ್ತೆನ್ನಲಾಗಿದೆ. ಆದರೆ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರಿಗೆ ಕೊಟ್ಟ ಮಾತು ಉಳಿಸಿಕೊಳ್ಳಲು ರಾಜೀನಾಮೆ ನೀಡಿದ್ದಾರೆ ಎನ್ನಲಾಗಿದೆ.

ಪುರಸಭೆ ಅಧಿಕಾರಾವಧಿ ಇನ್ನು 6 ತಿಂಗಳಿದ್ದು ಮತ್ತೊಬ್ಬರಿಗೆ ಅಧ್ಯಕ್ಷ ಸ್ಥಾನ ಸಿಗಲಿದೆ. ಈ ಹಿಂದೆ ಆದ ಒಪ್ಪಂದದಂತೆ 10ನೇ ವಾರ್ಡ್‌ನ ಮಹದೇವಮ್ಮ ಅವರಿಗೆ ಅಧ್ಯಕ್ಷ ಸ್ಥಾನ ಒಲಿದು ಬರುವ ಸಾಧ್ಯತೆ ಇದ್ದು, ಬಹುತೇಕ ಅವರೇ ಅಧ್ಯಕ್ಷರಾಗುವುದು ಖಚಿತವಾಗಿದೆ.

ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ವರಿಷ್ಠರಿಂದ ಒತ್ತಡ ಬಂದಿದ್ದರೂ ರಾಜೇಶ್ವರಿ ರಾಘವೇಂದ್ರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸದೇ ತಟಸ್ಥರಾಗಿರುವುದು ಕುತೂಹಲ ಕೆರಳಿಸಿದೆ. ಸಂಸದ ಸುನೀಲ್ ಬೋಸ್ ನೀಡುವ ಆದೇಶದ ಮೇಲೆ ರಾಜೇಶ್ವರಿ ರಾಜೀನಾಮೆ ಭವಿಷ್ಯ ನಿಂತಿದ್ದು, ಸುನೀಲ್ ಬೋಸ್‌ರತ್ತ ಎಲ್ಲರ ಚಿತ್ತ ಹರಿದಿದೆ. ಒಂದು ವೇಳೆ ರಾಜೇಶ್ವರಿ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದೆ ಆದಲ್ಲಿ ಆ ಸ್ಥಾನಕ್ಕೆ ರೂಪಾ ಕರಿಯಪ್ಪ ಆಯ್ಕೆಯಾಗುವ ಸಂಭವ ಹೆಚ್ಚಿದೆ.

ಡಿಟಿಎಂಎನ್ ಪಿಯು ಕಾಲೇಜಿಗೆ 98ರಷ್ಟು ಫಲಿತಾಂಶ



ಬಿ.ಎಸ್.ಸೌಂದರ್ಯ



ಬಿ.ಎಸ್.ಕೃತಿಕ

ಬೆಟ್ಟದಪುರ, ಏ.8– ಗ್ರಾಮದ ಡಿಟಿಎಂಎನ್ ಪದವಿ ಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.98ರಷ್ಟು ಫಲಿತಾಂಶ ಬಂದಿದೆ.

ಕಾಲೇಜಿನ 117 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಈ ಪೈಕಿ 45 ಮಂದಿ ಅತ್ಯುನ್ನತ, 62 ಮಂದಿ ಪ್ರಥಮ, 7 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಬಿ.ಎಸ್.ಸೌಂದರ್ಯ 589 ಹಾಗೂ ವಿಜ್ಞಾನ ವಿಭಾಗದಲ್ಲಿ ಬಿ.ಎಸ್.ಕೃತಿಕ 574 ಅಂಕ ಪಡೆಯುವ ಮೂಲಕ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳೆರಡರಲ್ಲೂ ತಾಲೂಕಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಅರ್ಚನ 580, ನಯನ 575 ಅಂಕ ಪಡೆದರೇ, ವಿಜ್ಞಾನ ವಿಭಾಗದಲ್ಲಿ ದೀಪ್ತಿ 565 ಮತ್ತು ರೀತು 563 ಅಂಕ ಪಡೆದು ಕಾಲೇಜಿಗೆ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ. ಕಾಲೇಜಿಗೆ ಉತ್ತಮ ಫಲಿತಾಂಶ ತಂದು ಕೊಟ್ಟ ವಿದ್ಯಾರ್ಥಿಗಳಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಎಲ್ಲಾ ಸಿಬ್ಬಂದಿ ವರ್ಗ ಅಭಿನಂದನೆ ಸಲ್ಲಿಸಿದ್ದಾರೆ.

ಎಂಎಂಕೆ ಸ್ವತಂತ್ರ ಪಿಯು ಕಾಲೇಜಿಗೆ 93.10ರಷ್ಟು ಫಲಿತಾಂಶ



ಕುಷಿತ ಕೆ.ಎಸ್



ಯುಕ್ತಿ ಯು.ಆರ್



ಪವಿತ್ರ



ಅನನ್ಯ

ಸರಗೂರು, ಏ.8– ಪಟ್ಟಣ ಸಮೀಪದ ತುಂಬಸೋಗೆ ಎಂಎಂಕೆ ಸ್ವತಂತ್ರ ಪದವಿ ಪೂರ್ವ ಕಾಲೇಜಿಗೆ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಶೇ.93.10ರಷ್ಟು ಫಲಿತಾಂಶ ಬಂದಿದೆ.

ಕಾಲೇಜು ಸತತ ನಾಲ್ಕನೇ ಬಾರಿಗೆ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದೆ. ಪರೀಕ್ಷೆ ತೆಗೆದುಕೊಂಡಿದ್ದ 146 ವಿದ್ಯಾರ್ಥಿಗಳ ಪೈಕಿ 136 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ 52 ವಿದ್ಯಾರ್ಥಿಗಳ ಪೈಕಿ 47 ಮಂದಿ ಉತ್ತೀರ್ಣರಾಗಿದ್ದಾರೆ. ಕುಷಿತ ಕೆ.ಎಸ್ 580, ಯುಕ್ತಿ ಯು.ಆರ್ 573, ಪವಿತ್ರ 572, ಅನನ್ಯ ಬಿ.ಎಂ 571 ಗಳಿಸಿದ್ದಾರೆ. ಅಲ್ಲದೇ 11 ಅತ್ಯುನ್ನತ, 33 ಮಂದಿ ಉನ್ನತ ಶ್ರೇಣಿ, ಮೂವರು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆ ಬರೆದಿದ್ದ 31 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ 31 ವಿದ್ಯಾರ್ಥಿಗಳ ಪೈಕಿ 30 ವಿದ್ಯಾರ್ಥಿಗಳು ಪಾಸಾಗಿದ್ದು, ಐವರು ಅತ್ಯುನ್ನತ, 17 ಉನ್ನತ, 8 ಮಂದಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಅಭಿನಂದನೆ ಸಲ್ಲಿಸಿದ್ದಾರೆ.

ಏ.26, ಅದ್ಧೂರಿ ಅಂಬೇಡ್ಕರ್ ಜಯಂತಿ ಆಚರಣೆ

ಪೂರ್ವಭಾವಿ ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಮಾಹಿತಿ



ಪೂರ್ವಭಾವಿ ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿದರು.

ಹುಣಸೂರು, ಏ.8– ಮುಂಬರುವ ಏ.26ರಂದು ನಗರದಲ್ಲಿ ಅಂಬೇಡ್ಕರ್ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ತಾಲೂಕು ಆಡಳಿತ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನಡೆದ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂಬೇಡ್ಕರ್ ಜಯಂತಿ ಸಂಬಂಧ ಎಲ್ಲಾ ಜನಾಂಗದ ಮುಖಂಡರು ಸಲಹೆ ಸೂಚನೆ ನೀಡಿದ್ದು, ಈ ಬಾರಿ ಮೈಸೂರು ದಸರಾ ಮಾದರಿ ನಗರದಲ್ಲಿ ವಿದ್ಯುತ್ ದೀಪಾಲಂಕಾರ, ಸ್ತಬ್ಧ ಚಿತ್ರ ಮೆರವಣಿಗೆ, ಅಂಬೇಡ್ಕರ್ ಭಾವಚಿತ್ರವನ್ನು ಆನೆ ಮೇಲೆ ಮೆರವಣಿಗೆ, ಎಲ್ಲಾ ಸರ್ಕಾರಿ ಕಚೇರಿಗಳಿಗೂ ದೀಪಾಲಂಕಾರ, ಕಲಾ ತಂಡಗಳ ಮೆರವಣಿಗೆ ಆಯೋಜಿಸುವಂತೆ ಬೇಡಿಕೆಗಳನ್ನು ಇಟ್ಟಿದ್ದೀರಾ. ಸಾಧ್ಯವಾದಷ್ಟು ಎಲ್ಲಾ ಬೇಡಿಕೆಗಳನ್ನು ಈಡೇರಿಸಲಾಗುವುದು. ಆನೆ ಮೇಲೆ ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ ಮಾಡಲು ಪ್ರಯತ್ನಿಸಲಾಗುವುದು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸುವ ಮೂಲಕ ಅವರ ತತ್ವಾದರ್ಶಗಳನ್ನು ತಿಳಿಸಬೇಕು. ಆದ್ದರಿಂದ ಎಲ್ಲಾ ಸಮುದಾಯದವರು ದ್ವೇಷ, ಅಸೂಯೆ ಬಿಟ್ಟು ಒಂದಾಗಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು. ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು. ನಗರಸಭೆ ಅಧಿಕಾರಿಗಳು ಸ್ವಚ್ಛತೆ ಕಾಪಾಡಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಅಶೋಕ್ ಮಾತನಾಡಿ, ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಬೇಕು. ಅಲ್ಲದೇ ಸರ್ಕಾರಿ ಕಚೇರಿಗಳಿಗೆ ದೀಪಾಲಂಕಾರ ಮಾಡುವುದರೊಂದಿಗೆ ಕಾರ್ಯಕ್ರಮಕ್ಕೆ ಬರುವ ಎಲ್ಲರಿಗೂ ಊಟದ ವ್ಯವಸ್ಥೆ, ಉಪನ್ಯಾಸ ಕಾರ್ಯಕ್ರಮ ಆಯೋಜಿಸುವ ಬಗ್ಗೆ ಮಾಹಿತಿ ನೀಡಿದರು. ಈ ವೇಳೆ ಮುಖಂಡ ಆನಂದಸ್ವಾಮಿ, ನಗರಸಭೆ ಆಯುಕ್ತೆ ಮಾನಸ, ತಾಲೂಕು ಕುರುಬ ಸಂಘದ ಅಧ್ಯಕ್ಷ ಕುನ್ನೇಗೌಡ, ರಮೇಶ್, ಉಪಾಧ್ಯಕ್ಷ ಎ.ಪಿ.ಶಂಕರ್, ತಹಸೀಲ್ದಾರ್ ಮಂಜುನಾಥ್, ಬಿಇಓ ಮಹದೇವ್, ಮುಖಂಡರಾದ ನಿಂಗರಾಜ ಮಲ್ಲಾಡಿ, ಬಸವಲಿಂಗಯ್ಯ, ವಕೀಲ ಪುಟ್ಟರಾಜು, ರಾಜು, ಸ್ವಾಮಿ, ಪುಟ್ಟಸ್ವಾಮಿ, ಕುಮಾರ್, ಶಿವಣ್ಣ, ರಾಮಕೃಷ್ಣ, ಪ್ರಕಾಶ್ ಇನ್ನಿತರರಿದ್ದರು.

ಯುವತಿ ಆತ್ಮಹತ್ಯೆ

ತಿ.ನರಸೀಪುರ, ಏ.8– ಹೊಟ್ಟೆ ನೋವು ತಾಳಲಾರದೇ ಯುವತಿಯೊಬ್ಬಳು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯ ಹೆಮ್ಮಿಗೆ ರಸ್ತೆಯಲ್ಲಿ ಸಂಭವಿಸಿದೆ.

ಪಟ್ಟಣದ ನಿವಾಸಿ ಹೆಮ್ಮಿಗೆ ರಸ್ತೆ ನಿವಾಸಿ ನಾಗರಾಜು ಎಂಬುವರ ಪುತ್ರಿ ನಂದಿನಿ(28) ಆತ್ಮಹತ್ಯೆ ಮಾಡಿಕೊಂಡವರು. ಎಂ.ಕಾಂ ವ್ಯಾಸಂಗ ಮಾಡಿದ್ದ ನಂದಿನಿಗೆ ಆಗಾಗ್ಗೆ ಹೊಟ್ಟೆ ನೋವು ಬರುತ್ತಿತ್ತು ಎನ್ನಲಾಗಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೂ ಹೊಟ್ಟೆ ನೋವು ಜಾಸ್ತಿಯಾದ ಕಾರಣ ತಾನು ಮಲಗುವ ಕೋಣೆಯಲ್ಲಿ ಫ್ಯಾನಿಗೆ ಸೀರೆಯಿಂದ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ.

ಈ ಸಂಬಂಧ ಮೃತಳ ತಂದೆ ನೀಡಿದ ದೂರಿನ ಮೇರೆಗೆ ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ದ್ವಿತೀಯ ಪಿಯುಸಿ: ಕೆ.ಉನ್ನತಿಗೆ 86.17%



ಬೈಲಕುಪ್ಪೆ, ಏ.8– ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಕೆ.ಉನ್ನತಿ ಶೇ.86.17ರಷ್ಟು ಅಂಕ ಪಡೆದಿದ್ದಾಳೆ. ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆ ಗ್ರಾಮದ ನಿವಾಸಿ ಕೇಶವಮೂರ್ತಿ ಮತ್ತು ಪೂರ್ಣಿಮಾ ದಂಪತಿ ದ್ವಿತೀಯ ಪುತ್ರಿ, ಮೈಸೂರಿನ ಚೈತನ್ಯ ಕಾಲೇಜಿನ ವಿದ್ಯಾರ್ಥಿನಿ ಕೆ.ಉನ್ನತಿ ಕನ್ನಡದಲ್ಲಿ 88, ಇಂಗ್ಲಿಷ್ 82, ಎಕನಾಮಿಕ್ಸ್ 80, ಬಿಸಿನೆಸ್ ಸ್ಟಡೀಸ್ 83, ಅಕೌಂಟೆನ್ಸಿ 98, ಮತ್ತು ಕಂಪ್ಯೂಟರ್ ಸೈನ್ಸ್‌ನಲ್ಲಿ 86 ಅಂಕಗಳನ್ನು ಪಡೆದಿದ್ದು, ಒಟ್ಟಾರೆ 600ಕ್ಕೆ 517 ಅಂಕಗಳು ಪಡೆದಿದ್ದಾಳೆ.

ಸಿಟಿಜನ್ಸ್ ಕಾಲೇಜಿಗೆ ಉತ್ತಮ ಫಲಿತಾಂಶ



ಜಿ.ಪಿ ದರ್ಶನ್



ಸಿಂಚನ ಎಸ್.ಭಟ್

ನಂಜನಗೂಡು, ಏ.8– ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಸಿಟಿಜನ್ಸ್ ಪದವಿ ಪೂರ್ವ ಕಾಲೇಜು ಉತ್ತಮ ಫಲಿತಾಂಶ ಪಡೆದಿದೆ.

ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ಜಿ.ಪಿ.ದರ್ಶನ್ 592 ಅಂಕ ಪಡೆದು ತಾಲೂಕಿಗೆ ಪ್ರಥಮ ಹಾಗೂ ರಾಜ್ಯಕ್ಕೆ 7ನೇ ಸ್ಥಾನ ಪಡೆದಿದ್ದಾನೆ. ವಿದ್ಯಾರ್ಥಿನಿ ಸಿಂಚನ ಎಸ್.ಭಟ್ 587 ಅಂಕ ಗಳಿಸಿ ರಾಜ್ಯಕ್ಕೆ 12 ಸ್ಥಾನ ಪಡೆದಿದ್ದಾಳೆ. ವಾಣಿಜ್ಯ ವಿಭಾಗದ ಜಿ.ದೀಕ್ಷಿತ್ 579 ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ 215 ವಿದ್ಯಾರ್ಥಿಗಳು ಅತ್ಯುನ್ನತ ಹಾಗೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಮೈಸೂರು, ಏ.8– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ತಿ.ನರಸೀಪುರದಲ್ಲಿ 10 ಅಂಗನವಾಡಿ ಕಾರ್ಯಕರ್ತೆ ಮತ್ತು 37 ಅಂಗನವಾಡಿ ಸಹಾಯಕಿಯರ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಆಕ್ಷೇಪಣೆ ಸಲ್ಲಿಸುವವರು ಖುದ್ದಾಗಿ ಅಥವಾ ಲಿಖಿತವಾಗಿ ಅಗತ್ಯ ದಾಖಲೆಗಳೊಂದಿಗೆ ಮೈಸೂರು ಶಿಶು ಅಭಿವೃದ್ಧಿ ಯೋಜನಾ ಕಚೇರಿ ವೇಳೆಯಲ್ಲಿ ಏ.19ರ ಸಂಜೆ 5.30ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ: 08227–297267, 7019403686 ಅನ್ನು ಸಂಪರ್ಕಿಸಬಹುದು ಎಂದು ತಿ.ನರಸೀಪುರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುರಸಭೆ ಅಭಿವೃದ್ಧಿಗೆ ಶ್ರಮಿಸಿ: ಡಾ.ಯತೀಂದ್ರ ಸಲಹೆ



ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಏ.8– ಇಲ್ಲಿನ ಪುರಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ 10 ಕೋಟಿ, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ 5 ಕೋಟಿ ರೂ. ಬಿಡುಗಡೆ ಮಾಡಿದ್ದು, ಎಲ್ಲಾ 23 ವಾರ್ಡ್‌ಗಳು ಸಮರ್ಪಕವಾಗಿ ಅಭಿವೃದ್ಧಿಯಾಗಬೇಕು. ಆ ನಿಟ್ಟಿನಲ್ಲಿ ಸದಸ್ಯರು ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಲಹೆ ನೀಡಿದರು.

ತಿ.ನರಸೀಪುರ ಪುರಸಭೆ ನೂತನ ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಸೇರಿದಂತೆ ಇತರರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ತಿ.ನರಸೀಪುರ ಕ್ಷೇತ್ರದ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಾಕಷ್ಟು ಅನುದಾನ ಬಿಡುಗಡೆ ಮಾಡಿದ್ದಾರೆ. ಅದನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಪುರಸಭೆಯಲ್ಲಿ ಈ ಬಾರಿ ಬಜೆಟ್ ಮಂಡಿಸಿರುವ ನೀವು ಯಾವ ಯಾವ ಯೋಜನೆಗೆ ಹಣ ಮೀಸಲಿಟ್ಟಿದ್ದೀರಾ ಅದನ್ನು ಸಮರ್ಪಕವಾಗಿ ಬಳಸಬೇಕು. ಎಲ್ಲಿಯೂ ಲೋಪವಾಗಬಾರದು ಎಂದು ಎಚ್ಚರಿಸಿದರು.

ಮುಂಬರುವ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೆಚ್ಚು ಅನುದಾನ ನೀಡಲಿದ್ದು, ಯಾವುದೇ ಅಭಿವೃದ್ಧಿ ಆಗಬೇಕಿದ್ದರೂ ನನ್ನ ಗಮನಕ್ಕೆ ತನ್ನಿ. ನಾನು ತ್ವರಿತಗತಿಯಲ್ಲಿ ಹಣ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು.

ಪುರಸಭೆಯ ಅಧಿಕಾರವಧಿ 6 ತಿಂಗಳು ಬಾಕಿ ಇರುವುದರಿಂದ ಯಾವುದೇ ಯೋಜನೆಗೆ ಮೀಸಲಿಟ್ಟಿರುವ ಹಣವನ್ನು ಬಳಸದೇ ಹಾಗೇ ಬಿಡಬೇಡಿ. ಟೆಂಡರ್ ಕರೆಯುವ ಮೂಲಕ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸಿ ಎಂದು ಸಲಹೆ ನೀಡಿದರು. ನೂತನ ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್, ಪುರಸಭೆ ಸ್ಥಾಯಿ ಸಮಿತಿ ಚುನಾವಣೆ ಪೂರ್ವದಿಂದಲೂ ನಾನು ಡಾ.ಯತೀಂದ್ರ ಅವರ ಸಲಹೆ ಸಹಕಾರದೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದೇನೆ. ಅಲ್ಲದೇ ಇದೀಗ ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತನಾಗಿದ್ದು, ಪಕ್ಷ ಕಟ್ಟುವ ಕಾರ್ಯದಲ್ಲಿ ತೊಡಗಿದ್ದೇನೆ. ಇದರಿಂದ ಸಂತಸಗೊಂಡ ಕಾಂಗ್ರೆಸ್ ವರಿಷ್ಠರು ನನ್ನನ್ನು ಸ್ಥಾಯಿ ಸಮಿತಿ ಅಧ್ಯಕ್ಷನ್ನಾಗಿ ನೇಮಕ ಮಾಡಿದ್ದಾರೆ. ಹೀಗಾಗಿ ಎಲ್ಲಾ ಪುರಸಭೆ ಸದಸ್ಯರ ಸಹಕಾರ ಪಡೆದು ಪಟ್ಟಣದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಈ ವೇಳೆ ಪುರಸಭಾ ಮಾಜಿ ಅಧ್ಯಕ್ಷರಾದ ಎನ್.ಸೋಮು, ಟಿ.ಎಂ.ನಂಜುಂಡಸ್ವಾಮಿ, ಎಸ್.ಮದನ್ ರಾಜ್, ಸದಸ್ಯ ಬಾದಾಮಿ ಮಂಜು, ಎಲ್.ಮಂಜುನಾಥ್, ತಾಪ ಮಾಜಿಂ ಉಪಾಧ್ಯಕ್ಷ ಬಿ.ಮರಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ಕರಿಯಪ್ಪ, ಮುಖಂಡರಾದ ಹೇಮಂತ್, ಶ್ರೀಕಂಠ, ಮಾದೇಶ್ ಇನ್ನಿತರರಿದ್ದರು.

ಸಚಿವರ ಬಗ್ಗೆ ಮಾತನಾಡುವಾಗ ನಾಲಿಗೆ ಹತೋಟಿಯಲ್ಲಿರಲಿ

ಸಂಸದ ಸುನೀಲ್ ಬೋಸ್ ಎಚ್ಚರಿಕೆ



ಸಂಸದ ಸುನೀಲ್ ಬೋಸ್ ಅಹವಾಲು ಆಲಿಸಿದರು.

ತಿ.ನರಸೀಪುರ, ಏ.8– ಒಳ ಮೀಸಲಾತಿ ಹೋರಾಟ ಸಮಿತಿ ಕ್ರಾಂತಿಕಾರಿ ರಥಯಾತ್ರೆಯಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿರುದ್ಧ ಅಸಭ್ಯ ಪದ ಬಳಸಿದ ಬಿ.ಆರ್.ಭಾಸ್ಕರ್ ಪ್ರಸಾದ್ ತಮ್ಮ ನಾಲಿಗೆ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು ಎಂದು ಸಂಸದ ಸುನೀಲ್ ಬೋಸ್ ಎಚ್ಚರಿಕೆ ನೀಡಿದರು.

ಕೊಳ್ಳೇಗಾಲಕ್ಕೆ ತೆರಳುವ ಮಾರ್ಗಮಧ್ಯೆ ಹಳೆ ಸಂತೇಮಾಳದ ಬಳಿ ಮಂಗಳವಾರ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಅಹವಾಲು ಆಲಿಸಿ ಮಾತನಾಡಿದ ಅವರು, ಪ್ರತಿಭಟನೆ, ಹೋರಾಟಗಳ ಮೂಲಕ ನ್ಯಾಯಯುತ ಹಕ್ಕುಗಳನ್ನು ಕೇಳಲು ಸಂವಿಧಾನದಲ್ಲಿ ಅವಕಾಶವಿದೆ. ಆದರೆ ಭಾಸ್ಕರ್ ಪ್ರಸಾದ್ ಯಾರೆಂಬುದು ಗೊತ್ತಿಲ್ಲ. ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರನ್ನು ಸಾರ್ವಜನಿಕವಾಗಿ ಅಸಭ್ಯವಾಗಿ ನಿಂದಿಸುವುದು ಸರಿಯಲ್ಲ. ಹೋರಾಟಗಾರನಿಗೆ ಆಡುವ ಭಾಷೆ ಮತ್ತು ಬಳಸುವ ಪದ ಬಳಕೆಯ ಬಗ್ಗೆ ಅರಿವಿರಬೇಕು ಎಂದರು.

45 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ಮಹದೇವಪ್ಪ ಅವರು ಎಲ್ಲಾ ವರ್ಗದ ಜನರನ್ನು ಸಮಾನತೆಯಿಂದ ಕಂಡಿದ್ದಾರೆ. ಅವರು ಎಡಗೈ ಸಮುದಾಯದ ವಿರೋಧಿಯಲ್ಲ. ಶಾಸಕ, ಸಚಿವರಾಗಿ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ತಾರತಮ್ಯವಿಲ್ಲದೆ ಸರ್ಕಾರದ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ. ಗೋವಿಂದ ಕಾರಜೋಳ ಸೇರಿದಂತೆ ಎ.ನಾರಾಯಣಸ್ವಾಮಿ ಹಾಗೂ ಹೆಚ್.ಆಂಜನೇಯ ಅವರಂತಹ ಸಮುದಾಯದವರ ಕೈಯಲ್ಲಿ ಸುದೀರ್ಘ ಅವಧಿಗೆ ಸಮಾಜ ಕಲ್ಯಾಣ ಇಲಾಖೆ ಇತ್ತು. ಜನರನ್ನು ದಿಕ್ಕು ತಪ್ಪಿಸಲು ಸಚಿವರನ್ನು ಹೋರಾಟದಲ್ಲಿ ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಸೋಸಲೆ ಪಿಎಸಿಎಸ್ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ ಮಾತನಾಡಿ, ರಾಜ್ಯದಲ್ಲಿ ಪ್ರಮುಖ ದಲಿತ ಸಮುದಾಯಗಳೆರಡು ಸಹೋದರರಂತೆ ಸಹಬಾಳ್ವೆ ನಡೆಸುತ್ತಿದ್ದು, ಭಾಸ್ಕರ್ ಪ್ರಸಾದ್ ಅಂತಹವರು ಒಳ ಮೀಸಲು ಹೋರಾಟದ ವಿಚಾರ ಮುಂದಿಟ್ಟುಕೊಂಡು ಸಮುದಾಯ ಹೊಡೆಯಲು ಮುಂದಾಗಿದ್ದಾರೆ. ಸಮಭಾವನೆಯ ದೃಷ್ಟಿ ಹೊಂದಿರುವ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ವಿಲನ್ ಎಂಬಂತೆ ಬಿಂಬಿಸುತ್ತಿದ್ದಾರೆ. ಪರಿಶಿಷ್ಟರ ಮಾದಿಗ ಸಮುದಾಯದ ಸಾಮಾಜಿಕ ಮತ್ತು ರಾಜಕೀಯ ಬೆಳವಣಿಗೆಗೆ ಯಾವುದೇ ಕೊಡುಗೆ ನೀಡದ ಭಾಸ್ಕರ್ ಪ್ರಸಾದ್ ಎಂಬಾತ ದಲಿತರ ಬಲವನ್ನೇ ಇಬ್ಭಾಗಿಸುವ ಕೃತ್ಯಕ್ಕೆ ಮುಂದಾಗಿದ್ದಾರೆ. ಅಂತವರ ವಿರುದ್ಧ ಪ್ರತಿ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಬ್ಲಾಕ್ ಕಾಂಗ್ರೆಸ್ ಮೀನುಗಾರರ ಘಟಕದ ಅಧ್ಯಕ್ಷ ಕೆ.ಎನ್.ಕುಮಾರ, ಭೂ ನ್ಯಾಯ ಮಂಡಳಿ ಸದಸ್ಯ ಕುಕ್ಕುರು ಗಣೇಶ್, ಮಾಜಿ ಸದಸ್ಯ ರಾಮಲಿಂಗಯ್ಯ, ಸಚಿವರ ಆಪ್ತ ಸಹಾಯಕ ಬಿ.ಬಸವರಾಜು, ಮುಖಂಡರಾದ ಶ್ರೀಕಂಠ, ಕಲಿಯೂರು ಶಿವಣ್ಣ, ಉಕ್ಕಲಗೆರೆ ರಾಜು, ಮಾವಿನಹಳ್ಳಿ ಕುಮಾರ, ಬನ್ನಹಳ್ಳಿಹುಂಡಿ ಉಮೇಶ್, ರಂಜಿತ್, ಜೆ.ಅನೂಪ್‌ಗೌಡ, ಎಂ.ಬಿ.ಸಾಗರ್ ಇತರರಿದ್ದರು.

> ಕಾಂಗ್ರೆಸ್ ಸರ್ಕಾರ ಪ.ಜಾತಿ ಒಳ ಮೀಸಲಾತಿ ಜಾರಿಗೆ ಮುಂದಾಗಿದ್ದು, ಉಪಸಮಿತಿಗೆ ಜವಾಬ್ದಾರಿ ನೀಡಿ, ಕಾನೂನು ತೊಡಕುಗಳನ್ನು ಸರಿಪಡಿಸಲು ಕಾಲಾವಕಾಶ ಕೇಳಿದೆ. ಜಾತಿವಾರು ಜನಗಣತಿ ನಡೆಸಲು ಆಯೋಗ ರಚಿಸಲಾಗಿದೆ. ಒಳ ಮೀಸಲು ಜಾರಿಗೆ ಸಂಬಂಧ ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಮಹದೇವಪ್ಪ ಅವರು ಸರ್ಕಾರದ ನಿಲುವನ್ನು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಅದಾಗಿಯೂ ಹೋರಾಟದ ನೆಪದಲ್ಲಿ ಪೋಷಿತ ಸಮುದಾಯಗಳ ನಡುವೆ ಕಂದಕ ಸೃಷ್ಟಿಸಿ, ಸಂಘರ್ಷ ತಂದಿಡುವ ಕೆಲಸವನ್ನು ಮಾಡುತ್ತಿರುವುದು ಸರಿಯಲ್ಲ.
> – ಸುನೀಲ್ ಬೋಸ್, ಸಂಸದ.

ಉತ್ತಮ ಜೀವನಕ್ಕೆ ದೈಹಿಕ, ಮಾನಸಿಕ ಆರೋಗ್ಯ ಅಗತ್ಯ



ಜಾಥಾಕ್ಕೆ ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಚಾಲನೆ ನೀಡಿದರು.

ಹೆಚ್.ಡಿ.ಕೋಟೆ, ಏ.8– ಮಾನವನ ಉತ್ತಮ ಜೀವನಕ್ಕೆ ದೈಹಿಕ, ಮಾನಸಿಕ ಆರೋಗ್ಯ ಅತ್ಯಗತ್ಯ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ವತಿಯಿಂದ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ನಡೆದ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆರೋಗ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ವಿಶ್ವ ಆರೋಗ್ಯ ಸಂಸ್ಥೆ ವತಿಯಿಂದ ಪ್ರತಿವರ್ಷ ವಿಶ್ವ ಆರೋಗ್ಯ ದಿನಾಚರಣೆ ಆಚರಿಸಲಾಗುತ್ತಿದೆ. ಈ ವರ್ಷ ಎಲ್ಲರಿಗೂ ಸಮಾನ ಆರೋಗ್ಯ ಎಂಬ ಘೋಷಣೆಯೊಂದಿಗೆ ವಿಶ್ವ ಆರೋಗ್ಯ ದಿನಾಚರಣೆ ಆಚರಿಸಲಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ ಆಹಾರದ ಮೂಲಕ ಬರುವ ರೋಗಗಳ ಕಾಳಜಿಯನ್ನು ವಿಷಯವನ್ನಾಗಿ ಆರಿಸಿಕೊಂಡಿದೆ. ಗದ್ದೆಯಿಂದ ತಟ್ಟೆಗೆ, ನಿಮ್ಮ ಆಹಾರ ಸುರಕ್ಷಿತವಾಗಿರಲಿ ಎಂಬುದು, ಲಾಭ ಮಾಡುವ ಗುರಿಯಿಂದ ಕೃತಕವಾಗಿ ಬೆಳೆಯನ್ನು ಪರಿವರ್ತಿಸುವ ರಾಸಾಯನಿಕ ಮತ್ತು ಇತರ ವಿಷಕಾರಿ ವಸ್ತುಗಳ ಬಗ್ಗೆ ಅರಿವು ಮೂಡಿಸುವುದು ಇದರ ಪ್ರಮುಖ ಗುರಿಯಾಗಿದೆ ಎಂದರು.

ವಿಶ್ವ ಆರೋಗ್ಯ ದಿನಾಚರಣೆಯನ್ನು ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ವಿವಿಧ ಸಂಘಟನೆಗಳು ನಡೆಸಿಕೊಡುತ್ತವೆ. ಈ ಕಾರ್ಯಕ್ರಮದ ಮೂಲಕ ಜನರಿಗೆ ಕಾಲ ಕಾಲಕ್ಕೆ ತೆಗೆದುಕೊಳ್ಳಬೇಕಾದ ಔಷಧಿ, ಕಾಪಾಡಬೇಕಾದ ನೈರ್ಮಲ್ಯ, ಸ್ವಚ್ಛತಾ ಅಭ್ಯಾಸಗಳು, ನೀರಿನ ಸಂರಕ್ಷಣೆ, ಪರಿಸರದ ಸ್ವಚ್ಛತೆ, ಮೊದಲಾದ ವಿಷಯಗಳ ಬಗ್ಗೆ ಮಾಹಿತಿ ನೀಡಲಾಗುವುದು ಎಂದರು.

ಈ ವೇಳೆ ವೈದ್ಯಾಧಿಕಾರಿಗಳಾದ ಡಾ.ಕೀರ್ತಿ, ಡಾ.ಚಂದ್ರಕಲಾ, ಡಿಹೆಚ್ಇಓ ಪದ್ಮಾವತಿ, ಆರೋಗ್ಯ ಇಲಾಖೆ ಸಿಬ್ಬಂದಿ ನಾಗೇಂದ್ರ, ರವಿರಾಜ್, ಅರಳಪ್ಪ, ಅಶೋಕ್, ನಾಗರಾಜು, ಉಮೇಶ್, ಪುಷ್ಪ, ಕೃಷ್ಣ, ಅರ್ಚನಾ, ರೇಖಾ, ಬಸವಮ್ಮ, ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿಗಳು, ಸಮುದಾಯ ಆರೋಗ್ಯ ಅಧಿಕಾರಿಗಳು ಇನ್ನಿತರರಿದ್ದರು.

ಮೈಸೂರು ಮಿತ್ರ



ಲಕ್ನೋ ರನ್ ಮಳೆಗೆ ಕೊಚ್ಚಿಹೋದ ಕೆಕೆಆರ್



ಕೋಲ್ಕತ್ತಾ, ಏ.8– ಮಿಚೆಲ್ ಮಾರ್ಷ್ ಹಾಗೂ ನಿಕೋಲಸ್ ಪೂರನ್ ಅವರ ಭರ್ಜರಿ ಅರ್ಧಶತಕದ ನೆರವಿನಿಂದ ಲಕ್ನೋ ಸೂಪರ್ ಜೈಂಟ್ಸ್ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 4 ರನ್‌ಗಳ ಭರ್ಜರಿ ಗೆಲುವು ಸಾಧಿಸಿತು.

ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 238 ರನ್ ಪೇರಿಸಿತು. 239 ರನ್‌ಗಳ ಬೃಹತ್ ಮೊತ್ತದ ಗುರಿ ಬೆನ್ನಟ್ಟಿದ ಕೋಲ್ಕತ್ತಾ ನೈಟ್ ರೈಡರ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 234 ರನ್ ಗಳಿಸಿ 4 ರನ್‌ಗಳಿಂದ ವಿರೋಚಿತ ಸೋಲು ಕಂಡಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕ್ವಿಂಟನ್ ಡಿಕಾಕ್ 15 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಸುನೀಲ್ ನರೇನ್ ಹಾಗೂ ನಾಯಕ ಅಜಿಂಕ್ಯಾ ರಹಾನೆ ಬಿರುಸಿನ ಬ್ಯಾಟಿಂಗ್ ನಡೆಸಿದರು. ಈ ಜೋಡಿ ಮೊದಲ 6 ಓವರ್‌ಗಳಲ್ಲಿ 90 ರನ್ ಕಲೆ ಹಾಕಿ ಕಠಿಣ ಗುರಿಯನ್ನು ಸುಲಭವಾಗಿ ಬೆನ್ನಟ್ಟುವ ಮುನ್ಸೂಚನೆ ನೀಡಿತು. ಆದರೆ 13 ಎಸೆತಗಳಲ್ಲಿ 2 ಸಿಕ್ಸರ್ ಒಳಗೊಂಡ 30 ರನ್ ಗಳಿಸಿ ನಿರ್ಗಮಿಸಿದರು. ನಂತರ 3ನೇ ವಿಕೆಟ್‌ಗೆ ಜೊತೆಯಾದ ರಹಾನೆ ಹಾಗೂ ವೆಂಕಟೇಶ್ ಅಯ್ಯರ್ 71 ರನ್ ಜೊತೆಯಾಟವಾಡಿದರು. ಆದರೆ ರಹಾನೆ 35 ಎಸೆತಗಳಲ್ಲಿ 8ಬೌಂಡರಿ, 2 ಸಿಕ್ಸರ್ ಒಳಗೊಂಡ 61ರನ್ ಗಳಿಸಿ ಔಟಾದರು. ಉಳಿದಂತೆ ವೆಂಕಟೇಶ್ ಅಯ್ಯರ್ 45, ಆಂಡ್ರೆ ರಸೆಲ್ 7, ಅಂಗ್‌ಕ್ರಿಶ್ ರಘುವಂಶಿ 5 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ರಿಂಕು ಸಿಂಗ್ 15 ಎಸೆತಗಳಲ್ಲಿ 6ಬೌಂಡರಿ, 2 ಸಿಕ್ಸರ್ ಒಳಗೊಂಡ ಬಿರುಸಿನ 38 ರನ್ ಗಳಿಸಿದರೇ, ಹರ್ಷಿತ್ ರಾಣಾ 10ರನ್ ಗಳಿಸಿದರು. ಲಕ್ನೋ ಪರ ಆಕಾಶ್ ದೀಪ್, ಶಾರ್ದೂಲ್ ಠಾಕೂರ್ ತಲಾ 2, ಆವೇಶ್ ಖಾನ್, ದಿಗ್ವೇಶ್ ಸಿಂಗ್ ರಾಥಿ, ರವಿ ಬಿಷ್ಣೋಯಿ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಪರ ಮೊದಲ ವಿಕೆಟ್‌ಗೆ ಐಡನ್ ಮಾರ್ಕ್ರಮ್ ಹಾಗೂ ಮಿಚೆಲ್ ಮಾರ್ಷ್ 99 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ 28 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಒಳಗೊಂಡ 47 ರನ್ ಗಳಿಸಿ ಮಾರ್ಕ್ರಮ್ ವಿಕೆಟ್ ಒಪ್ಪಿಸಿದರು. ಈ ವೇಳೆ ಮೈದಾನದ ಮೂಲೆ ಮೂಲೆಗೆ ಚೆಂಡನ್ನು ಅಟ್ಟಿದ ಮಾರ್ಷ್ 48 ಎಸೆತಗಳಲ್ಲಿ 5 ಸಿಕ್ಸರ್, 6 ಬೌಂಡರಿ ಒಳಗೊಂಡ 81ರನ್ ಗಳಿಸಿ ಭಾರಿ ಹೊಡೆತಕ್ಕೆ ಮುಂದಾಗಿ ಔಟಾದರು. ಮತ್ತೊಂದೆಡೆ ಮಿಂಚಿನ ಬ್ಯಾಟಿಂಗ್ ನಡೆಸಿದ ನಿಕೋಲಸ್ ಪೂರನ್ ಸಿಕ್ಸರ್‌ಗಳ ಸುರಿಮಳೆಗೈದರು. ಅಂತಿಮವಾಗಿ ಅವರು 36 ಎಸೆತಗಳಲ್ಲಿ 8 ಸಿಕ್ಸರ್, 7 ಬೌಂಡರಿ ಒಳಗೊಂಡ ಅಜೇಯ 87 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಕೆಕೆಆರ್ ಪರ ಹರ್ಷಿತ್ ರಾಣ 2, ರಸೆಲ್ 1 ವಿಕೆಟ್ ಪಡೆದರು. ನಿಕೋಲಸ್ ಪೂರನ್ ಪಂದ್ಯಪುರುಷ ಪ್ರಶಸ್ತಿ ಪಡೆದರು.

ಪ್ರಿಯಾಂಶ್ ಆರ್ಯ ಶತಕ: ಪಂಜಾಬ್‌ಗೆ ಗೆಲುವು

ಚಂಡೀಗಢ, ಏ.8– ಪ್ರಿಯಾಂಶ್ ಆರ್ಯ ಅವರ ಭರ್ಜರಿ ಶತಕದ ನೆರವಿನಿಂದ ಪಂಜಾಬ್ ಕಿಂಗ್ಸ್, ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 18 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ಮಹಾರಾಜ ಯಾದವೀಂದ್ರ ಸಿಂಗ್ ಅಂತರರಾಷ್ಟ್ರೀಯ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 219 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಪ್ರಿಯಾಂಶ್ ಆರ್ಯ ಆರ್ಯ ಬಿರುಸಿನ ಬ್ಯಾಟಿಂಗ್ ನಡೆಸಿ ಐಪಿಎಲ್ ಪಂದ್ಯಾವಳಿಯಲ್ಲಿ ಚೊಚ್ಚಲ ಶತಕ ಸಿಡಿಸಿದರು. ಆದರೆ 42 ಎಸೆತಗಳಲ್ಲಿ 9 ಸಿಕ್ಸರ್, 7 ಬೌಂಡರಿ ಒಳಗೊಂಡ 103 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅಂತಿಮ ಓವರ್‌ಗಳಲ್ಲಿ ಅಬ್ಬರಿಸಿದ ಶಶಾಂಕ್ ಸಿಂಗ್ 52, ಮಾರ್ಕೋ ಯಾನ್ಸನ್ 34 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಚೆನ್ನೈ ಪರ ಖಲೀಲ್ ಅಹಮ್ಮದ್, ಅಶ್ವಿನ್ ತಲಾ 2, ಮುಖೇಶ್ ಚೌಧರಿ, ನೂರ್ ಅಹಮ್ಮದ್ ತಲಾ ಒಂದೊಂದು ವಿಕೆಟ್ ಪಡೆದರು.



220 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸಿಎಸ್‌ಕೆ 20 ಓವರ್‌ಗಳಲ್ಲಿ 5ವಿಕೆಟ್ ನಷ್ಟಕ್ಕೆ 201ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ರಚಿನ್ ರವೀಂದ್ರ 36, ಡೆವೋನ್ ಕಾನ್ವೆ 69, ಶಿವಂ ದುಬೆ 42, ಧೋನಿ 27ರನ್ ಗಳಿಸಿದರು. ಪಂಜಾಬ್ ಪರ ಲೂಕಿ ಫರ್ಗೂಸನ್ 2, ಗ್ಲೇನ್ ಮ್ಯಾಕ್ಸ್‌ವೆಲ್, ಯಶ್ ಠಾಕೂರ್ ತಲಾ ಒಂದೊಂದು ವಿಕೆಟ್ ಪಡೆದರು. ಪ್ರಿಯಾಂಶ್ ಆರ್ಯ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಡೆಲ್ಲಿ	3	3	0	0	6
ಗುಜರಾತ್	4	3	1	0	6
ಬೆಂಗಳೂರು	4	3	1	0	6
ಪಂಜಾಬ್	4	3	1	0	6
ಲಕ್ನೋ	5	3	2	0	6
ಕೋಲ್ಕತ್ತಾ	5	2	3	0	4
ರಾಜಸ್ಥಾನ್	4	2	2	0	4
ಮುಂಬೈ	5	1	4	0	2
ಚೆನ್ನೈ	5	1	4	0	2
ಹೈದರಾಬಾದ್	5	1	4	0	2

ಇಂದಿನ ಪಂದ್ಯ

ಗುಜರಾತ್ ಟೈಟಾನ್
V/S
ರಾಜಸ್ಥಾನ್ ರಾಯಲ್ಸ್

ಸಮಯ: ಸಂಜೆ 7.30
ಸ್ಥಳ : ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವೀರ ಧೀರ ಶೂರನ್–2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮನದ ಕಡಲು (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಿಸ್ ಟೀಚರ್ (ಹಿಂ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ರಾಬಿನ್ ಹುಡ್ (ತೆ)	4 ಪ್ರದರ್ಶನಗಳು
ಸಂಗಂ	
ಸಿಕಂದರ್ (ಹಿಂ)	4 ಪ್ರದರ್ಶನಗಳು
ಲಿಡೋ	
ನಿಮ್ದೇ ಕಥೆ (ಕ–2), ಬೆಂಕಿಯ ಬಲೆ (ಕ–2)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.

ಸ್ಕ್ರೀನ್ 2 ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.

ಸ್ಕ್ರೀನ್ 3 ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.

ಸ್ಕ್ರೀನ್ 4 ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.

ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1 ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.

ಸ್ಕ್ರೀನ್ 2 ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.

ಸ್ಕ್ರೀನ್ 3 ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

'ಭೀಮೋತ್ಸವ' ಪೋಸ್ಟರ್ ಬಿಡುಗಡೆ



ಮೈಸೂರಿನ ಗಾಂಧಿನಗರದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಪ್ರಯುಕ್ತ ಹಮ್ಮಿಕೊಂಡಿರುವ 'ಭೀಮೋತ್ಸವ' ಅದ್ಧೂರಿ ಮೆರವಣಿಗೆಯ ಪೋಸ್ಟರ್ ಅನ್ನು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಡುಗಡೆ ಮಾಡಿದರು. ಗಾಂಧಿನಗರದ ಮುಖಂಡರಾದ ಶರತ್, ಸುರೇಶ್, ವಿಜಯ್, ಚಳುವಳಿ ರಂಗಸ್ವಾಮಿ, ಎಂ.ಎಸ್.ಪರಮಾನಂದ, ಚರಣ್, ರೂಪೇಶ್, ರಾಹುಲ್, ಜಯಪ್ರಕಾಶ್ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಜಯಪುರ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ
ಶಾಸಕ ಜಿ.ಟಿ.ದೇವೇಗೌಡರ ಬೆಂಬಲಿಗರ ಬಣ ಜಯಭೇರಿ



ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ ಜಿ.ಟಿ.ದೇವೇಗೌಡರ ನಿವಾಸದ ಆವರಣದಲ್ಲಿ ಜಯಪುರ ಕೃಷಿ ಪತ್ತಿನ ಸಹಕಾರ ಸಂಘದ ನೂತನ ನಿರ್ದೇಶಕರು ಜಿ.ಟಿ.ದೇವೇಗೌಡರನ್ನು ಸನ್ಮಾನಿಸಿದರು. ಇದೇ ವೇಳೆ ನೂತನ ನಿರ್ದೇಶಕರನ್ನು ಅಭಿನಂದಿಸಲಾಯಿತು.

ಮೈಸೂರು,ಏ.8(ಪಿಎಂ)– ಜಯಪುರ ಕೃಷಿ ಪತ್ತಿನ ಸಹಕಾರ ಸಂಘದ 12 ನಿರ್ದೇಶಕ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರ ಬೆಂಬಲಿಗರ ಬಣ 10 ಸ್ಥಾನಗಳಲ್ಲಿ ಜಯಭೇರಿ ಭಾರಿಸಿದೆ.

ಸದರಿ ಸಹಕಾರ ಸಂಘದ ನಿರ್ದೇಶಕರ ಸ್ಥಾನಗಳಿಗೆ ಫೆ.23ರಂದು ಚುನಾವಣೆ ನಡೆದಿತ್ತು. ನ್ಯಾಯಾಲಯದ ಆದೇಶದಂತೆ ಇಂದು ಮತ ಎಣಿಕೆ ಪ್ರಕ್ರಿಯೆ ನಡೆಸಲಾಯಿತು. ಜಿ.ಟಿ.ದೇವೇಗೌಡರ ಬೆಂಬಲಿಗರಾದ ಬಸಣ್ಣ (222 ಮತಗಳು), ಮಂಜುನಾಥ (221), ಅಭಿಷೇಕ್ (219), ಮರಿಸಿದ್ದೇಗೌಡ (217), ಕೆಂಪರಾಜು (209), ಭಾಗ್ಯಮ್ಮ (184), ಮಹದೇವಯ್ಯ (179), ರತ್ನಮ್ಮ (189), ರಂಗಸ್ವಾಮಿ (196) ಹಾಗೂ ಅಬ್ದುಲ್ ಮುತಾಲಿಬ್ 180 ಮತಗಳನ್ನು ಪಡೆದು ನಿರ್ದೇಶಕರಾಗಿ ಆಯ್ಕೆಯಾದರು.

ಫಲಿತಾಂಶ ಘೋಷಣೆ ಬಳಿಕ ಜಿ.ಟಿ. ದೇವೇಗೌಡರನ್ನು ಅವರ ನಿವಾಸದಲ್ಲಿ ಭೇಟಿಯಾದ ನೂತನ ನಿರ್ದೇಶಕರು, ಜಿ.ಟಿ. ದೇವೇಗೌಡರನ್ನು ಸನ್ಮಾನಿಸಿ ಸಂಭ್ರಮಿಸಿದರು. ಈ ವೇಳೆ ಮುಖಂಡ ರಾದ ಜಯಪುರ ಜವರನಾಯಕ, ನಾಗರಾಜು, ಬರಡನಪುರ ಬಸವಣ್ಣ, ಕೆಲ್ಲಹಳ್ಳಿ ಭೈರೇಶ್, ವಿಜಯ್ ಕುಮಾರ್, ದೂರ ಕುಮಾರ್, ಅರಸನಕೆರೆ ಪ್ರಭು, ಸ್ವಾಮಿ, ಶಿವಣ್ಣ, ನವೀನ್, ಕೀರ್ತಿ, ಮಹದೇವಪ್ಪ, ಮಹದೇವಸ್ವಾಮಿ, ನವೀನ್ ಮಾವಿನಹಳ್ಳಿ, ಅಂಕಪ್ಪ ಸೇರಿದಂತೆ ಹಲವರು ಹಾಜರಿದ್ದರು.

ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ತಾತ್ಕಾಲಿಕ ನಿಯೋಜನೆ ರದ್ದುಪಡಿಸಲು ಆದೇಶ

ಮೈಸೂರು, ಏ.8(ಎಸ್‌ಪಿಎನ್)– ಅನ್ಯ ಕಾರಣದ ನಿಮಿತ್ತ ನಿಯೋಜನೆ ಮೇರೆಗೆ ರಾಜ್ಯದ ವಿವಿಧ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ತಾತ್ಕಾಲಿಕ ನಿಯೋಜನೆಯನ್ನು ರದ್ದುಪಡಿಸುವಂತೆ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ ಸಂಬಂದಪಟ್ಟ ಜಿಲ್ಲಾ ಹಂತದ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

2024–25ನೇ ಸಾಲಿನ ಶೈಕ್ಷಣಿಕ ಅವಧಿಯ ಅಂತ್ಯದವರೆಗೆ ಕೆಲವು ಶಿಕ್ಷಕರನ್ನು ರಾಜ್ಯ ಸರ್ಕಾರ ತಾತ್ಕಾಲಿಕವಾಗಿ ಬೇರೆ ಶಾಲೆಗೆ ನಿಯೋಜಿಸಿತ್ತು. ಆದರೆ, ಕೆಲವು ಜಿಲ್ಲೆಗಳ ಉಪನಿರ್ದೇಶಕರು ಹಾಗೂ ಬಿಇಓಗಳು ನಿಯೋಜನೆ ಮೇಲಿರುವ ಶಿಕ್ಷಕರನ್ನು ಮಾರ್ಚ್ ಅಂತ್ಯಕ್ಕೆ ಕರ್ತವ್ಯದಿಂದ ಬಿಡುಗಡೆಗೊಳಿಸದಿರುವುದು ಗಮನಕ್ಕೆ ಬಂದಿದೆ.

ಅಲ್ಲದೆ, ಪ್ರಸ್ತುತ ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಕರ ನಿಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಆದೇಶಿಸಲಾಗಿದೆ.

ಈ ಹಿನ್ನಲೆಯಲ್ಲಿ ಅಂತಹ ಶಿಕ್ಷಕರನ್ನು ಕೂಡಲೇ ಶಾಲಾ ಕರ್ತವ್ಯದಿಂದ ಬಿಡುಗಡೆಗೊಳಿಸತಕ್ಕದ್ದು, ಬಿಡುಗಡೆಗೊಂಡ ಶಿಕ್ಷಕರು ಏ.9ರೊಳಗೆ ಮೂಲ ಶಾಲೆಗೆ ಕಡ್ಡಾಯವಾಗಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ಇಲ್ಲದಿದ್ದಲ್ಲಿ ಅಂತಹ ಶಿಕ್ಷಕರ ವೇತನವನ್ನು ಪಾವತಿಸದಂತೆ ಸೂಚಿಸಿದ್ದು, ತಪ್ಪಿದ್ದಲ್ಲಿ ಸಂಬಂಧಪಟ್ಟ ವೇತನ ಬಟಾವಾಡೆ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಬಿಡುಗಡೆಗೊಂಡ ಶಿಕ್ಷಕರ ಪಟ್ಟಿಯನ್ನು ಏ.17ರೊಳಗೆ ಕೇಂದ್ರ ಕಚೇರಿಗೆ ಕಳುಹಿಸತಕ್ಕದು ಎಂದು ಆಯುಕ್ತರು ತಿಳಿಸಿದ್ದಾರೆ.

ಫ್ರೀ ಸ್ಕೂಲ್ ಉದ್ಘಾಟನೆ...



ಮೈಸೂರಿನ ಜಯಲಕ್ಷ್ಮಿಪುರಂನಲ್ಲಿ ಜೂನಿಯರ್ ಟೋಸ್ ಫ್ರೀ ಸ್ಕೂಲ್ ಅನ್ನು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು. ಅಶ್ವಿನಿ ಪುನೀತ್ ರಾಜ್ ಕುಮಾರ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಲಲಿತಾ ಜಿ.ಟಿ.ದೇವೇಗೌಡ, ಸಂಸ್ಥೆಯ ಮುಖ್ಯಸ್ಥೆ ಅನ್ನಪೂರ್ಣ ಸೇರಿದಂತೆ ಹಲವರು ಭಾಗವಹಿಸಿದ್ದರು.

ಕೃಷಿ ಹೊಂಡದಲ್ಲಿ ಮುಳುಗಿ ಅಕ್ಕ–ತಂಗಿಯ ದಾರುಣ ಸಾವು

ಚಿಕ್ಕಬಳ್ಳಾಪುರ, ಏ.8– ಕೃಷಿ ಹೊಂಡದಲ್ಲಿ ಕಾಲು ಜಾರಿಬಿದ್ದು ಅಕ್ಕ ತಂಗಿ ಇಬ್ಬರು ದಾರುಣವಾಗಿ ಸಾವನ್ನಪ್ಪಿರುವ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು ತಾಲೂಕಿನ ಕುರಪ್ಪಲ್ಲಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರಾಧಾ(17), ಸಾಹಿತಿ(14) ಮೃತ ದುರ್ದೈವಿಗಳು. ಬೇಸಿಗೆ ರಜೆ ಇದ್ದ ಕಾರಣ ತಾಯಿಯ ಜೊತೆ ತೋಟದಲ್ಲಿ ಕೆಲಸ ಮಾಡುವಾಗ ಕೃಷಿ ಹೊಂಡಕ್ಕೆ ಅಳವಡಿಸಿದ್ದ ಪೈಪ್ ಸರಿ ಮಾಡಲು ಹೋಗಿ ಅಕ್ಕ ತಂಗಿ ಇಬ್ಬರು ಕಾಲು ಜಾರಿ ಬಿದ್ದಿದ್ದಾರೆ. ತಂದೆ ಇಲ್ಲದೇ ಇಬ್ಬರು ಮಕ್ಕಳೇ ಜೀವನಾಧಾರ ಅಂತ ಬದುಕು ಕಟ್ಟಿಕೊಂಡಿದ್ದ ತಾಯಿಯ ಆಕ್ರಂದನ ಈಗ ಮುಗಿಲುಮುಟ್ಟಿದೆ. ಚೇಳೂರು ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಏ.12ರಂದು ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಾಗಾರ

ಮೈಸೂರು,ಏ.8(ಪಿಎಂ)– ಪ್ರಕಾಶ್ ಪರ್ಫಾರ್ಮಿಂಗ್ ಆರ್ಟ್ಸ್ ಟ್ರಸ್ಟ್ ವತಿಯಿಂದ ದಿವಂಗತ ವಿದ್ವಾನ್ ಎ.ವಿ.ಪ್ರಕಾಶ್ ಅವರ ಸ್ಮರಣಾರ್ಥ ಏ.12ರಂದು 'ಧ್ವನಿ' ಶೀರ್ಷಿಕೆಯಡಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಾಗಾರ ಏರ್ಪಡಿಸಲಾಗಿದೆ.

ಮೈಸೂರಿನ ಶ್ರೀರಾಂಪುರದ 2ನೇ ಹಂತದ ನಾಯ್ಡು ಸ್ಟೋರ್ಸ್ ಹಿಂಭಾಗದ ಸೂರ್ಯ ಲೇಔಟ್‌ನ ನಂಬರ್ 33ರ ಕಟ್ಟಡದಲ್ಲಿ ಅಂದು ಬೆಳಗ್ಗೆ 11ರಿಂದ ವಿದ್ವಾನ್ ಅಭಿಷೇಕ್ ರಘುರಾವ್ ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಅಲ್ಲದೆ, ಮನೋಧರ್ಮ ಸಂಗೀತದ ಬಗ್ಗೆಯೂ ಅವರು ವಿವರಿಸಲಿದ್ದಾರೆ. ಸಂಗೀತ ವಿದ್ಯಾರ್ಥಿಗಳು, ಸಂಗೀತಾಸಕ್ತರು ಕಾರ್ಯಾಗಾರದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬಹುದು ಎಂದು ಟ್ರಸ್ಟ್ ಅಧ್ಯಕ್ಷ ಎ.ಪಿ.ಕೃಷ್ಣ ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಕೃತಕ ಗರ್ಭಧಾರಣೆಗೆ ಪೂಲಿಂಗ್ ವ್ಯವಸ್ಥೆ
ಕಡಿಮೆ ಅಂಡಾಣು ಹೊಂದಿರುವವರಿಗೂ ಮಗು ಪಡೆಯುವ ಅವಕಾಶ

ಮೈಸೂರು, ಏ.8(ಜಿಎ)– ಕಡಿಮೆ ಸಂಖ್ಯೆಯ ಅಂಡಾಣು ಹೊಂದಿರುವವರು ಸಹಾ ಕೃತಕ ಗರ್ಭಧಾರಣೆ ಮೂಲಕ ಮಗು ಪಡೆಯಲು ಸಾಧ್ಯವಾಗುವ ನಿಟ್ಟಿನಲ್ಲಿ ತಮ್ಮ ಮಣಿಪಾಲ್ ಆಸ್ಪತ್ರೆಯಲ್ಲಿ ಕೈಗೊಂಡಿರುವ ಭ್ರೂಣ ಪೂಲಿಂಗ್ ವ್ಯವಸ್ಥೆ ನೆರವಾಗಲಿದೆ. ಹೀಗಾಗಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಜನತೆ ಇದರ ಪ್ರಯೋಜನ ಪಡೆಯಬೇಕೆಂದು ಆಸ್ಪತ್ರೆಯ ಐವಿಎಫ್ ಘಟಕದ ಮುಖ್ಯಸ್ಥೆ ಡಾ.ನಿವೇದಿತಾ ಶೆಟ್ಟಿ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾನ್ಯವಾಗಿ 40 ವರ್ಷ ತಲುಪುತ್ತಿದ್ದಂತೆಯೇ ಮಹಿಳೆಯರಲ್ಲಿ ಅಂಡಾಣು ಉತ್ಪತ್ತಿ ಕಡಿಮೆ ಆಗುತ್ತದೆ. ಪರಿಸರದ ಪ್ರಭಾವ, ಆಹಾರ ಶೈಲಿ, ಕೆಲಸದ ಒತ್ತಡ, ಉದ್ಯೋಗ ಕಾರಣದಿಂದಾಗಿ ತಡವಾಗಿ ಮಗು ಬಯಸುವುದು, ವಿಳಂಬದ ವಿವಾಹ ಮೊದಲಾದವು ಸಹಾ ಇದಕ್ಕೆ ಕಾರಣವಾಗಲಿವೆ. ಇದೇ ವೇಳೆ ಸಾಂಪ್ರದಾಯಿಕ ವಿಧಾನದ ಇಂತಹವರಿಗೆ ಫಲಿತಾಂಶ ನೀಡುವ ಶೇಕಡಾಂಶ ಕಡಿಮೆ. ಹೀಗಾಗಿ ಈ ಎಂಬ್ರಿಯೋ ಪೂಲಿಂಗ್ ವ್ಯವಸ್ಥೆ ಮೂಲಕ ಹಲವಾರು ಬಾರಿ ಅಂಡಾಣು ಸಂಗ್ರಹಿಸಿ ಗರ್ಭಧಾರಣೆಗೆ ನೆರವಾಗಲಾಗುವುದು ಎಂದರು.

ಇದು ದಂಪತಿ ತಮ್ಮದೇ ವಂಶವಾಹಿಯ ಶಿಶು ಪಡೆಯಲು, ಹೆಚ್ಚಿನ ಯಶಸ್ಸಿನ ಪ್ರಮಾಣ, ಕಡಿಮೆ ವೆಚ್ಚ ಕಡಿಮೆ ಅಂಡಾಣು ಎಣಿಕೆ ಹೊಂದಿರುವ ಯುವ ವಯಸ್ಸಿನ ಮಹಿಳೆಯರಿಗೂ ಅನುಕೂಲ ಮೊದಲಾದ ಪ್ರಯೋಜನ ಹೊಂದಿದೆ. ಆದ್ದರಿಂದ ಆಸಕ್ತರು ಆಸ್ಪತ್ರೆಗೆ ಭೇಟಿ ನೀಡಿ ಸುಲಭವಾಗಿ, ಕೈಗೆಟಕುವ ರೀತಿಯಲ್ಲಿನ ಈ ವಿಧಾನದ ಮೂಲಕ ಸಂತಾನದ ಆಸೆ ಈಡೇರಿಸಿಕೊಳ್ಳಬಹುದಾಗಿದೆ ಎಂದು ಮನವಿ ಮಾಡಿದರು. ಆಸ್ಪತ್ರೆಯ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಉಪೇಂದ್ರ ಶೆಣೈ ಹಾಜರಿದ್ದರು.

ರಾಜ್ಯಾದ್ಯಂತ 208 ಆಂಗ್ಲ ಮಾಧ್ಯಮ ತರಗತಿ ಪ್ರಾರಂಭಕ್ಕೆ ಸರ್ಕಾರದ ಆದೇಶ

ಮೈಸೂರು, ಏ.8(ಎಸ್‌ಪಿಎನ್)– 2025–26ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪ್ರಸ್ತುತ ಕನ್ನಡ ಅಥವಾ ಇತರೆ ಮಾಧ್ಯಮಗಳ ಜೊತೆಗೆ ರಾಜ್ಯಾದ್ಯಂತ 208 ಆಂಗ್ಲ ಮಾಧ್ಯಮ (ದ್ವಿಭಾಷಾ) ತರಗತಿಗಳನ್ನು ಪ್ರಾರಂಭಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಜಂಟಿ ಕಾರ್ಯದರ್ಶಿ (ಸೇ–2) ಶಕುಂತಲಾ ಚೌಗಲಾ ಆದೇಶಿಸಿದ್ದಾರೆ

ರಾಜ್ಯದ 208 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 2025–26ನೇ ಸಾಲಿನಿಂದ ಪ್ರಸ್ತುತ 1ನೇ ತರಗತಿಯಿಂದ ನಡೆಯುತ್ತಿರುವ ಕನ್ನಡ ಅಥವಾ ಇತರೆ ಮಾಧ್ಯಮದ ಜೊತೆಗೆ ಹೊಸದಾಗಿ ಆಂಗ್ಲ ಮಾಧ್ಯಮ (ದ್ವಿ ಭಾಷಾ ಮಾಧ್ಯಮ) ತರಗತಿಗಳನ್ನು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರಾರಂಭಿಸಲು ಸರ್ಕಾರದ ಆದೇಶ ಸಂಖ್ಯೆಇಡಿ 109 ಯೋಯೋಕ 2018, ದಿನಾಂಕ:18.5.2019ರ ಆದೇಶದಲ್ಲಿನ ಷರತ್ತಿಗೊಳಪಟ್ಟು ಅನುಮತಿ ನೀಡಿದೆ.

ಈ ಹಿಂದೆ ಅನುಮತಿ ನೀಡಿತ್ತು: 2024–25ನೇ ಸಾಲಿನ ಅಯವ್ಯಯದ ಘೋಷಣೆಯಂತೆ 2 ಸಾವಿರ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ದ್ವಿಭಾಷಾ ಮಾಧ್ಯಮ(ಕನ್ನಡ ಮತ್ತು ಇಂಗ್ಲಿಷ್) ಶಾಲೆಗಳಾಗಿ ಪರಿವರ್ತಿಸಲಾಗುವುದು ಎಂದು ರಾಜ್ಯ ಸರ್ಕಾರ ಘೋಷಣೆ ಮಾಡಿತ್ತು.

ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿರುವ ಮತ್ತು ಅವಶ್ಯಕತೆ ಇರುವ ರಾಜ್ಯದ ಒಟ್ಟು 208 ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪ್ರಸ್ತುತ ಇರುವ ಮಾಧ್ಯಮದ ಜೊತೆಗೆ 2025–26ನೇ ಸಾಲಿನಿಂದ ದ್ವಿಭಾಷಾ ಮಾಧ್ಯಮ (ಆಂಗ್ಲ ಮಾಧ್ಯಮ) ತರಗತಿಗಳನ್ನು ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರಾರಂಭಿಸಲು ಅನುಮತಿ ಕೋರಿದ್ದ ಹಿನ್ನಲೆಯಲ್ಲಿ ಅನುಮತಿ ನೀಡಿದ್ದಾರೆ.

> ಮೈಸೂರು ಜಿಲ್ಲೆಯಲ್ಲಿ 5ಕ್ಕೂ ಹೆಚ್ಚು ಕನ್ನಡ ಶಾಲೆಗಳ ಜೊತೆಗೆ ಆಂಗ್ಲ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಲು ಶಿಫಾರಸ್ಸು ಮಾಡಲಾಗಿತ್ತು. ಇದಕ್ಕೆ ಅನುಮತಿ ನೀಡಿರುವ ಬಗ್ಗೆ ಕುರಿತು ಆಯುಕ್ತರ ಕಚೇರಿಯಿಂದ ಹೊರಡಿಸಿರುವ ಆದೇಶ ಕೈಸೇರಿಲ್ಲ.
> –ಜವರೇಗೌಡ, ಡಿಡಿಪಿಐ,

ಹಾಸನ ಜಿಲ್ಲೆಯ 22ಕ್ಕೂ ಹೆಚ್ಚು, ಕೊಡಗು ಜಿಲ್ಲೆಯ ವಿರಾಜಪೇಟೆಯ ತಿತಿಮತಿ, ಮಾಡೆಲ್ ಪೋಲಿಬೆಟ್ಟ, ಸೋಮವಾರ ಪೇಟೆಯ ಅಂಕನಹಳ್ಳಿ, ಮಂಡ್ಯ ಜಿಲ್ಲೆ ಕೆ.ಆರ್.ಪೇಟೆಯ ಆಲ್ಬಾಡಿ ಕಾವೆಲ್, ಮಳವಳ್ಳಿಯ ಧನಗೂರು (ಆರ್‌ಎಂಎಸ್‌ಎ), ಬೆಳಕವಾಡಿ, ಮಂಡ್ಯ ಉತ್ತರದ ಹುಲ್ಲೇನ ಹಳ್ಳಿ, ನಾಗಮಂಗಲದ ತಿ.ಚೆನ್ನಾಪುರ, ಶ್ರೀರಂಗಪಟ್ಟಣದ ಮೆಳಾಪುರ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಆಂಗ್ಲ ಮಾಧ್ಯಮ ತೆರೆಯಲು ಅನುಮತಿ ನೀಡಿದೆ.

ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆಯ ಅಂತರಸಂತೆ, ಮೈಸೂರು ಗ್ರಾಮಾಂತರದ ಯರಗನಹಳ್ಳಿ, ತಿ.ನರಸೀಪುರದ ಕೊಲತ್ತೂರು(ಆರ್‌ಎಂಎಸ್‌ಎ), ಅತ್ತಿಗೂಡು(ಆರ್‌ಎಂಎಸ್‌ಎ) ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ತೆರೆಯಲು ಅನುಮತಿ ನೀಡಿದೆ

> ಕಾಡಂಚಿನ ಕನ್ನಡ ಮಾಧ್ಯಮ ಶಾಲೆಗಳನ್ನು ಆಂಗ್ಲ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಿ, ಕಾಡಂಚಿನ ವಿದ್ಯಾರ್ಥಿಗಳಿಗೂ ಗುಣಮಟ್ಟದ ಶಿಕ್ಷಣ ಸಿಗುವಂತೆ ರಾಜ್ಯ ಸರ್ಕಾರ ಗಮನ ಹರಿಸಬೇಕು. ಈ ಸಂಬಂಧ ಕಾಡಂಚಿನ ಗ್ರಾಮಗಳಿಗೂ ವಿಸ್ತರಿಸುವಂತೆ ಶಾಲಾ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದು ಒತ್ತಾಯಿಸಲಾಗಿದೆ.
> - ಪ್ರಸನ್ನ, ರಾಜ್ಯ ಕಾರ್ಯದರ್ಶಿ ಜನ ಸಂಗ್ರಾಮ ಪರಿಷತ್

ವಿದ್ಯುತ್ ವ್ಯತ್ಯಯ

ಮೈಸೂರು,ಏ. 8– ನಾಳೆ (ಬುಧವಾರ) ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಅಜೀಜ್ ಸೇಠ್ ನಗರ, ಬಿ.ಡಿ ಆಸ್ಪತ್ರೆ, ಸುಲ್ತಾನ್ ರಸ್ತೆ 16, 15 ಮತ್ತು 10ನೇ ಕ್ರಾಸ್, ಬಿ.ಡಿ ಕಾಲೋನಿ, ಮಹದೇವಪುರ ಮುಖ್ಯ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

9ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 9 ವರ್ಷವಾದರೂ ಸದಾನಿಮ್ಮ ನೆನಪಿನಲ್ಲಿರುವ ಭಾಸ್ಕರ್ C ಮತ್ತು ಕುಟುಂಬವರ್ಗ

ಮಹಾ ಪರಿನಿರ್ವಾಣ – 9/4/16
L.K. ಚಿಕ್ಕಮಾಯಗಯ್ಯ
ಶಿಕ್ಷಕರು

ಮೈಸೂರು ಮಿತ್ರ
45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

7ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿ ಕುಟುಂಬ ವರ್ಗ

ಜನನ 23.6.1992
ನಿಧನ 09.04.2018

ಬಿ.ವಿ.ಸುಧೀಂದ್ರ ಗೌಡ ಬಿ.ಇ

ದುಃಖತಪ್ತರು: ತಂದೆ ವಿಜೇಂದ್ರ, ತಾಯಿ ಗಾಯತ್ರಿ, ಅಕ್ಕ–ಭಾವ ಮತ್ತು ಲಕ್ಷ್ಮಣಗೌಡರ ಕುಟುಂಬವರ್ಗದವರು, ಬಿಳಿಕೆರೆ, ಹುಣಸೂರು ತಾ॥

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2025ಕ್ಕೆ 45 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 46ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳು ಏಪ್ರಿಲ್ 10, 2025 ರೊಳಗೆ ತಲುಪುವಂತೆ ಮಾಡಲು ಕಳಕಳಿಯ ಮನವಿ.

ಪ್ರಧಾನ ಕಛೇರಿ

0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಆಂಥೋಣಿ ಡೋವ್: 8951668960
ಪ್ರೇಮಾ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು – ಪ್ರಸಾದ್, ಸೀತಾ ನಿಲಯ, ಮಡಿಕೇರಿ ರೇಂಜ್ ಫಾರೆಸ್ಟ್ ಹತ್ತಿರ, ಹೊಸ ಬಡಾವಣೆ, ಮಡಿಕೇರಿ 9731469871

ಮಂಡ್ಯ – ಕೆ. ಮೋಹನ್‌ರಾಜ್ 8762960325

ಶ್ರೀರಂಗಪಟ್ಟಣ – ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234

ಹುಣಸೂರು – ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಕಲ್ಕುಣಿಕೆ, ಹುಣಸೂರು. 9448720626

ಚಾಮರಾಜನಗರ – ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657

ಟಿ.ನರಸೀಪುರ – ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590

ಗುಂಡ್ಲುಪೇಟೆ – ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 9845995426

ಕೆ.ಆರ್. ನಗರ – ಮಂಜುನಾಥ, ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345

ಮಳವಳ್ಳಿ – ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806

ಕೊಳ್ಳೇಗಾಲ – ಎಸ್.ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಹುರುಳಿಕೇರಿ ಬೀದಿ, ಕೊಳ್ಳೇಗಾಲ 9916621007

ಹಾಸನ – ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175

ಕುಶಾಲನಗರ – ರಘು ಹೆಬ್ಬಾಳೆ, ಮೈಸೂರು ಮಿತ್ರ ರಿಪೋರ್ಟರ್ C/o ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401

ಜಯಪುರ – ಬಿಳಿಗಿರಿ, ಜಯಪುರ 9945479288

ಪಿರಿಯಾಪಟ್ಟಣ – ವಿರೇಶ್, ಪಿರಿಯಾಪಟ್ಟಣ 8660057128

ವಿರಾಜಪೇಟೆ – ಮಂಜುನಾಥ, ವಿರಾಜಪೇಟೆ 9900949353

ಯಳಂದೂರು – ವಿ.ನಾಗರಾಜು, ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು 9844349191

ಕೆ.ಆರ್.ಪೇಟೆ – ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438

ಹೆಚ್.ಡಿ.ಕೋಟೆ – ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452

ಕೆ.ಎಂ.ದೊಡ್ಡಿ – ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338

ನಂಜನಗೂಡು – ರಂಗಸ್ವಾಮಿ, ನಂ.4565, ಕೆಬಿಹಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226

ಹುಣಸೂರು – ಹೆಚ್.ಆರ್. ಕೃಷ್ಣಕುಮಾರ್ (ಆನ್ ಡಾಮಿನೇಷ), ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ, ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093

ಕೊಳ್ಳೇಗಾಲ – ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ.ಎಸ್. ಈಶ್ವರ್ ಬಿನ್. ಎಸ್.ಎಲ್. ಶ್ರೀಪತಿರವರು ಕೆಳಗಿನ ಅನುಸೂಚಿಯಲ್ಲಿರುವ ಸ್ವತ್ತನ್ನು ಶ್ರೀಮತಿ. ಮರಮ್ಮ ಕೋಂ. ಲೇಟ್ ಮರ ಲಿಂಗೇಗೌಡ, ಸದರಿಯವರ ಮಕ್ಕಳುಗಳಾದ ಶ್ರೀ.ಲಿಂಗಣ್ಣ, ಶ್ರೀ.ಶಂಕರ.ಬಿ ಮತ್ತು ಶ್ರೀಮತಿ. ಯಶೋಧಮ್ಮರವರುಗಳಿಂದ ಖರೀದಿ ಕರಾರು ಆಸಕ್ತ ಬಾಧ್ಯರಾಗಿರುತ್ತಾರೆ.
ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಕ್ರಯ, ದಾನ, ಭೋಗ್ಯ, ಅಡಮಾನ ಅನುವಂಶೀಯತೆ, ಲೀಜ್, ಪಾಲುದಾರಿಕೆ, ವಾರಸ ಪತ್ರವಾಗಿ ಅಥವಾ ಮತ್ಯಾವುದೇ ರೀತಿಯಲ್ಲಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಅಥವಾ ಆಸಕ್ತಿ ಹೊಂದಿದ್ದಲ್ಲಿ ಸದರಿ ಪ್ರಕ್ರಿಯೆ ನನ್ನ ಈ ಕೆಳಗಿನ ವಿಳಾಸಕ್ಕೆ ದಾಖಲಾತಿಗಳೊಂದಿಗೆ ಈ ದಿನದಿಂದ 4 ದಿನಗಳ ಒಳಗಾಗಿ ಸಂಪರ್ಕಿಸಲು ತಿಳಿಸಿದೆ. ತಪ್ಪಿದಲ್ಲಿ ಯಾವುದೇ ವ್ಯಕ್ತಿಗಳಿಗೂ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವ ಆಸಕ್ತಿ ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ.

ಅನುಸೂಚಿ ಸ್ವತ್ತು

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ವರಕೋಡು ಗ್ರಾಮಕ್ಕೆ ಸೇರಿದ ಜಮೀನಿನ ಸರ್ವೇ ನಂ.104/1ರ ಪೈಕಿ 1 ಎಕರೆ 13 ಗುಂಟೆ ಮತ್ತು ಸರ್ವೇ ನಂ.104/4ರ ಪೈಕಿ 1 ಎಕರೆ 15 ಗುಂಟೆ ಒಟ್ಟು ವಿಸ್ತೀರ್ಣ 3 ಎಕರೆ 8 ಗುಂಟೆಗಳ ಸ್ವತ್ತು.

ಐಟಂ ನಂ.1
ಸರ್ವೇ ನಂ. 104/1ರ ಚೆಕ್ಕುಬಂದಿ:– ಪೂರ್ವಕ್ಕೆ: ಸರ್ವೇ ನಂ.104/2ರ ಸ್ವತ್ತು, ಪಶ್ಚಿಮಕ್ಕೆ: ಸರ್ವೇ ನಂ.104/3ರ ಸ್ವತ್ತು, ಉತ್ತರಕ್ಕೆ: ಸರ್ವೇ ನಂ.106 & 107ರ ಸ್ವತ್ತು, ದಕ್ಷಿಣಕ್ಕೆ : ಸರ್ವೇ ನಂ.104/4ರ ಸ್ವತ್ತು

ಐಟಂ ನಂ.2
ಸರ್ವೇ ನಂ. 104/4ರ ಚೆಕ್ಕುಬಂದಿ:– ಪೂರ್ವಕ್ಕೆ: ಶ್ರೀ.ಮಾದಿ ಮಾದೇಗೌಡರವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ ಕೆರೆ, ಉತ್ತರಕ್ಕೆ: ಶ್ರೀ.ಕೆಂಪೇಗೌಡರವರ ಜಮೀನು, ದಕ್ಷಿಣಕ್ಕೆ ಕೆರೆ. ಒಟ್ಟು ವಿಸ್ತೀರ್ಣ : 3 ಎಕರೆ 8 ಗುಂಟೆ

ಸಹಿ/- ವಿನಯ್. ವಿಜ್. ಚಂದ್ರಶೇಖರ್,
ವಕೀಲರು #1208/A, CH-31/A,
1ನೇ ಮಹಡಿ, ನಲ್ಲ ಕಾಂಪ್ಲೆಕ್ಸ್ ಅರಸ್ ರಸ್ತೆ,
ಬಿಷ್ಣಪ್ಪ ಪೆಟ್ರೋಲ್ ಬಂಕ್ ಎದುರು,
ಮೈಸೂರು–570005. ಮೊ: 9986139767
ದಿ: 08-04-2025, ಸ್ಥಳ: ಮೈಸೂರು